


Mahāmahopādhyāya DR. B. N. K. SHARMA Commemoration Volume
FIRST DEATH ANNIVERSARY - JULY 2006, MUMBAI
History of the Dvaita School of Vedānta and its Literature
Philosophy of Śrī Madhvācārya
B.N.K. SHARMA
THE BRAHMASUTRAS AND THEIR PRINCIPAL COMMENTARIES
A CRITICAL EXPOSITION
B.N.K. SHARMA
डॉ. भवानी नारायणराव कृष्णमूर्ति शर्मा
MADHVA'S AUPANISADAM DARSANAM
Dr. B.N.K. SHARMA
ADVAITASIDDHI Vs
An up to date Critical
PART - I
09-06-1909 ------ 02-07-2005
न्यायसुधा
NYAYASUDHA
OF
JAYATIRTHAMUNI
Rendered into English
By Dr. B. N. K. SHARMA
SRI RAGHAVENDRA ASHRAMA
KARNATAK UNIVERSITY
DHARWAR


Mahāmahopādhyāya, Āsthāna Vidvān,
Madhvamunipriya, Dvaita-vedāntarasajna

DR. B. N. K. SHARMA
FIRST DEATH ANNIVERSARY
COMMEMORATION VOLUME



Śrī KṚṢṆA
Uḍupi

"विष्णोः सर्वोत्तमत्वं
तु
सर्वदा प्रतिपादय।"



Śri MADHVĀCĀRYA
Pājaka



DR. B. N. K. SHARMA

Conceived, Edited and Published by

Dr. Sudhindra K. Bhavani
M.A., Ph.D., Dip. Edu. Mngt.
Rtd. Principal & Head, Dept. of Sanskrit,
K. J. Somaiya College of Arts & Commerce,
Vidyavihar, Mumbai - 400 077.

July, 2006

MM. DR. B. N. K. SHARMA FIRST DEATH ANNIVERSARY COMMEMORATION VOLUME

Edited & Published by : Dr. S. K. Bhavani,
4/2, Shah Bldg.,
Bhagat Road,
Mumbai - 400 016.
✆ 022 - 24310035

Printed at : Navin Printers,
Near Ruparel College,
Matunga Road West,
Mumbai - 400 016.
✆ 022 - 24308316

Pages : **viii + 189**

For Private Circulation Only

July 2006

CONTENTS

PART III : REPORTS

PART IV : PICTORIAL VIEW

PART V : LIST OF PUBLICATIONS

PART VI : LIST OF CONTRIBUTORS

Dedicated to

All the distinguished forerunners and predecessors of

Dr. B. N. K. Sharma

who had made their valuable contributions

to the study and exposition of

Madhva Śāstra.

CORRECTIONS & LONG FORMS

Page	Line	Read	For
i	2	Dvaita-vedanta.....	Dvaita vedanta.....
25	L.6	ನಿರಂಕುಶ	ನಿರುಕುಶ
	L.14	ವಿದ್ಯಾಲಯಕ್ಕೆ	ವಿದಾಯಲಯಕ್ಕೆ
30	Last	ಶ್ಲೋಕಗಳೇ	ಶೋಕಗಳೇ
41	L.3	have	has
99	L.15	it	its
	R.2	manageable	manageble
147	R.5	my	may
179	R.2	Bhandarkar Oriental Research Institute	BORI
	R.8	Indian Historical Quarterly	IHQ
180	R.9	Quarterly Journal of Mythic Society	QJMS
181	R.2	Akhila Bharata Madhva Mahamandala	ABMM
	R.19	Sriman Madhva Siddhant-Onnahini	SMSO
184	20	Purandar S. Bhavani	Purandar K. Bhavani

EDITOR'S NOTE

July, 2006 completes one year of my revered parents' - Mm. Dr. B.N.K. Sharma (2nd July) and Matusri Hemalatabai (29th July) - *Akṣayyapuṇyalokaprapti* i.e. attaining the eternal meritorious abode of Lord Viṣṇu. Dr. Sharma had continuously engaged himself in Vedantic studies until his last breath with intellectual support from his life-partner for 72 years. He strove especially to bring out, highlight and firmly re-establish the unique and unparelleled features of Madhva Vedanta as conveyed in Sri Vyasatirtha's famous verse *Śriman Madhvamate* quoted elsewhere in this volume. It will thus be in the fitness of things to pay our sincere homage to this great modern author of epochmaking standard classical works through this booklet containing scholarly write-ups on different aspects of Vedanta literature so dear to his heart. To my mind, this is the befitting way to express our gratitude and commemorate Dr. Sharma's cherished legacy to the world of scholarship.

I am satisfied with the response my letter of request for write-ups from Svamijis / Scholars / admirers has received. Many have penned fresh articles for this volume on subjects concerning Veda-Vedanta while a few chose to deal with various phases of Dr. Sharma's life and achievements. To give the Volume a personal touch, I have added a pictorial view of his journey through the years. I hope the volume will be interesting for readers who are linguists as Dr. Sharma himself wrote in these languages (Sanskrit, Kannada, English and Tamil).

Scores of my parents' admirers, friends, relatives, well wishers, apart from institutions and Pithadhipatis of various Mutts had condoled their passing away either by personal visits or letters and also through internet e-mails. I am quoting here just one typical e-mail condolence message from Vishwa Madhva Sangha @yahoogroups.com -

"It is with deep regret we announce the passing away of Mahamahopadhyaya Dr. B.N.K. Sharma to our Vishwa Madhva Sangha members throughout the world. Dr. Sharma was the doyen in Madhva Philosophy in our times, and throughout his long years of existence, he had tirelessly worked for the cause of Madhva Philosophy, through his writings, speeches, interactions with academics both in the East and in the West. He was instrumental in bringing to light our Madhva Philosophy beyond the confines of strict shastric circles within India and placed our Madhva Philosophy as a beacon to the rest of the world.

His writings are a class by themselves, exemplified by sharpness in intellect, academic accuracy and the conviction to spread satya, the truth.

We offer our humble prayers to our Lord Sri Hari and Prana Devaru for sadgati to this great soul."

I am grateful to all the above Sahṛdayas and institutions for expressing their feelings of admiration and respects to the departed as also to the Svamijis for their prayers to grant *Sadgati* to the noble souls. I am indebted to all of them. My sincere thanks also are due to all the scholarly contributors to this Volume for promptly acceding to my request by their positive response. They have done so due to their unstinted affection and loyalty (Pontiffs excluded) towards Dr. Sharma. I am beholden to them. I also thank all my family members for their cooperation in this task. The proprietors and staff of Navin Printers have done an excellent job in seeing this through the press. They deserve kudos for this.

Hope my esteemed parents will be pleased with this small *Jnānakārya* of their son and accept the humble offering at their heavenly abode. I conclude this note with the oft repeated quote of my father viz :

'Nahīndirārādhyapado Mukundo
Dūrvānkurair Mandadhanair apūjyaḥ'

Prin. Dr. S. K. BHAVANI

Mahim
29th July, 2006

Part I

HOMAGE & EULOGY

॥ अनुग्रहसंदेशः ॥

व्यासाय भवनाशाय श्रीशाय गुणराशये।
हृद्याय शुद्धविद्याय मध्वाय च नमो नमः॥

कोलव्यासहयग्रीवपदाब्जपरिसेवकः।
भाविवायुर्वादिराजः कल्पद्रुः कामदोऽस्तु नः॥

आस्थानविदुषां कोच्चिमध्वरायाचार्यमहोदयानां दौहित्राः, तेषामेव शिष्यवरेण्यानां श्री बि. एस. नारायणाचार्याणां पुत्ररत्नं श्री बि. एन. कृष्णमूर्तिशर्मेति प्रथिता विद्वदग्रण्या अद्भुतप्रतिभाशालिनः असाधारणमेधाविनश्चासन्। इमे महानुभावा अध्ययने कुशलाः, अध्यापकानां प्रेष्ठशिष्याः, अध्यापने चतुराः शिष्यचित्तापहारकाश्च। तिरुवय्यार् संस्कृतमहाविद्यालयस्य तथा अस्माकं श्रीमध्वसिद्धान्तप्रबोधिनीमहापाठशालायाश्च प्रांशुपालपदवीमारुढा अन्वर्थनामानः सर्वदा सहोद्योगिनां अविस्मरणीयाः। अण्णामलै विश्वविद्यालये, कर्नाटक विश्वविद्यालये च संस्कृतप्राध्यापकास्तथा मुम्बयीस्थरुपरेल्महा-विद्यालयस्य संस्कृतार्धमागधीविभागस्य प्रधानाचार्याश्च एते सर्वत्र स्वपदवीमलंचक्रुः।

न केवलमिमे वाग्विदां वराः। लेखने च पटवः। पञ्चविंशत्यधिकग्रन्थकर्तारश्च। तत्रापि द्वैतवेदान्तेतिहासः साहित्यं चेति शिरोनाम्ना लिखितोऽयं ग्रन्थः मध्वसिद्धान्तस्य विश्वकोषः संवृत्तः। पूर्वाग्रहपीडितैः पाश्चात्य संशोधकैः पौरस्त्यविमर्शकैश्च मध्वसिद्धान्तोपरि आविष्कृताविमर्शसुन्दराणां दोषाणां निरसने बद्धदीक्षितैरेतैः सार्धशतप्रबन्धाः पत्रिकासु प्रकटिताः। तत्र द्वैतवेदान्तः निर्दुष्टः सर्वोत्कृष्टश्चेति समर्थितश्च। मध्वसिद्धान्तस्य जीवातुभूता न्यायसुधाद्युद्ग्रन्था एभिः आंग्लभाषायामनूदिताः। एवं विद्वत्तल्लजैरेतैः द्वैतवेदान्तः सर्वत्र प्रसृतः पूजितश्च।

बहुश्रुतानामेतेषां सुपुत्रः सुधीन्द्रशर्मा भवानी मातापित्रोः प्रथमसांवत्सरिक पुण्यतिथौ स्वपितृपादानां श्रीकृष्णमूर्तिशर्मणां यशोबिम्बं दर्शयितुं संस्मरणिकादर्पणमेकं विधाय प्रकाशकर्मणि प्रवृत्तः। तस्य मनोरथाः पूर्णाःसन्तु। संस्मरणिका चेयं पण्डितमान्या यथार्थपरिचयात्मिका च भवत्विति अस्मदुपास्यं श्रीवादिराज-मध्वाराध्यं श्रीभूवराहं, श्रीहयास्यं, श्रीवेदव्यासं श्रीकृष्णं च प्रार्थयामहे। तथा श्री भाविसमीरवादिराजप्रतिष्ठितमुख्यप्राणं, श्रीवादिराजगुरून्, श्रीभूतराजं च प्रणम्य आशास्महे।

इति नारायणस्मरणानि।

श्री विश्वोत्तमतीर्थश्रीपादाः।
श्रीविष्णुतीर्थाचार्य संस्थानम्,
श्रीसोदेवादिराजमठः

॥ श्रीभवानीकृष्णमूर्तिशर्ममहोदयानां प्रशस्तिः ॥

(पद्यप्रसूनाञ्जलिः)

- पण्डित आनन्दतीर्थ शर्मा

श्रीमध्वदेवसिद्धान्तवियद्विष्णुपदीधरः ॥
श्रीकृष्णमूर्तिशर्माऽसौ विद्वद्वन्द्यो विराजते ॥ १॥

गोपालकृष्णपादाब्जमकरन्दमिलिन्दराट् ।
निर्मत्सरःश्रीभवानी कृष्णमूर्तिर्विराजते ॥ २॥

जयन्ति सन्ततं सन्तो विष्णुभक्ता महोज्ज्वलाः।
श्रीमध्वशास्त्रसम्पन्नाः कृष्णमूर्तिमहोदयाः ॥ ३॥

धन्यो ज्ञानवयोवृद्धो वदान्यः सुगुणोज्ज्वलः॥
श्रीकृष्णमूर्तिशर्मा श्रीविष्णुलोके महीयते ॥ ४॥

श्रीमदानन्दतीर्थार्यकरुणारसपोषितः॥
श्रीकृष्णमूर्तिशर्मा श्रीविष्णुलोके महीयते ॥ ५॥

श्रीमध्वशास्त्रनलिनीमकरन्दबिन्दु-
सन्धारणाय भुवि नूतनगन्धवाहः।
दिक्सुन्दरीरविरलैरुदितैः समन्ताद्
व्याख्यापरीमलभरैः सुरभीकरोति ॥ ६॥

वागीश्वरीपदसरोजपरागपूग-
सम्मार्जनादिव विनिर्मलतामुपेते॥
यस्यान्तरङ्गमुकुरे प्रतिबिम्बितश्रीः
श्रीकृष्णमूर्तिरनिशं प्रमदं तनोति ॥ ७॥ युग्मम् ॥

आबाल्यतोऽनुदिवसं गुरुसन्निधानाद्
अन्तःसमुन्मिषितमङ्गलबुद्धिदीपः॥
मार्गान् प्रकाशयति यो विषमान् प्रकामं
श्रीकृष्णमूर्तिरनिशं प्रतिभाति लोके ॥ ८॥

पापौघध्वान्तविध्वंसभास्करायितविग्रहः॥
श्रीकृष्णमूर्तिशर्मा श्रीविष्णुलोके महीयते ॥ ९॥

विस्मृताया माध्वरीतेः समुद्धर्ता प्रयत्नतः॥
विश्वस्मिन् राजते धन्यः कृष्णमूर्तिरहो! बुधाः!
॥ १०॥

यस्य जीवनमादर्शो यस्य कार्यं महत्तरम् ॥
स एव पुण्यवान् मान्यः कृष्णमूर्तिरहो! बुधाः!
॥ ११॥

महोज्ज्वलगुणो धन्यः प्रख्यातो नरभारती॥
निर्मत्सरः श्रीभवानीकृष्णमूर्तिरहो! बुधाः! ॥ १२॥

ज्ञानेन कान्त्या यशसा श्रियाच
श्रीकृष्णमूर्तिः प्रथितः किलायम्॥
विभाति लोके महितप्रकाशः
प्रवर्तितो दीप इव प्रदीपात् ॥ १३॥

विद्याविज्ञानसम्पन्नौ सौम्यौ जायापती सदा॥
धन्यौ तौ श्रीहेमलताकृष्णमूर्तिमहोदयौ ॥ १४॥

अज्ञाननिद्राविद्राणसुप्रभातप्रभाकरौ॥
दम्पती श्रीहैमलताकृष्णमूर्तिमहोदयौ ॥ १५॥

विराजेते विष्णुलोके नारायणपरायणौ॥
दम्पती श्रीहेमलताकृष्णमूर्तिमहोदयौ ॥ १६॥

वाणी पीयूषकल्पा श्रुतिविषयगुणा मध्वशास्त्रानुशिष्टा,
वेषः शिष्टानुजुष्टो धवलपटयुतः सौम्यशान्तस्वभावः॥
मार्गो देवानुगीतो मुनिजनसुमतो धर्मशास्त्रानुकूलो
विद्यन्ते कस्य लोके वदत बुधवराः! कृष्णमूर्तेः परस्य?
॥ १७॥

विज्ञो वदान्यो वाग्मी च वेदवेदाङ्गवित्तमः॥
श्रीकृष्णमूर्तिशर्मा श्रीविष्णुलोके विराजते ॥ १८॥

यः सारस्वतवैभवेन धनवान् शास्त्रौघसिंधुर्महान्,
स्तुत्यो बुद्धिमतामशेषसुधियां यः सम्मतः सर्वदा।
यस्य स्वागतकामना हृदि शुभे जागर्ति विद्यावतां,
सोऽयं प्राज्ञवरो विभाति सततं श्रीकृष्णमूर्तिः सुधीः
॥ १९॥

ज्ञानवृद्धो वयोवृद्धः सपत्नीको गुणोज्ज्वलः।
श्रीकृष्णमूर्तिशर्माऽसौ विष्णुलोके महीयते ॥ २०॥

ದ್ವೈತಸಿದ್ಧಾಂತದ ಧ್ರುವತಾರೆ ಡಾ|| ಬಿ. ಎನ್. ಕೆ. ಶರ್ಮ

- ಡಾ|| ಡಿ.ಎನ್. ಶಾನಭಾಗ

ಇಪ್ಪತ್ತನೆಯ ಶತಮಾನದ ದ್ವೈತ ಸಿದ್ಧಾಂತದ ಆಧುನಿಕ ವಿದ್ವಾಂಸರನ್ನು ತೀರ್ಮಾನಿಸಲು ದಕ್ಷ ಹಾಗೂ ನಿಪುಣ ವಿದ್ವಾಂಸರು ಮತ್ತು ಸಂಶೋಧಕರನ್ನೊಳಗೊಂಡ ಮಂಡಳಿಗೆ ಒಪ್ಪಿಸಿದರೆ, ಮಂಡಳಿಯಿಂದ ಹೊರಬರುವ ತೀರ್ಪು - ಡಾ|| ಬಿ.ಎನ್.ಕೆ. ಶರ್ಮ! ದ್ವೈತ ಸಿದ್ಧಾಂತದ ತತ್ವಗಳನ್ನು ಅಧಿಕೃತವಾಗಿ, ಪ್ರತಿಯೊಬ್ಬರ ಮನಮುಟ್ಟುವಂತೆ, ಆಂಗ್ಲ ಭಾಷೆಯಲ್ಲಿ ಪ್ರತಿಪಾದಿಸುವ ಸಮರ್ಥ ಬರಹಗಾರರನ್ನು ಗುರುತಿಸಲು ಭಾರತೀಯ ತತ್ವಜ್ಞಾನದ ಸಮಕಾಲೀನ ಗ್ರಂಥಕರ್ತರ ತಂಡಕ್ಕೆ ಒಪ್ಪಿಸಿದರೆ, ದೊರಕುವ ನಿಸ್ಸಂಧಿಗ್ಧವಾದ ಉತ್ತರ - ಡಾ|| ಬಿ.ಎನ್.ಕೆ. ಶರ್ಮ! ತತ್ವಾನ್ವೇಷಣೆಯಲ್ಲಿ ತನ್ನನ್ನು ತೊಡಗಿಸಿಕೊಂಡ ಒಬ್ಬ ಜಿಜ್ಞಾಸು ಮಧ್ವ ಸಿದ್ಧಾಂತದ ಸೂಕ್ಷ್ಮಾತಿಸೂಕ್ಷ್ಮ ಅಂಶಗಳನ್ನು ಆಂಗ್ಲ ಭಾಷೆಯ ಮಾಧ್ಯಮದಲ್ಲಿ ಅರಿತುಕೊಳ್ಳಲು ಯಾರ ಮೊರೆ ಹೋಗಬೇಕು ಎಂದರೆ - ಅವರೇ ಡಾ||ಬಿ.ಎನ್.ಕೆ. ಶರ್ಮ!

ಇಂತಹ ಮಹತ್ತರವಾದ ಕೀರ್ತಿಗೆ ಪಾತ್ರರಾದ, ಅಂತರ್ರಾಷ್ಟ್ರೀಯ ಖ್ಯಾತಿಯ ಡಾ|| ಬಿ.ಎನ್.ಕೆ. ಶರ್ಮ ಇನ್ನಿಲ್ಲ. ಜಗತ್ತಿನ ಸತ್ಯವನ್ನು ಎತ್ತಿ ತೋರಿಸುವ ಮಧ್ವ ಸಿದ್ಧಾಂತದ ತತ್ತ್ವಗಳನ್ನು ಇಂಗ್ಲೀಷ್ ಭಾಷೆಯಲ್ಲಿ ಜಗತ್ತಿನ ಮೂಲೆ ಮೂಲೆಗೆ ಬಿತ್ತರಿಸಿದ ಡಾ|| ಬಿ.ಎನ್.ಕೆ. ಶರ್ಮ ನಮ್ಮನ್ನೆಲ್ಲ ಅಗಲಿ ಹೋದುದು ವೈಚಾರಿಕ ಪ್ರಪಂಚಕ್ಕೆ ತುಂಬಲಾರದ ನಷ್ಟ. ಡಾ|| ಶರ್ಮ ದ್ವೈತ ಸಿದ್ಧಾಂತದ ಆಂಗ್ಲ ನಿಘಂಟು ಎಂದರೆ ಅತಿಶಯೋಕ್ತಿಯಾಗಲಾರದು.

ಜೂನ್ 9, 1909 ರಂದು ಜನಿಸಿದ ಡಾ|| ಶರ್ಮ ಸಾಹಿತ್ಯ ಸೇವೆಯನ್ನು ತಮ್ಮ 22ನೆಯ ಎಳೆಯ ವಯಸ್ಸಿನಲ್ಲಿಯೇ ಆರಂಭಿಸಿ, 1931ರಲ್ಲಿಯೇ ದ್ವೈತ ಸಿದ್ಧಾಂತಕ್ಕೆ ಸಂಬಂಧಿಸಿದಂತೆ ಸಂಶೋಧನಾತ್ಮಕ ಲೇಖನಗಳನ್ನು ಬರೆಯ ತೊಡಗಿದರು. ಆಗಿನ ಕೊಚ್ಚಿ ಸಂಸ್ಥಾನದ ರಾಜಗುರುಗಳಾದ ಪಂಡಿತ ರಂಗಪ್ಪಾಚಾರ್ಯರ ಉತ್ತಮ ಪರಂಪರೆಯನ್ನು ಹೊಂದಿದ ಡಾ|| ಶರ್ಮ, ತಮ್ಮ ತಾತಂದಿರಾದ ಕೊಚ್ಚಿ ಮಧ್ವರಾಯಾಚಾರ್ಯರಿಂದ ಸಂಸ್ಕೃತ ಸಾಹಿತ್ಯ ಹಾಗೂ ತತ್ತ್ವಜ್ಞಾನದ ತಳಹದಿಯನ್ನು ಹೊಂದಿದವರು. ಕುಂಭಕೋಣದ ಪ್ರಸಿದ್ಧ ವಿದ್ವಾಂಸರಾದ ಶ್ರೀ ಎಂ. ರಾಮರಾವ್ ಅವರಿಂದ ತತ್ತ್ವಜ್ಞಾನದ ಬುನಾದಿಯು ಭದ್ರಗೊಂಡಿತು. ಕುಂಭಕೋಣದಲ್ಲಿಯೇ ಶಾಲಾ ಹಾಗೂ ಕಾಲೇಜು ವಿದ್ಯಾಭ್ಯಾಸವನ್ನು ಪೂರೈಸಿ ಕಲಾ ವಿಭಾಗದ ಇಂಟರ್ ಮೀಡಿಯೆಟ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ಮುಂದೆ ಈಗಿನ ಚೆನ್ನೈ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪ್ರವೇಶವನ್ನು ಸ್ವೀಕರಿಸಿ, ನ್ಯಾಯ ವೈಶೇಷಿಕ ಹಾಗೂ ಭಾರತ-ಯುರೋಪ್ ಸಂಬಂಧಿಸಿದ ಭಾಷಾಶಾಸ್ತ್ರದಲ್ಲಿ ತುಲನಾತ್ಮಕ ಅಧ್ಯಯನವನ್ನು ವಿಶೇಷ ವಿಷಯಗಳನ್ನಾಗಿ ಆಯ್ದುಕೊಂಡು ಸಂಸ್ಕೃತದಲ್ಲಿ ಆನರ್ಸ್ ಕೋರ್ಸ್‌ನ್ನು ಉಚ್ಚ ದ್ವಿತೀಯ ಶ್ರೇಣಿಯಲ್ಲಿ ಪೂರ್ಣಗೊಳಿಸಿದರು.

ಚಿದಂಬರಂನ ಅಣ್ಣಾಮಲೈ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಉಪನ್ಯಾಸಕನಾಗಿ ತಮ್ಮ ವೃತ್ತಿಯನ್ನು ಪ್ರಾರಂಭಿಸಿದ ಡಾ|| ಶರ್ಮ, 1931 ರಿಂದ 1942ರ ವರೆಗೆ ವಿಶ್ವವಿದ್ಯಾಲಯದಲ್ಲಿ ಸೇವೆಯನ್ನು ಸಲ್ಲಿಸಿ, ನಂತರ ಆರು ವರ್ಷಗಳ ಕಾಲ ತಿರುವೈಯಾರಿನ ಪ್ರತಿಷ್ಠಿತ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರಾಗಿ 1942 ರಿಂದ 1948ರ ವರೆಗೆ ಕಾರ್ಯ ನಿರ್ವಹಿಸಿದರು. ಡಾ|| ಶರ್ಮ ಪಂಜಾಬಿನ ವಿಶ್ವೇಶ್ವರಾನಂದ ವೇದಿಕ್ ರಿಸರ್ಚ್ ಇನ್‌ಸ್ಟಿಟ್ಯೂಟನಲ್ಲಿ ಸಂಶೋಧಕ ವಿದ್ವಾಂಸರಾಗಿಯೂ, ಉಡುಪಿಯ ಸಂಸ್ಕೃತ ಕಾಲೇಜಿನ ಹಾಗೂ ಕುಮಟಾದ ಕೆನರಾ ಕಾಲೇಜಿನ (ಈಗಿನ ಡಾ|| ಎ. ವಿ. ಬಾಳಿಗಾ ಕಾಲೇಜ್ ಆಫ್ ಆರ್ಟ್ಸ್ ಆ್ಯಂಡ್ ಸಾಯನ್ಸ್) ಪ್ರಿನ್ಸಿಪಾಲರಾಗಿಯೂ,

ಧಾರಾವಾಡದ ಕೆ. ಇ. ಬೋರ್ಡ್ಸ್ ಕಾಲೇಜ್ (ಈಗಿನ ಜೆ.ಎಸ್.ಎಸ್. ಕಾಲೇಜ್)ನ ಸಂಸ್ಕೃತ ಗೌರವ ಪ್ರಾಧ್ಯಾಪಕರಾಗಿ, ಅನಂತರ 1953ರಿಂದ ಮುಂಬಯಿಯ ರೂಪರೇಲ್ ಕಾಲೇಜಿನ ಸಂಸ್ಕೃತ ವಿಭಾಗದ ಮುಖ್ಯಸ್ಥರಾಗಿ, 1969ರಲ್ಲಿ ನಿವೃತ್ತಿ ಹೊಂದುವವರೆಗೂ ಸೇವೆ ಸಲ್ಲಿಸಿದರು. 1948ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದಿಂದ ಸಂಸ್ಕೃತದಲ್ಲಿ Ph.D. ಹಾಗೂ 1968ರಲ್ಲಿ ಮುಂಬಯಿ ವಿಶ್ವವಿದ್ಯಾಲಯದಿಂದ D.Litt. ಡಿಗ್ರಿಯನ್ನು ಪಡೆದರು.

ಅನಂತರ ಡಾ|| ಶರ್ಮರು ತಮ್ಮ ಸಾಕಷ್ಟು ಸಮಯವನ್ನು ದ್ವೈತ ಸಿದ್ಧಾಂತವನ್ನು ಕುರಿತ ಗ್ರಂಥ ರಚನಾ ಕಾರ್ಯಕ್ಕೆ ವಿನಿಯೋಗಿಸಿದರು. "The Brahmasutras & their Principal Commentaries (A Critical exposition)"- ಇದು ಅವರ ಅತ್ಯದ್ಭುತ ಗ್ರಂಥ. ಡಾ|| ಶರ್ಮರಿಗೆ ವಿಶ್ವಮಾನ್ಯತೆಯನ್ನು ತಂದು ಕೊಟ್ಟ ಕೃತಿ. ಮೂರು ಸಂಪುಟಗಳಲ್ಲಿ ಪ್ರಕಟವಾದ ಈ ಗ್ರಂಥದ ಮಹತ್ವವನ್ನು ವಿವರಿಸುತ್ತಾ, ಗ್ರಂಥ ಪ್ರಕಾಶಕರಾದ ಮುಂಬೈನ ಭಾರತೀಯ ವಿದ್ಯಾಭವನದ ಗೌರವ ನಿರ್ದೇಶಕ ಡಾ|| ಜೆ. ಎಚ್. ದವೆಯವರು "ಕ್ರಿ.ಶ. 1890ರಲ್ಲಿ ಜಾರ್ಜ್ ಥಿಬಾಟ್‌ರ, ಶಂಕರಾಚಾರ್ಯ ಹಾಗೂ ರಾಮಾನುಜಾಚಾರ್ಯರ ಭಾಷ್ಯಗಳ ಪ್ರಥಮ ವಿಶ್ಲೇಷಣೆ ಮತ್ತು ಮೂರು ದಶಕಗಳ ನಂತರ ಅಧ್ಯಯನದ ವ್ಯಾಪ್ತಿಯನ್ನು ನಿಂಬಾರ್ಕಾಚಾರ್ಯ, ಮಧ್ವಾಚಾರ್ಯ ಹಾಗೂ ವಲ್ಲಭಾಚಾರ್ಯರ ವ್ಯಾಖ್ಯಾನಗಳಿಗೆ ವಿಸ್ತರಿಸಿದ ಭಾರತೀಯ ವಿದ್ವಾಂಸ ಡಾ|| ವಿ. ಎಸ್. ಘಾಟೆಯವರ ನಂತರ, ಅತ್ಯಂತ ವಿಸ್ತೃತ ಹಾಗೂ ಆಳವಾದ ವಿದ್ವತ್ಪೂರ್ಣ ವಿಶ್ಲೇಷಣೆಯನ್ನು ಜಗತ್ತಿನ ವಿದ್ವಾಂಸರ ಮುಂದೆ ಪ್ರತಿಪಾದಿಸಿದ ದಿಟ್ಟ, ಧೀಮಂತ ವ್ಯಕ್ತಿ ಡಾ|| ಬಿ.ಎನ್.ಕೆ ಶರ್ಮ" ಎಂದು ಹಾಡಿ ಹೊಗಳಿದ್ದಾರೆ.

ಡಾ|| ದವೆಯವರು ತಮ್ಮ ವಿವರಣೆಯನ್ನು ಮುಂದುವರೆಸುತ್ತಾ ಸಂಸ್ಕೃತದ ಸುಪ್ರಸಿದ್ಧ ಪ್ರಾಧ್ಯಾಪಕ ಡಾ||ಬಿ.ಎನ್.ಕೆ. ಶರ್ಮ ಪ್ರಾಚೀನ ಪರಂಪರೆಯ ಉತ್ತಮ ವಾತಾವರಣದಲ್ಲಿ ರೂಪುಗೊಂಡು, ಆಧುನಿಕ ಪಾಂಡಿತ್ಯದ ಉತ್ತಮ ಅಂಶಗಳನ್ನು ಮೈಗೂಡಿಸಿಕೊಂಡು, ಸಮಕಾಲೀನ ವಿದ್ವಾಂಸರ ಮಧ್ಯದಲ್ಲಿ ಮಾಧ್ವಸಂಪ್ರದಾಯದ ಸುಪ್ರಸಿದ್ಧ ಪಂಡಿತ ಹಾಗೂ ಗ್ರಂಥಕರ್ತರಾಗಿ ಬೆಳೆದು ನಿಂತು, ವೈಚಾರಿಕ ಪ್ರಪಂಚವನ್ನು ಪ್ರವೇಶಿಸಿ, ತಮ್ಮ ಈ ಗ್ರಂಥದ ಮೂಲಕ ಸೂತ್ರ ಹಾಗೂ ಭಾಷ್ಯಗಳ ಅಧ್ಯಯನಕ್ಕೆ ಹೊಸ ಚೈತನ್ಯವನ್ನು ನೀಡಿದ್ದಾರೆ."

"ಡಾ|| ಶರ್ಮರ ಈ ಗ್ರಂಥವು, ಮನೋಹರವಾದ ಆದರೆ ಅಷ್ಟೇ ಅತ್ಯಂತ ಕ್ಲಿಷ್ಟವಾದ ಬ್ರಹ್ಮಸೂತ್ರಗಳು ಹಾಗೂ ಸುಪ್ರಸಿದ್ಧ ಆಚಾರ್ಯರ ವ್ಯಾಖ್ಯಾನಗಳು, ಪ್ರಖ್ಯಾತ ಶಿಷ್ಯರ ಟೀಕೆ-ಟಿಪ್ಪಣಿಗಳು, ಇವುಗಳ ಆಂಗ್ಲ ಭಾಷೆಯಲ್ಲಿ ಸೃಜನಾತ್ಮಕ ಹಾಗೂ ವಿಮರ್ಶಾತ್ಮಕ ಅಧ್ಯಯನಕ್ಕೆ ಹೊಸ ಸಂಪ್ರದಾಯವನ್ನು ಹುಟ್ಟು ಹಾಕಿದೆ. ಅವರ ಈ ಅದ್ಭುತ ಕೃತಿಯು ತತ್ತ್ವಜ್ಞಾನದ ವಿಷಯದಲ್ಲಿ ಭಾರತೀಯರು ಹಾಗೂ ಇಂಗ್ಲೀಷ್ ಭಾಷೆಯನ್ನೊಳಗೊಂಡ ವಿದೇಶೀಯ ಭಾಷೆಗಳಲ್ಲಿ ರಚಿಸಲ್ಪಟ್ಟ ಹಿಂದಿನ ಎಲ್ಲ ಕೃತಿಗಳನ್ನು ವಿಷಯದ ವ್ಯಾಪ್ತಿ, ಗಹನತೆ, ಗಾಂಭೀರ್ಯ, ಭಾವ ಮತ್ತು ತಾತ್ಪರ್ಯ ಮುಂತಾದ ಎಲ್ಲ ಅಂಶಗಳಲ್ಲೂ ಮೀರಿ ನಿಂತಿದೆ. ಈ ಗ್ರಂಥವು ಮುಂಬರುವ ಅನೇಕ ವರ್ಷಗಳಲ್ಲಿ, ದೇಶ ವಿದೇಶದ ಜಿಜ್ಞಾಸುಗಳಿಗೆ ಅಧ್ಯಯನ ಯೋಗ್ಯ ಹಾಗೂ ಉಲ್ಲೇಖನಾಯೋಗ್ಯ ಗ್ರಂಥವಾಗಿ, ವೇದಾಂತ ವಿಷಯದಲ್ಲಿ ಉಚ್ಚಮಟ್ಟದ ಅಧ್ಯಯನಕ್ಕೆ ಅತ್ಯಂತ ಸಹಾಯಕ ಗ್ರಂಥವಾಗಿ ಪರಿಣಮಿಸುವುದರಲ್ಲಿ ಯಾವ ಸಂಶಯವಿಲ್ಲ" ಎಂದು ಡಾ||ಬಿ.ಎನ್.ಕೆ. ಶರ್ಮರ ಪಾಂಡಿತ್ಯ ಹಾಗೂ ಸಾಧನೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

ಮದ್ರಾಸ್‌ನ ಪ್ರೆಸಿಡೆನ್ಸಿ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ ಡಾ।। ಶರ್ಮರು, ಪಾಶ್ಚಾತ್ಯ ವಿದ್ವಾಂಸರಾದ ಕೀಥ್, ಮ್ಯಾಕ್ಡೊನೆಲ್, ಶ್ರೇಡರ್ ಮತ್ತು ಭಾರತೀಯ ವಿದ್ವಾಂಸರಾದ ಡಾ।। ರಾಧಾಕೃಷ್ಣನ್ ಮುಂತಾದವರ ಕೃತಿಗಳಿಂದ ಆಕರ್ಷಿತರಾದರು. ಅವರ ಪಾಂಡಿತ್ಯ, ಪ್ರತಿಭೆಗಳಿಗೆ ಮನಸೋತರು. ಆದರೆ ಭಾರತೀಯ ತತ್ತ್ವಜ್ಞಾನ ಕುರಿತು ಭಾರತೀಯ ಹಾಗೂ ಪಾಶ್ಚಾತ್ಯ ವಿದ್ವಾಂಸರಿಂದ ರಚಿಸಲ್ಪಟ್ಟ ಕೃತಿಗಳು ವೇದಾಂತದ ವಿವಿಧ ಸಿದ್ಧಾಂತಗಳನ್ನು ವಿಶ್ಲೇಷಿಸುವಾಗ, ಪ್ರಮುಖ ಸಿದ್ಧಾಂತವಾದ ದ್ವೈತ ಸಿದ್ಧಾಂತಕ್ಕೆ ತಕ್ಕ ಸ್ಥಾನ-ಮಾನವನ್ನು ಕೊಡದೆ, ನಿರ್ಲಕ್ಷಿಸಿರುವುದನ್ನು ಗಮನಿಸಿ ತುಂಬ ವ್ಯಥೆಗೊಂಡರು. ಶ್ರೀ ಮಧ್ವಾಚಾರ್ಯರ ತತ್ತ್ವವಾದ ಸೈದ್ಧಾಂತಿಕ ಮೌಲ್ಯ ಮತ್ತು ಆಚಾರ್ಯರ ಅಪ್ರತಿಮ ಪ್ರತಿಭೆಯನ್ನು ಜಗತ್ತಿನ ವಿವಿಧ ಭಾಷೆಯ ವಿದ್ವಜ್ಜನರಿಗೆ ಪ್ರಕಟಪಡಿಸುವುದನ್ನೇ ತಮ್ಮ ಜೀವನದ ಗುರಿಯನ್ನಾಗಿಟ್ಟುಕೊಂಡು ಕಾರ್ಯೋನ್ಮುಖರಾದರು. ಜಗದ್ಗುರು ಶ್ರೀಮಧ್ವಾಚಾರ್ಯರ ಸಿದ್ಧಾಂತವು ಯಾವುದೇ ಒಂದು ವರ್ಗ ಅಥವಾ ಪಂಗಡಕ್ಕೆ ಸೀಮಿತ, ಸಂಕುಚಿತ ಮನೋಭಾವದ ಧರ್ಮವಾಗಿರದೆ, ಗಹನವಾದ ವಿಶ್ಲೇಷಣೆಗಳಿಂದ ಯುಕ್ತವಾದ, ಅತ್ಯಂತ ಉಚ್ಚಮಟ್ಟದ ತತ್ತ್ವರತ್ನಗಳಿಂದ ಶೋಭಾಯಮಾನವಾದ, ಜಗನ್ಮಾನ್ಯ ಸಿದ್ಧಾಂತವಾಗಿದೆ ಎಂದು ತಮ್ಮ ಹರಿತವಾದ, ವಿದ್ವತ್ಪೂರ್ಣ ಹಾಗೂ ನಿಸ್ಸಂದಿಗ್ಧ ವಾಕ್ಯಗಳಿಂದ ಆಂಗ್ಲ ಭಾಷೆಯ. ಮಾಧ್ಯಮದಲ್ಲಿ ಸಮರ್ಥ ರೀತಿಯಿಂದ ಪ್ರತಿಪಾದಿಸಿ ತತ್ತ್ವಜ್ಞಾನದ ಪ್ರಪಂಚದಲ್ಲಿ ಮಧ್ವಸಿದ್ಧಾಂತವನ್ನು ಎತ್ತಿ ಹಿಡಿದರು.

ಡಾ।।ಬಿ.ಎನ್.ಕೆ. ಶರ್ಮರ ಪಾಂಡಿತ್ಯ, ಪ್ರತಿಭೆ ಹಾಗೂ ಸಾಧನೆಯನ್ನು ಕುರಿತು, ದೇಶ ವಿದೇಶೀ ಮೂಲದ ಪಂಡಿತರು ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ. ''ಕಳೆದ ಅರ್ಧಶತಮಾನದ ಅವಧಿಯಲ್ಲಿ ದ್ವೈತ ಸಿದ್ಧಾಂತಕ್ಕಾಗಿ ಆಂಗ್ಲ ಭಾಷೆಯ ಮಾಧ್ಯಮದಲ್ಲಿ ನೀವು ಸಲ್ಲಿಸಿದ ಸೇವೆಗೆ ಹೋಲುವ ಸೇವೆ ಯಾರಿಂದಲೂ ಆಗಿಲ್ಲ. ನಿಮ್ಮ ಹೆಸರು ದ್ವೈತ ಸಿದ್ಧಾಂತ ಇತಿಹಾಸದಲ್ಲಿ ಚಿರಸ್ಥಾಯಿಯಾಗಿರುತ್ತದೆ'' ಎಂದು ಉಡುಪಿ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಶ್ಲಾಘಿಸಿದರೆ, ಬಿಹಾರದ ಪೂರ್ವ ರಾಜ್ಯಪಾಲ ಶ್ರೀ ಆರ್.ಆರ್. ದಿವಾಕರರು ಡಾ।। ಶರ್ಮರ, ದ್ವೈತ ಸಿದ್ಧಾಂತ ಕುರಿತು ಸಮಗ್ರ ಹಾಗೂ ತುಲನಾತ್ಮಕ ಅಧ್ಯಯನವನ್ನು ಪ್ರಶಂಸಿಸಿದ್ದಾರೆ. ವಿದೇಶೀ ಮೂಲದ ವಿದ್ವಾಂಸರಾದ ಪ್ರೊ।। ಎಲ್. ಸ್ಟ್ಯಾಫೋರ್ಡ್ ಬೆಟ್ಟಿ ಹಾಗೂ ಪ್ರೊ।। ಜೋಸ್ ಪೆರಿರಾ ''ಮಧ್ವಾಚಾರ್ಯರ ವಿಚಾರಗಳ ಅರಿವು ಡಾ।। ಶರ್ಮರಿಂದ ಉಂಟಾಯಿತು, ಹಾಗೂ ಮಧ್ವಾಚಾರ್ಯರ ವಿಚಾರಗಳನ್ನು ಪ್ರಚಾರಮಾಡುವ ಸ್ಫೂರ್ತಿ ದೊರಕಿತು'' ಎಂದು ಪ್ರಶಂಸಿಸಿದ್ದಾರೆ. ವಾಶಿಂಗ್ಟನ್ನಿನ ಪ್ರೊ।। ಕಾರ್ಲ್ ಎಚ್. ಪಾಟರ್‌ರು, ಡಾ।। ಶರ್ಮರು ತಾವು ಏಕಾಂಗಿಯಾಗಿ ಮಧ್ವಾಚಾರ್ಯರ ಹಾಗೂ ಅವರ ಶಿಷ್ಯ ಸಮೂಹದ ಗಹನವಾದ ವಿಶ್ಲೇಷಣೆಯನ್ನು ಮಾಡಿ, ಅವರ ಪಾಂಡಿತ್ಯದ ಅರಿವನ್ನು ಉಂಟು ಮಾಡಿದ್ದಾರೆ, ಎಂದು ಶ್ಲಾಘಿಸಿದ್ದಾರೆ. ಡಾ।। ಶರ್ಮರ ''Nyayasudha of Sri Jayatirtha'' ಎಂಬ ಗ್ರಂಥವನ್ನು ಕುರಿತು ಶ್ರೀಮದುತ್ತರಾದಿ ಮಠದ ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರು ''ದ್ವೈತ ವೇದಾಂತ ಸಾಹಿತ್ಯದಲ್ಲಿ ಹಿಮಾಲಯದಂತಿರುವ ಶ್ರೀಮನ್ನ್ಯಾಯಸುಧಾ ಗ್ರಂಥದ ಭಾವವನ್ನು ಇಂಗ್ಲೀಷ್ ಭಾಷಾ ಮಾಧ್ಯಮದಲ್ಲಿ ತಮ್ಮ ಈ ಕೃತಿಯಲ್ಲಿ ಸಂಗ್ರಹಿಸಿರುವುದು ಡಾ।। ಶರ್ಮರ ಒಂದು ಅದ್ವಿತೀಯ ಸಾಧನೆ'' ಎಂದು ಪ್ರಶಂಸೆ ಮಾಡಿದ್ದಾರೆ.

ಡಾ।। ಬಿ.ಎನ್.ಕೆ ಶರ್ಮರ ಸಾಧನೆಯನ್ನು ಗುರುತಿಸಿ ಅವರಿಗೆ ಸಂದ ಗೌರವ, ಪ್ರಶಸ್ತಿ ಸನ್ಮಾನಗಳು ಅನೇಕ. 1963ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ, 1992ರಲ್ಲಿ ಭಾರತದ ರಾಷ್ಟ್ರಾಧ್ಯಕ್ಷರಿಂದ, 1993 ರಲ್ಲಿ ಮಹಾರಾಷ್ಟ್ರ ಸರ್ಕಾರದಿಂದ ಸನ್ಮಾನಿತರಾಗಿ ಮುಂದೆ 1996ರಲ್ಲಿ

ಸರ್ವಪ್ರಥಮ ಶ್ರೀ ವಿದ್ಯಾಮಾನ್ಯ ಪ್ರಶಸ್ತಿ, 1999ರಲ್ಲಿ ಮಹಾ-ಮಹೋಪಾಧ್ಯಾಯ ಪ್ರಶಸ್ತಿಗೆ ಪಾತ್ರರಾದರು. 2002ರಲ್ಲಿ ಶ್ರೀ ಉತ್ತರಾದಿ ಮಠದ 'ಸತ್ಯಾತ್ಮಕನ್‌ವೆನ್ಶನ್' (ಮುಂಬಯಿ) ಪ್ರಶಸ್ತಿ, ವ್ಯಾಸಮಧ್ವ ಸೇವಾ ಪ್ರಶಸ್ತಿ, 2004ರಲ್ಲಿ ಶ್ರೀರಾಘವೇಂದ್ರ ಅನುಗ್ರಹ ಪ್ರಶಸ್ತಿ ಹೀಗೆ ಇನ್ನೂ ಅನೇಕ ಪ್ರಶಸ್ತಿ ಹಾಗೂ ಗೌರವಗಳನ್ನು ತಮ್ಮ ಮಡಿಲಿಗೆ ಹಾಕಿಕೊಂಡ ಡಾ॥ಶರ್ಮರ ಕೀರ್ತಿ ಅಪಾರ. ತಮ್ಮ ಸುದೀರ್ಘ ಸಾಧನೆಯ ಹಾದಿಯಲ್ಲಿ ಡಾ॥ ಶರ್ಮರು ಅನೇಕ ವಿದ್ಯಾರ್ಥಿಗಳನ್ನು ಉತ್ತೇಜಿಸಿ ಪೋಷಿಸಿದ್ದಾರೆ. ಪ್ರೊ॥ಕೆ.ಟಿ. ಪಾಂಡುರಂಗಿಯವರು ಹಾಗೂ ಡಾ॥ಡಿ.ಎನ್. ಶಾನಭಾಗರು ಕೂಡ ಡಾ॥ ಶರ್ಮರಿಂದ ಸ್ಫೂರ್ತಿಯನ್ನು ಪಡೆದು ದ್ವೈತ ವೇದಾಂತದ ಸಂಶೋಧನದಲ್ಲಿ ನಿರತರಾಗಿ ಅದ್ಭುತವಾದ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಹಾಗೆಯೇ ಅವರ ಸುಪುತ್ರರಾದ ನಿವೃತ್ತ ಸಂಸ್ಕೃತ ಪ್ರಧಾನ ಪ್ರಾಧ್ಯಾಪಕರೂ, ಪ್ರಾಂಶುಪಾಲರೂ, ವಾಗ್ಮಿಗಳೂ, ಗ್ರಂಥಕರ್ತರೂ ಆದ ಡಾ. ಎಸ್.ಕೆ. ಭವಾನಿಯವರೂ ಮತ್ತು ಮೈಸೂರಿನ ಡಾ. ಬಿ. ಬಿ. ಕುಲಕರ್ಣಿಯವರೂ ತಮ್ಮದೇ ಆದ ರೀತಿಯಲ್ಲಿ ಡಾ. ಶರ್ಮಾರವರಿಗೆ ಗುರುಕಾಣಿಕೆಯನ್ನು ಸಲ್ಲಿಸುತ್ತಿದ್ದಾರೆ.

ಇಪ್ಪತ್ತೈದಕ್ಕೂ ಮೀರಿದ ಉತ್ಕೃಷ್ಟ ಕೃತಿಗಳಿಗೆ ಗ್ರಂಥಕರ್ತರಾಗಿ, 150ಕ್ಕೂ ಮೇಲ್ಪಟ್ಟು ಸಂಶೋಧನಾತ್ಮಕ ಪ್ರಬಂಧಗಳನ್ನು ನೀಡಿ, ದ್ವೈತ ವೇದಾಂತದ ವಿಶ್ಲೇಷಣಾತ್ಮಕ ಅಧ್ಯಯನವನ್ನೇ ಮುಖ್ಯ ಗುರಿಯಾಗಿಟ್ಟುಕೊಂಡು 97 ವರ್ಷದ ಸಾರ್ಥಕ ಜೀವನವನ್ನು ನಡೆಸಿ, ಜುಲೈ 2, 2005 ರಂದು ಇಹಲೋಕ ವ್ಯಾಪಾರವನ್ನು ಮುಗಿಸಿದರು. ಆಧುನಿಕ ಬೆಡಗಿನ ಜೀವನದಲ್ಲೂ ಆಚಾರ್ಯರ ವಾದವನ್ನು ಆಧುನಿಕ ಭಾಷೆಯಲ್ಲೇ ಪ್ರತಿಪಾದಿಸುವ ಸಮರ್ಥ ವಿಚಾರವಾದಿ ಡಾ॥ ಶರ್ಮರ ಸ್ಮರಣೆ ನಮಗೆಲ್ಲರಿಗೂ ಸ್ಫೂರ್ತಿದಾಯಕ. ದ್ವೈತ ಸಿದ್ಧಾಂತದಲ್ಲಿ ತೋರುವ ನಿಷ್ಠೆಯು ಅವರಿಗೆ ನಾವು ತೋರುವ ಗೌರವ.

(ಈ ಬರಹವನ್ನು ಪ್ರಸಿದ್ಧ ಧಾರ್ಮಿಕ-ಸಾಂಸ್ಕೃತಿಕ ಮಾಸಪತ್ರಿಕೆ 'ಪರಿಮಳ'ದ ಆಗಸ್ಟ್, 2005 ರ ಸಂಚಿಕೆಯಿಂದ ಆಯ್ದುಕೊಳ್ಳಲಾಗಿದೆ.)

ಕುರು ಭುಂಕ್ಷ್ವ ಚ ಕರ್ಮ ನಿಜಂ ನಿಯತಂ
ಹರಿಪಾದವಿನಮ್ರಧಿಯಾ ಸತತಮ್ ॥

ನೀನು ಎಂದೆಂದೂ ಪರಮಾತ್ಮನ ಅಡಿದಾವರೆಗಳಿಗೆ ಶರಣೆರಗಿ, ನಿನ್ನ ಸ್ವಾಶ್ರಮೋಚಿತ ಕಾಯಕವನ್ನು ತಪ್ಪದೇ ಗೈದು, ಅದರ ಫಲವನ್ನು ಈಶ್ವರ ಪ್ರಸಾದವೆಂದೆಣಿಸಿ ಉಣ್ಣು.

– *ದ್ವಾದಶಸ್ತೋತ್ರ 3.1*

ಬಿ. ಎನ್. ಕೆ - ಒಂದು ದಂತಕಥೆ

- ವಿದ್ವಾನ್ ಗೋವಿಂದ ವಿ. ನವಲಗುಂದ

ಮಹಾಭಾರತ ಯುದ್ಧ ಮುಗಿದು, ಧರ್ಮರಾಜನು ಪಟ್ಟಾಭಿಷಿಕ್ತನಾದಾಗ, ಅವನಿಗಿನ್ನೂ ಪಾಪ ಪ್ರಜ್ಞೆ ಹೋಗಿರಲಿಲ್ಲ. ಆಗ ಶ್ರೀಕೃಷ್ಣನು ಅವನಿಗೆ ಭೀಷ್ಮಪಿತಾಮಹರ ಹತ್ತಿರ ಎಲ್ಲ ಸಂಶಯಗಳನ್ನು ಪರಿಹಾರ ಮಾಡಿಕೊಳ್ಳಲು ತಿಳಿಸುತ್ತಾನೆ. ಆಗ ಶ್ರೀಕೃಷ್ಣನು ಹೇಳಿದ್ದೇನೆಂದರೆ 'ಜ್ಞಾನಾನಿ ಅಸ್ತಂಗಮಿಷ್ಯಂತಿ ಭೀಷ್ಮೇತು ಅಸುತಾಂಗತೇ' - 'ಭೀಷ್ಮರು ಅಸ್ತಂಗತರಾದರೆ ಜ್ಞಾನ ಭಂಡಾರವೇ ಲೋಪವಾಗಿ ಹೋಗುವುದು. ಆದ್ದರಿಂದ ಅವರಿನ್ನೂ ಉತ್ಕ್ರಾಂತಿಯನ್ನು ಹೊಂದುವುದಕ್ಕಿಂತ ಮುಂಚೆಯೇ ಅದರ ಲಾಭ ಪಡೆಯಿರಿ' ಎಂದು.

ಅದರಂತೆ ಡಾ। ಬಿ.ಎನ್.ಕೆ ಯವರು ದಿನಾಂಕ 02.07.2005 ಶನಿವಾರದಂದು ಅಸ್ತಂಗತರಾಗವುದರೊಂದಿಗೆ ಒಂದು ದೊಡ್ಡ ಸಂಶೋಧನಾ ಕ್ರಮವೇ ಅಸ್ತವಾಯಿತು ಎನ್ನುವುದರಲ್ಲಿ ಅತಿಶಯೋಕ್ತಿ ಇಲ್ಲ. ದ್ವೈತ ಸಿದ್ಧಾಂತವೆಂಬ ರಸಗಂಗೆಯನ್ನು ಇಡೀ ವಿಶ್ವದಲ್ಲೇ ಹರಿಸಲು ಆಧುನಿಕ ಭಗೀರಥನಂತೆ ಅವರು ಅಪಾರ ಶ್ರಮ ವಹಿಸಿದವರು. ಸುಮಾರು 25 ರಷ್ಟು ಪ್ರಬಂಧಗಳನ್ನು ರಚಿಸಿದ ಅವರ ಸಾಹಿತ್ಯದಲ್ಲಿನ ಮೇರು ಕೃತಿ ಎಂದರೆ - 'ದ್ವೈತ ವೇದಾಂತದ ಇತಿಹಾಸ ಮತ್ತು ಸಾಹಿತ್ಯ' (A History of the Dvaita school of Vedanta and Its Literature). 1960 ರಷ್ಟು ಹಿಂದೆಯೇ ಅದನ್ನು ಪ್ರಕಟಿಸಿ ದ್ವೈತ ಸಿದ್ಧಾಂತದ ಜಿಜ್ಞಾಸುಗಳಿಗೆ ಪರಮೋಪಕಾರವನ್ನು ಮಾಡಿದರು. 1960-61 ರಲ್ಲಿ ಮುಂಬೈಯಲ್ಲಿ ಪ್ರಕಟವಾದ ಈ ವಿಶ್ವಕೋಶಕ್ಕೆ ಭಾರತ ಸರ್ಕಾರದ ಅತ್ಯುನ್ನತ ಸಾಹಿತ್ಯ ಗೌರವ ಹಾಗೂ ಮನ್ನಣೆಯಾದ 'ಸಾಹಿತ್ಯ ಅಕೆಡಮಿ ಪ್ರಶಸ್ತಿ'ಯು 1964 ರಲ್ಲಿ ದೊರೆಯಿತು. ಮುಂದೆ ಎರಡು ದಶಕಗಳಕಾಲ ಸತತ ಪರಿಶ್ರಮ ಹಾಗೂ ಪರಿಕ್ರಮಗಳಿಂದ ಅದನ್ನು ಪರಿಷ್ಕರಿಸಿ 1981 ರಲ್ಲಿ ದೆಹಲಿಯ ಪ್ರಮುಖ ಪ್ರಕಾಶನ ಸಂಸ್ಥೆಯಾದ ಮೋತೀಲಾಲ್ ಬನಾರಸಿದಾಸ್ ರವರಿಂದ ಪ್ರಕಟಿಸಲಾಯಿತು.

ಇದರಲ್ಲಿ ಅವರು ದ್ವೈತ ಸಾಹಿತ್ಯ, ಗ್ರಂಥಕರ್ತರು, ತತ್ತ್ವ ಪ್ರಪಂಚಕ್ಕೆ ಅವರ ಕೊಡುಗೆ, ಮಾಧ್ವ ಮಠಗಳ ಉಗಮ, ಅವುಗಳ ಸ್ಥಾನ-ಮಾನ ಇತ್ಯಾದಿಗಳ ಬಗ್ಗೆ ಪೂರ್ವಾಗ್ರಹವಿಲ್ಲದೇ, ಶಾಸನ, ದಾಖಲೆಗಳ ಪರಂಪರಾಗತ ಐತಿಹ್ಯಗಳ ಆಧಾರದ ಮೇಲೆ ಅವುಗಳ ಸತ್ಯಾಸತ್ಯತೆಯ ನಿರ್ಣಯ ಮಾಡಿ, ನಿಶ್ಚಿತ ಅಭಿಪ್ರಾಯವನ್ನು ಕೊಟ್ಟಿರುವರು. ಆಧುನಿಕ ಸಂಶೋಧಕರು ಬಹುಶಃ ನಿಃಪಕ್ಷಪಾತಿಗಳಾಗಿ, ಕೇವಲ ದಾಖಲೆಗಳ ಆಧಾರದಿಂದ ಒಂದು ವಿಷಯವನ್ನು ಅಧ್ಯಯನ ಮಾಡಿ, ಮಂಡಿಸುವುದು ವಿರಳ. ನಾಲ್ಕಾರು ಜನರ ಗುಂಪುಕಟ್ಟಿಕೊಂಡು, ರಾಜಕೀಯ ಮಾಡಿ, Ph.D. ಯನ್ನು ಪಡೆಯುವುದೇ ಬಹಳ. 'ಇದಮಿತ್ಥಂ' ಎಂದು ಕೇವಲ 'ಮಾನಾಧೀನಾ ಮೇಯಸ್ಥಿತಿಃ' ಎಂಬಂತೆ ಸತ್ಯಾಂಶವನ್ನು ಮಂಡಿಸುವ ಎದೆಗಾರಿಕೆಯನ್ನು ತೋರಿದವರು ಶ್ರೀಯುತ ಬಿ.ಎನ್.ಕೆ ಯವರು ಮಾತ್ರ.

ದ್ವೈತ ಸಿದ್ಧಾಂತದಲ್ಲಿ ಸಾಂಪ್ರಾದಾಯಿಕವಾಗಿ ಅಧ್ಯಯನ ಮಾಡಿದ ಶ್ರೋತ್ರೀಯ ಕುಟುಂಬದಲ್ಲಿ ಅವರು ಬಂದದ್ದು. ಮೂಲತಃ ಅದ್ವೈತಿಗಳಾದ ಇವರ ಪೂರ್ವಜರು ಕೋಯಿಮತ್ತೂರಿನ ಸಮೀಪದ ಸಿಂಗಾನಲ್ಲೂರ ನವರು. 1620 ರಲ್ಲಿ ಶ್ರೀವ್ಯಾಸರಾಜಮಠದ ಪ್ರಸಿದ್ಧ ಕಂಬಾಲೂ ರಾಮಚಂದ್ರ ತೀರ್ಥರು ದಿಗ್ವಿಜಯ ಮಾಡಿದಾಗ ಅವರೊಂದಿಗೆ ಶಾಸ್ತ್ರಾರ್ಥ ವಿಚಾರ ಮಾಡಿ, ದ್ವೈತ ಸಿದ್ಧಾಂತದ ಪಾರಮ್ಯವನ್ನು ಒಪ್ಪಿಕೊಂಡವರು. ವೆಲ್ಲೂರಿನ ಸಮೀಪದ ಪೆನ್ನಾತ್ತೂರಿನಲ್ಲಿ ಶ್ರೀಗಳು ಚಾತುರ್ಮಾಸ್ಯಕ್ಕೆ ಕುಳಿತಾಗ ಮುದ್ರಾಂಕನ ಮಾಡಿಸಿಕೊಂಡು, 'ಮಾಧ್ವ' ರಾದವರು (ತ್ರಿವಿಕ್ರಮ ಪಂಡಿತಾಚಾರ್ಯರಂತೆ). ಮುಂದೆ ಇವರ ವಂಶಜರು ಕುಂಭಕೋಣೆಯಲ್ಲಿ ತಹಶೀಲ್ದಾರರಾಗಿದ್ದ ಶ್ರೀ ವ್ಯಾಸರಾವ್ ಅವರು ಅಲ್ಲಿ ಒಂದು ಅಗ್ರಹಾರವನ್ನು ನಿರ್ಮಿಸಿ, ಮಧ್ಯೆ ಪ್ರಾಣದೇವರ ದೇವಲಾಯ ಹಾಗೂ ಎಡಬಲಗಳಲ್ಲಿ

ಹನ್ನೆರಡು ಹನ್ನೆರಡರಂತೆ ಇಪ್ಪತ್ನಾಲ್ಕು ಮನೆಗಳನ್ನು ಕಟ್ಟಿಸಿ ತ್ರಿಮತಸ್ಥ ವಿದ್ವಾಂಸರುಗಳಿಗೆ ದಾನಮಾಡಿದರು!

ಅವರ ಮಾತಾಮಹರು ಶ್ರೀ ಮಧ್ವರಾಯಾಚಾರ್ಯರು ಕೊಚ್ಚಿರಾಜರ ಆಸ್ಥಾನ ವಿದ್ವಾಂಸರು. ವಿಶಿಷ್ಟಾದ್ವೈತ ಪಂಡಿತರಾದ ಶ್ರೀ ಶೈಲ ಚಕ್ರವರ್ತಿ ಆಚಾರ್ಯರು 'ಗದಾಧರಿ' ಮುಂತಾದ ತರ್ಕ ಗ್ರಂಥಗಳನ್ನು ಇವರಲ್ಲೇ ಓದಿದವರು. (ಚಕ್ರವರ್ತಿ ಆಚಾರ್ಯರ ಮೊಮ್ಮಗಳೇ ಖ್ಯಾತ ಭರತನಾಟ್ಯ ಕಲಾವಿದೆ ಹಾಗೂ ಸಿನಿಮಾ ನಟಿ ಶ್ರೀಮತಿ ಹೇಮಮಾಲಿನಿ). ಶ್ರೀ ಬಿ.ಎನ್.ಕೆ ಯವರ ತಂದೆಗಳಾದ ಬಿ. ಎಸ್. ನಾರಾಯಣರಾಯರೂ ಸಹ ಕೊಚ್ಚಿ ಆಚಾರ್ಯರಲ್ಲೇ ಅಧ್ಯಯನ ಮಾಡಿದವರು.

ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನ ಪದವೀಧರರಾದ ಬಿ.ಎನ್.ಕೃಷ್ಣಮೂರ್ತಿ ಶರ್ಮಾರವರು ಅಣ್ಣಾಮಲೈ ಯುನಿವರ್ಸಿಟಿಯಲ್ಲಿ ಅಧ್ಯಾಪಕರಾಗಿ 1931ರಿಂದ 1942ರ ವರೆಗೆ ಸೇವೆ ಸಲ್ಲಿಸಿದರು. ಮುಂದೆ ಆರು ವರ್ಷ ತಿರುವಯ್ಯಾರದ ಶಾಸಕೀಯ ಸಂಸ್ಕೃತ ಮಹಾವಿದ್ಯಾಲಯದ ಪ್ರಾಂಶುಪಾಲರಾಗಿದ್ದಲ್ಲದೇ ಪಂಜಾಬಿನ ವಿಶ್ವೇಶ್ವರಾನಂದ ವೇದ ಸಂಶೋಧನಾ ಸಂಸ್ಥೆಯಲ್ಲಿ ಸಂಶೋಧಕ ವಿದ್ವಾಂಸರಾಗಿದ್ದರು. ಇದಲ್ಲದೇ ಉಡುಪಿ, ಕುಮಟಾ (ಪ್ರಾಂಶುಪಾಲರು) ಹಾಗೂ ಧಾರವಾಡಗಳಲ್ಲಿ (ಪ್ರಾಧ್ಯಾಪಕರಾಗಿ) ಸೇವೆ ಸಲ್ಲಿಸಿ, ಕೊನೆಗೆ ಮುಂಬೈಯ ರೂಪರೇಲ್ ಕಾಲೇಜಿನ ಸಂಸ್ಕೃತ ಹಾಗೂ ಅರ್ಧಮಾಗಧಿ ವಿಭಾಗದ ಮುಖ್ಯಸ್ಥರಾಗಿ 1953 - 1969 ರ ವರೆಗೆ ಸೇವೆ ಸಲ್ಲಿಸಿ ನಿವೃತ್ತರಾದರು. ಬ್ರಹ್ಮಸೂತ್ರಗಳ ಮೇಲೆ U.G.C. ಯವರ ಸಂಶೋಧನಾ ಯೋಜನೆಗೆ ಇವರನ್ನು ನಿಯೋಜಿಸಿದ್ದಲ್ಲದೇ - ಮಾನ್ಯರು ಬ್ರಹ್ಮಸೂತ್ರಗಳು ಹಾಗೂ ಅವುಗಳ ಪ್ರಮುಖ ಭಾಷ್ಯ ಟಿಪ್ಪಣೆಗಳೊಂದಿಗಿನ ಪ್ರಬಂಧವನ್ನು 1974ರಲ್ಲಿ ಮಂಡಿಸಿದರು.

ಡಾ। ಶರ್ಮಾರವರು Ph.D. ಪದವಿಯನ್ನು ಮದ್ರಾಸ್ ವಿ.ವಿ. ದಿಂದ 1948 ರಲ್ಲೇ ಪಡೆದಿದ್ದಲ್ಲದೇ ಮುಂಬೈ ಯುನಿವರ್ಸಿಟಿಯ ತತ್ತ್ವಶಾಸ್ತ್ರ ವಿಭಾಗದಲ್ಲಿನ D.Litt. ಪದವಿಯನ್ನು 1968 ರಲ್ಲಿ ಪಡೆದರು. ಮದ್ರಾಸಿನಲ್ಲಿ M.A. ಹಾಗೂ Ph.D. ಮಾಡುತ್ತಿರುವಾಗ ಅವರಿಗೆ ಪಾಶ್ಚಾತ್ಯ ವಿದ್ವಾಂಸರುಗಳಾದ ಕೀಥ್, ಮ್ಯಾಕ್‌ಡೋನೆಲ್, ಓಟ್ಟೋ ಶ್ರೇಡರ್ ಮುಂತಾದವರುಗಳ ಕೃತಿಗಳ ಹಾಗೂ ಡಾ। ರಾಧಾಕೃಷ್ಣನ್‌ರಂಥವರುಗಳ ಸಂಪರ್ಕ ಬಂದಿತು. ಅವರ ತಲಸ್ಪರ್ಶಿ ಪಾಂಡಿತ್ಯ ಹಾಗೂ ಆಕರ್ಷಕ ಲೇಖನ ಶೈಲಿಯು ಡಾ। ಶರ್ಮಾರನ್ನು ಪ್ರಭಾವಿತರನ್ನಾಗಿ ಮಾಡಿದವು. ಇದೇ ಸಂದರ್ಭದಲ್ಲಿ ಭಾರತೀಯ ಸಿದ್ಧಾಂತದ ಕೃತಿಗಳಲ್ಲಿ ಪಾಶ್ಚಾತ್ಯಾ ಪಂಡಿತರುಗಳು 'ದ್ವೈತ' ಸಿದ್ಧಾಂತವನ್ನು ಕಡೆಗಣಿಸಿರುವುದು ಅವರ ಗಮನಕ್ಕೆ ಬಂದಿತು. ದ್ವೈತವು ಕೇವಲ ಒಂದು ಧಾರ್ಮಿಕ ಇತಿಹಾಸವೇ ಹೊರತು ಭಾರತೀಯ ತತ್ತ್ವ ಶಾಸ್ತ್ರಕ್ಕೆ ಅದರ ಕೊಡುಗೆ ಏನೂ ವಿಶೇಷ ಇಲ್ಲವೆಂಬ ಭಾವನೆ ಈ ಪಂಡಿತರುಗಳಲ್ಲಿದ್ದುದು ಎದ್ದು ಕಂಡಿತು. ಆದ್ದರಿಂದಲೇ ಅವರು ಈ ಪಕ್ಷಪಾತ ಧೋರಣೆಯನ್ನು ನಿವಾರಿಸಿ - ರಾಷ್ಟ್ರೀಯ ಹಾಗೂ ಅಂತರ್‌ರಾಷ್ಟ್ರೀಯ ಸ್ತರಗಳಲ್ಲಿ ದ್ವೈತ ವೇದಾಂತದ ನಿಜವಾದ ನೆಲೆಗಟ್ಟನ್ನು ಗುರುತಿಸುವ ಗುರುತರ ಹೊಣೆಗಾರಿಕೆಯನ್ನು ತಾವೇ ವೈಯುಕ್ತಿಕವಾಗಿ ವಹಿಸಿಕೊಂಡರು. ಹೀಗಾಗಿ ಅವರು ಇವತ್ತಿಗೆ ಸುಮಾರು 150 ಸಂಶೋಧನಾತ್ಮಕ ಪ್ರಬಂಧಗಳನ್ನು ಅನೇಕ ಪೌರ್ವಾತ್ಯ ಸಂಚಿಕೆಗಳಲ್ಲಿ ಪ್ರಕಟಿಸಿದ್ದಾರೆ.

'ದ್ವೈತ ವೇದಾಂತದ ಇತಿಹಾಸ ಹಾಗೂ ಸಾಹಿತ್ಯ' ಎಂಬ ಮೇರುಕೃತಿಯನ್ನಲ್ಲದೇ, ಅವರು 'ಮಹಾವಾಕ್ಯಗಳ ಮಹಾ ತಾತ್ಪರ್ಯ' ವೆಂಬ ಗ್ರಂಥವನ್ನು ರಚಿಸಿ, ಉಪನಿಷತ್ತುಗಳ ನಿಜವಾದ ಅಭಿಪ್ರಾಯವೇನೆಂಬುದನ್ನು ನಿರ್ಣಯಿಸಿದ್ದಾರೆ (ಎರಡು ಸಂಪುಟಗಳು). ಜಯತೀರ್ಥರ 'ನ್ಯಾಯಸುಧೆ'ಯ ಇಂಗ್ಲೀಷ್ ಆವೃತ್ತಿ (ಮೂರು

ಸಂಪುಟಗಳಲ್ಲಿ) ಯಂತೂ ಅವರ ಜೀವನದ ಸಾಫಲ್ಯದ ಪರಾಕಾಷ್ಠೆಯಾಗಿದೆ. ಇದಲ್ಲದೇ ಮೂರು ಸಂಪುಟಗಳಲ್ಲಿ 'ಬ್ರಹ್ಮಸೂತ್ರಗಳು ಹಾಗೂ ಅವುಗಳ ಪ್ರಮುಖ ಭಾಷ್ಯಗಳು', 'ಮಧ್ವಾಚಾರ್ಯರ ಸಿದ್ಧಾಂತ', 'ಮಧ್ವರ ಔಪನಿಷದ ದರ್ಶನ', 'ಮಧ್ವರ ಗೀತಾ ಭಾಷ್ಯ', 'ಮಧ್ವರ ಉಪದೇಶಗಳು – ಅವರ ಮಾತುಗಳಲ್ಲಿ', 'ಟೀಕಾಚಾರ್ಯರ ನ್ಯಾಯಸುಧೆ' (ಮೂರು ಸಂಪುಟಗಳಲ್ಲಿ) ಇತ್ಯಾದಿ ಅನೇಕ ಆಂಗ್ಲ ಕೃತಿಗಳು ಅವರಿಗೆ ರಾಷ್ಟ್ರೀಯ ಹಾಗೂ ಅಂತರ್ರಾಷ್ಟ್ರೀಯ ಖ್ಯಾತಿಯನ್ನು ತಂದು ಕೊಟ್ಟಿವೆ. ಅವರ ಆಚಾರ್ಯರ ಕಾಲನಿರ್ಣಯವಂತೂ ಒಂದು ಅದ್ಭುತ ಸಂಶೋಧನಾ ಪ್ರಬಂಧವೇ ಆಗಿದೆ.

ಮಧ್ವಸಿದ್ಧಾಂತದ ವಿಶ್ವ ಕೋಶದಂತಿರುವ ಅವರನ್ನು ಅನೇಕ ಗಣ್ಯರು ಪ್ರಶಂಸಿಸಿದ್ದಾರೆ. 'ಬಾದರಾಯಣರ ಹಾಗೂ ಮಧ್ವರ ವಿಚಾರಗಳ ಮಹತ್ವವನ್ನು ತಿಳಿಸಿಕೊಟ್ಟ ಡಾ| ಬಿ. ಎನ್. ಕೆ. ಅವರಿಗೆ ನಾನು ಚಿರಋಣಿ' ಎಂದು ಅಮೇರಿಕದ ಪ್ರೊ. ಜೋಸ್ ಪೆರಿರಾ ಅವರು ಉದ್ಗಾರ ತೆಗೆದಿದ್ದಾರೆ.

ಕ್ಯಾಲಿಫೋರ್ನಿಯಾದ ಪ್ರೊ. ಸ್ಟ್ಯಾಫೋರ್ಡ್ ಬೆಟ್ಟಿ ಅವರು ಡಾ| ಶರ್ಮಾ ರವರ ಪಾಂಡಿತ್ಯವನ್ನು ನಾನು ಎರವಲು ಪಡೆದಿದ್ದೇನೆ ಎನ್ನುತ್ತಾರೆ. ಕೃಷ್ಣಗಿರಿಯ ಪ್ರಸಿದ್ಧ ನ್ಯಾಯವಾದಿಗಳಾದ ಶ್ರೀ ಪಿ. ಕೃಷ್ಣಮೂರ್ತಿಯವರು ಆಚಾರ್ಯರ ಯಾವ ಸೇವೆಯನ್ನು ಟೀಕಾಚಾರ್ಯರು ತಮ್ಮ ಕಾಲದಲ್ಲಿ ಮಾಡಿದರೋ ಅಂತಹುದೇ ಸೇವೆಯನ್ನು ಡಾ| ಶರ್ಮಾರವರು ಇಂದಿನ ಕಾಲದಲ್ಲಿ ಮಾಡಿದ್ದಾರೆ ಎಂದಿದ್ದಾರೆ. ನಾವು ವೇದಾಂತಿಗಳು, ಮಧ್ವರ ಹಾಗೂ ಅವರ ಅನುಯಾಯಿಗಳ ಸಿದ್ಧಾಂತದ ಕ್ಲಿಷ್ಟ ಪ್ರಕ್ರಿಯೆಗಳನ್ನು ತಲಸ್ಪರ್ಶಿಯಾಗಿ ವಿಶ್ಲೇಷಿಸಿದ್ದಕ್ಕಾಗಿ ಡಾ| ಶರ್ಮಾರವರ ಋಣದಲ್ಲಿ ಬಿದ್ದಿರುವೆವು' ಎಂದು ವಾಶಿಂಗ್‌ಟನ್‌ನ ಪ್ರೊ. ಪಾಟರ್‌ರವರು ಉದ್ಗರಿಸಿದ್ದಾರೆ.

ಅವರು ತಮ್ಮ ಜೀವನದ ಮುಸ್ಸಂಜೆಯಲ್ಲೂ ಸಹ, ಶ್ರೀವ್ಯಾಸರಾಜರಂತೆ, ಮಧ್ವ ಸಿದ್ಧಾಂತದ ಮೇಲೆ ಬಂದ ಯಾವುದೇ ಕುಹಕ ಆಕ್ಷೇಪಗಳನ್ನು ಸಹಿಸದೇ – ತತ್‌ಕ್ಷಣ ಪ್ರತಿಕ್ರಿಯಿಸುತ್ತಾರೆ. ಇತ್ತೀಚೆಗೆ ವಿಯೆನ್ನಾ ಯುನಿವರ್ಸಿಟಿಯ ಪ್ರೊ. ರೊಕ್ ಮೆಸ್ಕ್ಯುಟಾರವರ 'ಮಧ್ವರ ಅಜ್ಞಾತ ಪ್ರಮಾಣಗ್ರಂಥಗಳು – ಬ್ರಹ್ಮತರ್ಕ' ಎಂಬ ಜರ್ಮನ್ ಭಾಷೆಯ ಪ್ರಬಂಧವನ್ನು ಆಂಗ್ಲ ಭಾಷೆಗೆ ತರ್ಜುಮೆ ಮಾಡಿಸಿ, ಅದನ್ನು ಶತಶಃ ಖಂಡಿಸಿದ್ದಾರೆ. ಅದರಂತೆ 'ಸ್ಮೃತಿ ಪ್ರಾಮಾಣ್ಯ'ವನ್ನು ಮಧ್ವರು ಜೈನಸಿದ್ಧಾಂತದಿಂದ ಕಡ ತೆಗೆದುಕೊಂಡಿದ್ದಾರೆ ಎಂಬ ನೆದರ್‌ಲೆಂಡಿನ ಪ್ರೊ. ಝೂಡೆನ್ ಬಾಸರ ವಾದವನ್ನು ತಿರಸ್ಕರಿಸಿದ್ದಾರೆ. ಅದರಂತೆ ಅಲಹಾಬಾದ ಯುನಿವರ್ಸಿಟಿಯ ಡಾ| ಕೆ. ನಾರಾಯಣ್‌ರವರು ನ್ಯಾಯಾಮೃತದ ಬಗ್ಗೆ ಲಘುವಾಗಿ ಬರೆದದ್ದನ್ನು ತಕ್ಷಣ ಖಂಡಿಸಿ – ಅದರ ಮಹತ್ವವನ್ನು ಸಾರಿದ್ದಾರೆ. ಹೀಗಾಗಿ ಇತ್ತೀಚಿನ ವಿದ್ಯಮಾನಗಳಲ್ಲೂ ದ್ವೈತ ಸಿದ್ಧಾಂತದ ಬಗ್ಗೆ ಜಗತ್ತಿನ ಯಾವುದೇ ಮೂಲೆಯಲ್ಲಾದರೂ ಅಪಸ್ವರ ಕೇಳಿಬಂದರೆ ಡಾ| ಶರ್ಮಾರವರ ಹರಿತ ಲೇಖನಿ ಸಿದ್ಧವೇ ಇರುತ್ತದೆ!

ಡಾ| ಭವಾನಿ ನಾರಾಯಣರಾವ್ ಕೃಷ್ಣಮೂರ್ತಿ ಶರ್ಮಾರವರನ್ನು ಗೌರವಿಸದೇ ಇದ್ದ ಮಾಧ್ವಮಠಗಳೇ ಇಲ್ಲ. ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದ 'ಮಹಾಮಹೋಪಾಧ್ಯಾಯ' ಬಿರುದನ್ನಲ್ಲದೇ, ಮೊಟ್ಟ ಮೊದಲ ವಿದ್ಯಾಮಾನ್ಯ ಪ್ರಶಸ್ತಿ, ವ್ಯಾಸಪೀಠ ಪ್ರಶಸ್ತಿ, ವ್ಯಾಸಮಧ್ವ ಸೇವಾ ಪ್ರಶಸ್ತಿ, ಸತ್ಯಾತ್ಮಕನ್‌ವೆನ್‌ಶನ್ ಸನ್ಮಾನ, ಪರ್ಯಾಯ ಶ್ರೀಕೃಷ್ಣಮಠ ಪ್ರಶಸ್ತಿಗಳಲ್ಲದೇ, ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಿಂದ ಅವರಿಗೆ 'ಶ್ರೀರಾಘವೇಂದ್ರಾನುಗ್ರಹ ಪ್ರಶಸ್ತಿ' ಎಂಬ 1 ಲಕ್ಷ ರೂ.ಗಳ ಸಂಭಾವನೆ, ಶಾಲು, ಫಲಕ ಇತ್ಯಾದಿಗಳನ್ನು ಕೊಟ್ಟು ಗೌರವಿಸಲಾಯಿತು. ಅಲ್ಲದೇ ಮಧ್ವಮುನಿಪ್ರಿಯ, ಶಾಸ್ತ್ರನಿಧಿ, ದ್ವೈತವೇದಾಂತ ರಸಜ್ಞ, ಇತ್ಯಾದಿ ಅನೇಕ ಬಿರುದುಗಳು ಅವರನ್ನರಿಸಿಕೊಂಡು ಬಂದಿವೆ.

ಇಂತಹ ಮಹಾನ್ ವ್ಯಕ್ತಿಯ ಕಣ್ಮರೆ, ಒಂದು ದೃಷ್ಟಿಯಿಂದ ನಮ್ಮ ದ್ವೈತಸಿದ್ಧಾಂತಕ್ಕೆ ಮಾಧ್ವ ಜನಾಂಗಕ್ಕೇನೆ ದೊಡ್ಡ ಹಾನಿ. ಆದರೆ, ವೇದಗಳಲ್ಲಿ ಹೇಳಿದಂತಹ 'ಶತಾಯುಷಿ' ಗಳಾದ (97) ಅವರ ಕೃತಿಗಳು ಅಮರವಾಗಿ ನಮ್ಮೊಡನೆ ಇವೆ. ಅವರ ಶೈಲಿ ಮಾಧ್ವರ ಆತ್ಮಾಭಿಮಾನವನ್ನು ಬಡಿದೆಬ್ಬಿಸುವಂತಹದು; ಸತ್ಯವನ್ನು ಎತ್ತಿಹಿಡಿಯುವಂತಹದು; ಪೂರ್ವಾಗ್ರಹ ಪೀಡಿತವಾಗದಿದ್ದುದು. ನಮ್ಮ ವಿದ್ವಾಂಸರುಗಳೆಲ್ಲ ಇಂತಹ ಕೆಚ್ಚನ್ನು ಅನುಕರಣ ಮಾಡಿದರೆ – ಅದೇ ನಾವು ಅವರ ಆತ್ಮಕ್ಕೆ ಸಲ್ಲಿಸುವ ಕೃತಜ್ಞತೆ. ಒಂದೆಡೆ ಅವರೇ ಹೇಳಿದಂತೆ 'ನಾನು ಇದನ್ನು ನನ್ನ ಕರ್ತವ್ಯತ್ವೇನ ಮಾಡಿದ್ದೇನೆ. ಉಳಿದದ್ದನ್ನು ವಾಚಕರಿಗೆ ಬಿಡುತ್ತೇನೆ'; ಎಂದು ಭವಭೂತಿಯ ಈ ಕೆಳಗಿನ ಉಕ್ತಿಯನ್ನು ನಿಜೀಕರಿಸಿದ್ದಾರೆ :

ಯೇ ನಾಮ ಕೇಚಿದಿಹ ನಃ ಪ್ರಥಯಂತ್ಯವಜ್ಞಾಂ
ಜಾನಂತಿ ತೇ ಕಿಮಪಿ? ತಾನ್ ಪ್ರತಿ ನೈಷ ಯತ್ನಃ।
ಉತ್ಪತ್ಸ್ಯತೇ ಮಮ ಹಿ ಕೋಪಿ ಸಮಾನಧರ್ಮಾ
ಕಾಲೋಹ್ಯಯಂ ನಿರವಧಿರ್ವಿಪುಲಾಚಪೃಥ್ವೀ॥

ಈ ಸಂದರ್ಭದಲ್ಲಿ ಅವರ ಆತ್ಮಕ್ಕೆ ಚಿರಶಾಂತಿಯನ್ನೂ, ಸಕಲ ಮಾಧ್ವರಿಗೆ ಅವರ ಆದರ್ಶದ ದೀಪವು ದಾರಿ ತೋರಿಸಲೆಂದೂ ಶ್ರೀ ಭಗವಂತನನ್ನು ಪ್ರಾರ್ಥಿಸುವೆ.

(ಇದು ಧಾರವಾಡದ 'ಶ್ರೀಪುರಂದರೋತ್ಸವ ಸಮಿತಿ'ಯ ಡಾ. ಶರ್ಮಾ ಸಂತಾಪ – ಸೂಚಕ ಸಭೆಯಲ್ಲಿ ದಿನಾಂಕ 10-7-2005 ರಂದು ಮಾಡಿದ ಭಾಷಣದ ಸಾರ)

ದ್ವಾದಶ ಸ್ತೋತ್ರ

ಶ್ರೀ ಮಧ್ವಾಚಾರ್ಯರು 12 ಅಧ್ಯಾಯಗಳ ಈ ಸಣ್ಣ ಸ್ತೋತ್ರಸಾಹಿತ್ಯದಲ್ಲಿ ಅನೇಕ ಧಾರ್ಮಿಕ ಮತ್ತು ತಾತ್ವಿಕ ಶ್ರೇಷ್ಠ ಸುಂದರ ಮೌಲ್ಯಗಳನ್ನು ಸಂಯೋಜಿಸಿದ್ದಾರೆ. ದ್ವೈತವಾಙ್ಮಯದಲ್ಲಿಯ ಸಂಸ್ಕೃತ ಸ್ತೋತ್ರಗಳ ಸಾಲಿನಲ್ಲಿ ಇದು ಅಗ್ರಗಣ್ಯವಾಗಿದೆ. ಈ ಪದ್ಯಗಳ ರಚನೆಯಲ್ಲಿ ಜಯದೇವನ '*ಗೀತ ಗೋವಿಂದ*'ವು ಪ್ರತಿಧ್ವನಿತವಾದಂತೆ ತೋರುವುದು. ಆಚಾರ್ಯ ಮಧ್ವರ ಈ ಸ್ತೋತ್ರವನ್ನು ಸಂಗೀತಕ್ಕೆ ಅಳವಡಿಸಿ ಸಂಧ್ಯಾವಂದನಂ ಶ್ರೀನಿವಾಸರಾವ್ ಹಾಗೂ ಗಾನವಿದುಷಿ ಎಂ. ಎಸ್. ಶುಭಲಕ್ಷ್ಮಿಯವರು ಹಾಡಿರುವ ಧ್ವನಿಸುರುಳಿಗಳು ಲಭ್ಯವಿವೆ.

ಕಣ್ಮರೆಯಾದ ದ್ವೈತ ಸಿದ್ಧಾಂತದ ಧ್ರುವ ನಕ್ಷತ್ರ

- ಡಾ|| ಕೆ.ಬಿ. ಅರ್ಚಕ್

ಮಧ್ವ ಸಿದ್ಧಾಂತಕ್ಕೆ ಅಮೋಘ ಕೊಡುಗೆಯನ್ನಿತ್ತ ಮಹಾಚಾರ್ಯ ಪಂಡಿತ ಶ್ರೇಷ್ಠರಾದ ಡಾ|| ಬಿ.ಎನ್.ಕೆ. ಶರ್ಮಾರವರು 2.7.2005 ರಂದು ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದವಾಗುತ್ತದೆ. ದಿನಾಂಕ 9.6.1909 ರಂದು ಜನಿಸಿದ ಡಾ|| ಬಿ.ಎನ್.ಕೆ. ಶರ್ಮಾರವರು, ತಮ್ಮ 22ನೇ ವಯಸ್ಸಿನಲ್ಲಿಯೇ ಸಾಹಿತ್ಯಿಕ ರಂಗವನ್ನು ಪ್ರವೇಶಿಸಿದರು. 1931 ರಲ್ಲಿ ದ್ವೈತವೇದಾಂತವನ್ನು ಕುರಿತ ಸಂಶೋಧನಾತ್ಮಕ ಲೇಖನಗಳನ್ನು ಬರೆಯಲಾರಂಭಿಸಿದರು. ಕೊಚೀನದ ರಾಜಾಶ್ರಯವನ್ನು ಪಡೆದ ಪಂಡಿತರ ಮನೆತನದವರಾದ ಡಾ|| ಶರ್ಮಾರವರು ತಮ್ಮ ತಾತಂದಿರಾದ ಕೊಚ್ಚಿ ಮಧ್ವರಾಯಾಚಾರ್ಯ, ಕುಂಭಕೋಣದ ಪ್ರಸಿದ್ಧ ಪಂಡಿತರಾದ ಶ್ರೀ ಎಮ್. ರಾಮರಾವ್ ಮೊದಲಾದವರಲ್ಲಿ ಶಾಸ್ತ್ರೀಯ ಪದ್ಧತಿಯಿಂದ ಸಂಸ್ಕೃತ ಸಾಹಿತ್ಯ ಮತ್ತು ಅನೇಕ ಶಾಸ್ತ್ರಗಳನ್ನು ಅಧ್ಯಯನ ಮಾಡಿ ತಮ್ಮ ಲೇಖನ ನೈಪುಣ್ಯಕ್ಕೆ ಬುನಾದಿಯನ್ನು ರಚಿಸಿಕೊಂಡರು. ಇವರು ಕುಂಭಕೋಣದಲ್ಲಿಯೇ Intermediate ವರೆಗೆ ಪ್ರಥಮ ದರ್ಜೆಯಲ್ಲಿ ಶಿಕ್ಷಣವನ್ನು ಮುಗಿಸಿದರು. ನಂತರ ನ್ಯಾಯವೈಶೇಷಿಕ ಶಾಸ್ತ್ರ ಮತ್ತು ತೌಲನಿಕ ಭಾಷಾಶಾಸ್ತ್ರ (ಇಂಡೋ ಯುರೋಪಿಯನ್) ಗಳನ್ನು ಪ್ರಮುಖ ವಿಷಯಗಳನ್ನಾಗಿ ಆಯ್ದು, ದ್ವಿತೀಯ ಶ್ರೇಣಿಯಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು.

ನಂತರ ಅಧ್ಯಾಪನ ಮತ್ತು ಸಂಶೋಧನ ರಂಗವನ್ನು ಪ್ರವೇಶಿಸಿದ ಡಾ|| ಶರ್ಮಾರವರು 1931-1942 ರವರೆಗೆ ಅಣ್ಣಾಮಲೈ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದರು. ಆರು ವರ್ಷಗಳ ವರೆಗೆ ತಿರುವೈಯಾರ್‌ನಲ್ಲಿಯ ಪ್ರತಿಷ್ಠಿತ ಸಂಸ್ಕೃತ ಮಹಾವಿದ್ಯಾಲಯದ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ 1948 ರಿಂದ ವಿಶ್ವೇಶ್ವರಾನಂದ ವೈದಿಕ ಸಂಶೋಧನಾ ಸಂಸ್ಥೆ (ಪಂಜಾಬ್)ಯಲ್ಲಿ ಸಂಶೋಧಕರಾಗಿ ಕಾರ್ಯ ನಿರ್ವಹಿಸಿ ಅನಂತರ ಉಡುಪಿಯ ಸಂಸ್ಕೃತ ಮಹಾವಿದ್ಯಾಲಯ, ಕುಮಟಾದ ಕೆನರಾ ಮಹಾವಿದ್ಯಾಲಯ (ಈಗ ಡಾ|| ಎ.ವಿ ಬಾಳಿಗಾ ಕಲಾ ವಿಜ್ಞಾನ ಮಹಾವಿದ್ಯಾಲಯ) ಗಳಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದರು. ಧಾರವಾಡದ ಕೆ.ಇ. ಬೋರ್ಡ್ಸ್ ಮಹಾವಿದ್ಯಾಲಯ (ಈಗ - ಜೆ.ಎಸ್.ಎಸ್. ಮಹಾವಿದ್ಯಾಲಯ)ದಲ್ಲಿ ಕೆಲವು ಕಾಲ ಸಂಸ್ಕೃತ ಪ್ರಾಧ್ಯಾಪಕರಾಗಿದ್ದು, 1953 ರಿಂದ ಮುಂಬೈ ನಗರದ ರೂಪರೆಲ್ ಮಹಾವಿದ್ಯಾಲಯದಲ್ಲಿ ಸಂಸ್ಕೃತ ಅರ್ಧಮಾಗಧಿ ವಿಭಾಗದ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರಾಗಿ ತಮ್ಮ ಅಮೂಲ್ಯ ಸೇವೆ ಸಲ್ಲಿಸಿ 1969 ರಲ್ಲಿ ನಿವೃತ್ತರಾದರು. ತಮ್ಮ ಸುದೀರ್ಘ ಅಧ್ಯಾಪನ ಸೇವೆಯಲ್ಲಿ ನಿರತರಾದ ಇವರು 1948ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದಿಂದ Ph.D. (ಸಂಸ್ಕೃತ) ಮತ್ತು 1968 ರಲ್ಲಿ ಮುಂಬೈ ವಿಶ್ವವಿದ್ಯಾಲಯದಿಂದ D.Litt. (ತತ್ತ್ವಜ್ಞಾನ) ಪದವಿಗಳನ್ನು ತಮ್ಮದನ್ನಾಗಿರಿಸಿಕೊಂಡರು.

20ನೇ ಶತಮಾನದ ದ್ವೈತವೇದಾಂತ ಕೋವಿದ ಯಾರೆಂದು ಪ್ರಶ್ನಿಸಿದಾಗ, ಒಮ್ಮತದಿಂದ ಸರ್ವರಿಗೂ ಸ್ವಾಗತಾರ್ಹವಾಗಿ 'ಡಾ|| ಬಿ.ಎನ್.ಕೆ. ಶರ್ಮಾ' ಎಂಬ ನಾಮಧೇಯ ಉದ್ಘೋಷಿತವಾಗುವುದು. ಶ್ರೀಮಧ್ವಾಚಾರ್ಯರ ದ್ವೈತವೇದಾಂತ ತತ್ತ್ವಗಳ ಸಂದೇಶವನ್ನು ನಿತ್ಯೋತ್ಸಾಹದಿಂದ ಜಗತ್ತಿಗೆ ತೋರ್ಪಡಿಸುವುದರಲ್ಲಿ ತಮ್ಮ ಜೀವನ ಸಾರ್ಥಕ ಗೊಳಿಸಿದವರನ್ನು ಶೋಧಿಸಲು ವಿದ್ವಾಂಸರ ಗುಂಪೊಂದು ಪ್ರವೃತ್ತವಾದಾಗ, ಅವರಿಗೆ ಪ್ರಪ್ರಥಮವಾಗಿ ಕಂಡುಬರುವ ವ್ಯಕ್ತಿಯೆಂದರೆ ಡಾ|| ಬಿ.ಎನ್.ಕೆ. ಶರ್ಮಾ ಅವರೇ. ಎಲ್ಲರಿಗೂ ಮನಗಾಣುವಂತೆ ಪ್ರಾಮಾಣಿಕವಾಗಿ, ವಿವಿಧ ಮೂಲ ಆಕರಗಳಿಂದ ಸಮರ್ಥಿತವಾಗಿ ಆಂಗ್ಲ ಭಾಷೆಯಲ್ಲಿ ದ್ವೈತವೇದಾಂತವನ್ನು ಕುರಿತ ಗ್ರಂಥಗಳನ್ನು ಸಮಾಜಕ್ಕೆ ಕೊಡಮಾಡಿದ ಸಮಕಾಲಿಕ ತತ್ತ್ವಜ್ಞಾನಿಗಳಲ್ಲಿ

ಅಗ್ರಣಿಯಾದವರು. ದ್ವೈತವೇದಾಂತದ ಅತಿಶಯ ಸೂಕ್ಷ್ಮವಾದ ಅಂಶಗಳನ್ನು ಅರಿಯುವ ಲವಲವಿಕೆಯುಳ್ಳ ಸತ್ಯಶೋಧಕರು ಯಾರಿರಬಹುದು? ಇದಕ್ಕೆ ಉತ್ತರ – ಡಾ|| ಬಿ.ಎನ್.ಕೆ. ಶರ್ಮಾರವರು. ಒಟ್ಟಿನಲ್ಲಿ ಶರ್ಮಾರವರ ವ್ಯಕ್ತಿತ್ವವೆಂದರೆ ದ್ವೈತವೇದಾಂತದ ಜ್ಞಾನಕೋಶ. ಇವರ ವ್ಯಕ್ತಿತ್ವವನ್ನು ಬೆಲೆ ಕಟ್ಟಲು ಸಾಧ್ಯವಿಲ್ಲವಾದರೂ ಪ್ರಾತ್ಯಕ್ಷಿಕವಾಗಿ ಅಥವಾ ಗ್ರಂಥಗಳ ಮೂಲಕ ಅವರ ಪರಿಚಯವಿರುವವರೇ ಈ ವಿಷಯದಲ್ಲಿ ಪ್ರಮಾಣ.

ಬಿಹಾರದ ಹಿಂದಿನ ರಾಜ್ಯಪಾಲರಾಗಿದ್ದ, ಗಾಂಧಿಶಾಂತಿ ಪ್ರತಿಷ್ಠಾನ, ಹೊಸದಿಲ್ಲಿ ಇದರ ಅಧ್ಯಕ್ಷರಾಗಿದ್ದ ದಿವಂಗತ ಆರ್.ಆರ್. ದಿವಾಕರ ಇವರು ಹೆಮ್ಮೆಯಿಂದ ಡಾ|| ಶರ್ಮಾರವರನ್ನು ಅಭಿನಂದಿಸುತ್ತಾ ಹೇಳುತ್ತಾರೆ : ''ದ್ವೈತವೇದಾಂತವನ್ನು ಕುರಿತ ತೌಲನಿಕ ಮತ್ತು ವೈಶಿಷ್ಟ್ಯಪೂರ್ಣವಾದ ನಿಮ್ಮ ಅಧ್ಯಯನವನ್ನುಮನಗಂಡು ನಿಮ್ಮನ್ನು ಶ್ಲಾಘಿಸುತ್ತೇನೆ. ಜಗದ್ಗುರು ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಗೆ ಸಮರ್ಥನೀಯ ಸೇವೆ ಸಲ್ಲಿಸಿ ದ್ವಿಗುಣಿತ ಋಣದಿಂದ ಮುಕ್ತರಾಗಿರುವಿರಿ. ಅಲ್ಲದೇ, ಎಂದಿಗೂ ಮೌಲ್ಯಭರಿತ ಗ್ರಂಥಗಳನ್ನು ರಚಿಸಿ, ವೇದಾಂತ ಪ್ರಪಂಚಕ್ಕೆ ಕೊಡಮಾಡಿ, ಮಹಾಜ್ಞಾನಿಗಳ ಋಣದಿಂದಲೂ ಮುಕ್ತರಾಗಿರುವಿರಿ. ತಮ್ಮ ಜೀವನದಲ್ಲಿ ಇಷ್ಟೊಂದು ಸಾಧನೆಗೈದ ಸುದ್ಯೆವಿಗಳು ಅತ್ಯಂತ ವಿರಳ.''

ಪಾಶ್ಚಾತ್ಯ ತತ್ತ್ವಜ್ಞಾನಿಗಳಾದ ಪ್ರೊಫೆಸರ್ ಜೋಸ್ ಪೆರೆಯಿರಾ (ತತ್ತ್ವಜ್ಞಾನ ವಿಭಾಗ, ಫೋರ್ಡ್ಹ್ಯಾಮ್ ವಿಶ್ವವಿದ್ಯಾಲಯ, ಬ್ರಾಂಕ್ಸ್, ಅಮೇರಿಕಾ) ಮತ್ತು ಪ್ರೊಫೆಸರ್ ಎಲ್. ಸ್ಟಾಫೋರ್ಡ್ ಬೆಟ್ಟಿ (ಧರ್ಮ ಮತ್ತು ತತ್ತ್ವಜ್ಞಾನ ವಿಭಾಗ, ಕ್ಯಾಲಿಫೋರ್ನಿಯಾ ಸ್ಟೇಟ್ ಕಾಲೇಜ್, ಬ್ಯಾಕರ್ಸ ಫೀಲ್ಡ್) – ಇವರು ಮಧ್ವಸಿದ್ಧಾಂತದ ಸತ್ಯತೆಯನ್ನು ಮನಗಾಣಲು ಮತ್ತು ಪಾಶ್ಚಾತ್ಯ ದೇಶಗಳಲ್ಲಿ ಈ ಸಿದ್ಧಾಂತವನ್ನು ಪ್ರಚಾರ ಮಾಡಲು ತಮಗೆ ಡಾ|| ಶರ್ಮಾರವರು ಸರ್ವಾಂಗೀಣ ಸ್ಫೂರ್ತಿದಾಯಕರಾಗಿದ್ದಾರೆ ಎಂದು ಘೋಷಿಸಿದ್ದಾರೆ. ಭಾರತೀಯ ತತ್ತ್ವಶಾಸ್ತ್ರಗಳ ಸಾಂದರ್ಭಿಕ ವಿಶ್ವಕೋಶದ ಪ್ರಧಾನ ಸಂಪಾದಕರಾದ ಪ್ರೊಫೆಸರ್ ಕಾರ್ಲ್ ಎಚ್. ಪಾಟರ್ ಇವರ ಮಾತುಗಳು ಅತ್ಯಂತ ಯಥಾರ್ಥವಾಗಿವೆ : ''ಸಕಲ ವಿಷಯಗಳಲ್ಲಿ ಪರಿಣತಿಯನ್ನು ಪಡೆದ ಪ್ರಧಾನ ಗುರುವು ಮಾತ್ರ ಒದಗಿಸಬಲ್ಲ ಜ್ಞಾನಭಂಡಾರವನ್ನು ಡಾ|| ಶರ್ಮಾರವರು ಕೊಡಮಾಡಿದ್ದಾರೆ. ಡಾ||ಶರ್ಮಾರವರು ಶ್ರೀಮಧ್ವರ ಮತ್ತು ಅವರ ಅನುಯಾಯಿಗಳ ಜಟಿಲ ತತ್ತ್ವ ಸರಣಿಗಳನ್ನು ಸರಳವಾಗಿ ಸಡಿಲಿಸಿ ವಿವರಿಸುವುದರಲ್ಲಿ ಏಕೈಕರಾಗಿ ಪ್ರಯತ್ನಿಸಿ ಯಶಸ್ವಿಯಾಗಿದ್ದಾರೆ. ಅವರ ಸಾಹಿತ್ಯ ಸಂಕಲನದ ಮೂಲಕ ತತ್ತ್ವಜ್ಞಾನಿಗಳಾದ ನಾವು ಅದರ ಅಗಾಧತೆಯನ್ನು ಅರಿತು ಮಾಧ್ವ ತತ್ತ್ವಜ್ಞಾನವನ್ನು ಪ್ರಶಂಸಿಸುವುದರಲ್ಲಿ ಅವರಿಗೆ ಋಣಿಯಾಗಿದ್ದೇವೆ.''

ಡಾ||ಶರ್ಮಾರವರು ನಿವೃತ್ತರಾದರೂ ಅವರ ಲೇಖನಿ ನಿವೃತ್ತಿಯಾಗಲಿಲ್ಲ. ಶಾಸ್ತ್ರನೈಪುಣ್ಯ ಮತ್ತು ಸಂಶೋಧನಾತ್ಮಕ ಕಲೆಗಳನ್ನು ಮೈಸಿರಿಯನ್ನಾಗಿರಿಸಿಕೊಂಡ ಅತ್ಯುತ್ತಮ ಗ್ರಂಥಗಳು ಆಂಗ್ಲಭಾಷೆಯಲ್ಲಿ ಅವರಿಂದ ನಿರ್ಮಾಣವಾದುವು. ಅವುಗಳಲ್ಲಿ ''The Brahmasutras and their principal Commentaries (A critical Exposition)'' ಒಂದಾಗಿದೆ. ಈ ಸ್ಮರಣೀಯ ಗ್ರಂಥವು ಅವರಿಗೆ ವಿಶ್ವವ್ಯಾಪಿ ಪ್ರಸಿದ್ಧಿಯನ್ನು ಒದಗಿಸಿತು. ಮೂರು ಸಂಪುಟಗಳಲ್ಲಿ ಪ್ರಕಾಶಗೊಂಡ ಈ ಗ್ರಂಥದ 'ಸಂಪಾದಕೀಯ ಮುನ್ನುಡಿ'ಯಲ್ಲಿ ಡಾ|| ಜೆ.ಎಚ್. ದವೆ (ಗೌರವ ನಿರ್ದೇಶಕರು, ಭಾರತೀಯ ವಿದ್ಯಾಭವನ, ಮುಂಬೈ) ಇದರ ಮಾಹಿತಿಯನ್ನು ಸಾರ್ಥಕವಾಗಿ ತಿಳಿಸಿದ್ದಾರೆ.

ಅರವತ್ತು ವರ್ಷಗಳವರೆಗೆ ಡಾ|| ಶರ್ಮಾರವರ ಸಂಶೋಧನಾತ್ಮಕ ಸಾಹಿತ್ಯ ರಚನಾಕಾರ್ಯವು ಶ್ರೀಮಧ್ವರ ದ್ವೈತ ಸಿದ್ಧಾಂತದ ತತ್ತ್ವಗಳನ್ನು ಸಮರ್ಥಿಸುವುದರಲ್ಲಿಯೇ ಕೇಂದ್ರೀಕೃತವಾಗಿತ್ತೆಂದು ಸಕಲ ವಿದ್ವಾಂಸರೂ ಮನಗಂಡಿದ್ದಾರೆ. ಇದು ಹೀಗೇಕೆ? ಇದೊಂದೇ ಗುರಿಯತ್ತ ಸಾಗಲು ತಮ್ಮ ಸಕಲ ಸಾಮರ್ಥ್ಯ ಮತ್ತು ವೇಳೆಯನ್ನು ಮೀಸಲಾಗಿಡಲು ಏನು ಕಾರಣ? 1928 ರಲ್ಲಿ

ಮದ್ರಾಸಿನ ಪ್ರೆಸಿಡೆನ್ಸಿ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಯಾಗಿರುವಾಗಲೇ ದ್ವೈತವೇದಾಂತ ಸಮರ್ಥನೆಯನ್ನೇ ತಮ್ಮ ಏಕೈಕ ಗುರಿಯನ್ನಾಗಿರಿಸಿಕೊಳ್ಳುವ ಸ್ಫೂರ್ತಿ ಅವರಲ್ಲಿ ಅಂಕುರಿತವಾಯಿತು. ಪಾಶ್ಚಾತ್ಯ ಪಂಡಿತರಾದ ಕೀಥ್. ಮ್ಯಾಕ್ಡೋನೆಲ್, ಶ್ರೇಡರ್ ಮೊದಲಾದವರ ಮತ್ತು ಡಾ|| ರಾಧಾಕೃಷ್ಣನ್‌ರವರಂತಹ ಭಾರತೀಯ ತತ್ತ್ವಜ್ಞಾನಿಗಳ ಗ್ರಂಥಗಳು ನಿಷ್ಠಾವಂತ ವಿದ್ಯಾರ್ಥಿಯಾದ ಡಾ|| ಶರ್ಮಾರವರ ಮನಸೆಳೆದವು. ಈ ಪಂಡಿತರ ಅಗಾಧ ಪಾಂಡಿತ್ಯ. ಆಕರ್ಷಕ ಶೈಲಿಗಳು ಡಾ|| ಶರ್ಮಾರವರನ್ನು ಮೆಚ್ಚಿಸಿದವು. ಆದರೆ ಭಾರತೀಯ ತತ್ತ್ವಶಾಸ್ತ್ರಗಳನ್ನು ಕುರಿತ ಈ ಪಂಡಿತರ ಗ್ರಂಥಗಳೆಲ್ಲವೂ, ಮಧ್ವರ ದ್ವೈತವೇದಾಂತ ವಿಷಯಗಳ ವಿವರಣೆ ಮತ್ತು ನಿರೂಪಣೆಯಲ್ಲಿ ಅತ್ಯಲ್ಪ ನ್ಯಾಯವನ್ನು ಒದಗಿಸಿವೆಯೆಂಬುದನ್ನು ಡಾ|| ಶರ್ಮಾರವರು ತಿಳಿದು ದಿಗ್ಭ್ರಮೆಗೊಂಡರು. ಮಧ್ವರು ಒಬ್ಬ ಪ್ರಮಾಣಾನುಸಾರ ನಿಷ್ಕರ್ಷೆ ಮಾಡುವ ತತ್ತ್ವಜ್ಞಾನಿಗಳೆಂದು ಸ್ವೀಕರಿಸಲು ಸಿದ್ಧರಾಗದ ಈ ಪಂಡಿತರ ಮನೋವೃತ್ತಿಯೇ ಡಾ|| ಶರ್ಮಾರವರನ್ನು ದ್ವೈತವೇದಾಂತ ಸಮರ್ಥನೆಯ ಗುರಿಯೆಡೆಗೆ ಪ್ರಚೋದಿಸಿತು. ಇದೇ ಅವರ ಜೀವನ ಸಂದೇಶವಾಗಿ ಪರಿಣಮಿಸಿತು. ಡಾ|| ಶರ್ಮಾರವರು 96 ರ ಪಕ್ವ ವಯಸ್ಸಿನಲ್ಲಿ ಅನೇಕ ಎಡರು-ತೊಡರುಗಳನ್ನು ಎದುರಿಸುತ್ತ ತಮ್ಮ ಜೀವನವನ್ನು ಸಾರ್ಥಕಗೊಳಿಸಿರುವ ತೃಪ್ತಿಯನ್ನು ಆನಂದಿಸಿದರು. ನಿಜವಾಗಿಯೂ, ತಮ್ಮ ವೃದ್ಧಾಪ್ಯದಲ್ಲಿ ಈ ರೀತಿ ತೃಪ್ತಿಯನ್ನು ಆನಂದಿಸುವ ಸೌಭಾಗ್ಯ ಎಲ್ಲರಿಗೂ ಲಭಿಸುವುದಿಲ್ಲ. ಡಾ|| ಬಿ.ಎನ್.ಕೆ. ಶರ್ಮಾರವರಿಗೆ ರಾಷ್ಟ್ರದ ಅನೇಕ ಸಂಘ ಸಂಸ್ಥೆಗಳು, ಮಠ-ಮಾನ್ಯಗಳು ಸನ್ಮಾನಿಸಿ ಬಿರುದುಗಳನ್ನು ಪ್ರದಾನ ಮಾಡಿವೆ. ಅವುಗಳಲ್ಲಿ ಡಾ|| ಶರ್ಮಾರವರು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1963), ರಾಷ್ಟ್ರಪತಿ ಪ್ರಶಸ್ತಿ (1992), ಮಹಾರಾಷ್ಟ್ರ ಸರಕಾರದ ಪ್ರಶಸ್ತಿ (1993) - ಹೀಗೆ ಅನೇಕ ಪ್ರಶಸ್ತಿಗಳು ಅವರನ್ನು ಅಲಂಕರಿಸಿವೆ. ದಿನಾಂಕ 13.11.1999 ರಂದು ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠವು ಮಹಾಮಹೋಪಾಧ್ಯಾಯ ಎಂಬ ಬಿರುದನ್ನಿತ್ತು ಡಾ|| ಶರ್ಮಾರವರನ್ನು ಗೌರವಿಸಿತು. ಇದಲ್ಲದೆ 2000 ದಲ್ಲಿ ವ್ಯಾಸಪೀಠ ಪ್ರಶಸ್ತಿ (ಕರ್ನೂಲ್), ಕರ್ನಾಟಕ ಸಂಘ (ಮುಂಬಯಿ) ಸತ್ಕಾರ, ವ್ಯಾಸಮಧ್ವ ಸೇವಾ ಪ್ರಶಸ್ತಿ (ಬೆಂಗಳೂರು), ಸತ್ಯಾತ್ಮಕನ್‌ವೆನ್‌ಶನ್ ಸನ್ಮಾನ (ಮುಂಬಯಿ), ಪರ್ಯಾಯ ಕೃಷ್ಣಮಠ ಪ್ರಶಸ್ತಿ (ಉಡುಪಿ), ಮೆಸರ್ಸ್ ಮೋತಿಲಾಲ್ ಬನಾರಸಿದಾಸ್ ಶತಮಾನೋತ್ಸವ ಪ್ರಶಸ್ತಿ (ಚೆನ್ನೈ), ಮಹಾರಾಷ್ಟ್ರ ರಾಜ್ಯ ಕನ್ನಡಿಗರ ಸಾಹಿತ್ಯ ಸಮ್ಮೇಳನ ಪ್ರಶಸ್ತಿ (ಮುಂಬಯಿ) ಮತ್ತು ಕೊನೆಯದಾಗಿ, ಇತ್ತೀಚೆಗೆ 31.8.2004ರಂದು 1ಲಕ್ಷ ರೂಪಾಯಿ ಮೌಲ್ಯದ ಶ್ರೀರಾಘವೇಂದ್ರ ಅನುಗ್ರಹ ಪ್ರಶಸ್ತಿ (ಮಂತ್ರಾಲಯ) ಹೀಗೆ ಹತ್ತು ಹಲವಾರು ಪ್ರಶಸ್ತಿಗಳು ಅವರನ್ನು ಅಜರಾಮರವಾಗಿ ಅಲಂಕರಿಸಿವೆ.

ಇಂತಹ ಬಹುಮುಖ ವ್ಯಕ್ತಿತ್ವವುಳ್ಳ ಮತ್ತು ದ್ವೈತ್ಯವೇದಾಂತ ಋಷಿಗಳೆನಿಸಿದ ಡಾ|| ಬಿ.ಎನ್.ಕೆ. ಶರ್ಮಾರವರು ಆಂಗ್ಲ ಭಾಷೆಯಲ್ಲಿ ದ್ವೈತ್ಯವೇದಾಂತವನ್ನು ಕುರಿತ, ಪ್ರಮಾಣ ಪ್ರಮಿತವಾದ ಮತ್ತು ವಿಮರ್ಶಾತ್ಮಕವಾದ ಅನೇಕ ಗ್ರಂಥಗಳನ್ನು ರಚಿಸಿ ವೇದಾಂತ ಪ್ರಪಂಚಕ್ಕೆ ಅಪರಿಮಿತವಾದ ಕೊಡುಗೆಯನ್ನಿತ್ತಿದ್ದಾರೆ. ಅವುಗಳಲ್ಲಿ ಒಂದಾದ "ದ್ವೈತವೇದಾಂತ ವಾಙ್ಮಯ ಮತ್ತು ಇತಿಹಾಸ" (2 ಸಂಪುಟಗಳು) ಕನ್ನಡದಲ್ಲಿ ಭಾಷಾಂತರಿತವಾಗಿ ಉಪಲಬ್ಧವಿದೆ.

ಹೀಗೆ ಆಂಗ್ಲ ಮಾಧ್ಯಮದ ಮೂಲಕ ದ್ವೈತ್ಯವೇದಾಂತ ಸಾಹಿತ್ಯ ಪ್ರಪಂಚವನ್ನು ಶ್ರೀಮಂತಗೊಳಿಸಿದ ಮಹಾಚಾರ್ಯ ಡಾ|| ಬಿ.ಎನ್.ಕೆ. ಶರ್ಮಾರವರು ವೈಕುಂಠವಾಸಿಗಳಾದರೂ, ತಮ್ಮ ಗ್ರಂಥ ಸಂಪತ್ತಿನಿಂದ ಚಿರಂಜೀವಿಗಳಾಗಿದ್ದಾರೆ. ಇವರ ಆತ್ಮಕ್ಕೆ ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮರು ಶಾಂತಿಯನ್ನು ಕರುಣಿಸಲಿ. ಶ್ರೀಯುತರು ನಮ್ಮನ್ನಗಲಿದ್ದರೂ ಅವರ ಸಾಧನೆ. ಅದ್ಭುತ ಕೆಲಸಗಳು ನಮ್ಮೊಂದಿಗಿವೆ. ಮಾಧ್ವ ವಾಙ್ಮಯ ಎಂದೆಂದೂ ಮರೆಯದ ದಿವ್ಯಚೇತನ ಅವರದು.

(ಮಂತ್ರಾಲಯದ ಜನಪ್ರಿಯ ಬಹುಭಾಷಾ ಸಾಂಸ್ಕೃತಿಕ ಮಾಸಿಕ 'ಶ್ರೀ ಗುರುಸಾರ್ವಭೌಮ'ದ ಆಗಸ್ಟ್, 2005 ರ ಸಂಚಿಕೆಯಿಂದ)

ಡಾ। ಬಿ. ಎನ್. ಕೆ. ಶರ್ಮಾ – ದ್ವೈತವೇದಾಂತದ ಶ್ರೇಷ್ಠ ಆಧುನಿಕ ವಿದ್ವಾಂಸರು

– ಪ್ರೊ। ಕೆ. ಟಿ. ಪಾಂಡುರಂಗಿ

ಡಾ। ಬಿ. ಎನ್. ಕೆ. ಶರ್ಮಾ ಅವರನ್ನು ನಾನು 1936ರಲ್ಲಿ ಶ್ರೀ ಸತ್ಯಧ್ಯಾನತೀರ್ಥರು ಪದ್ಮಸರೋವರದಲ್ಲಿ ಏರ್ಪಡಿಸಿದ ವಿದ್ವತ್ ಸಭೆಯಲ್ಲಿ ಮೊದಲು ಕಂಡೆನು. 1936ರಿಂದ 1940ರ ವರೆಗಿನ ನಾಲ್ಕು ವರ್ಷಗಳ ವಿದ್ವತ್ ಸಭೆಯಲ್ಲಿಯೂ ಅವರು ಗೀತೆಯಲ್ಲಿನ ಒಂದು ಶ್ಲೋಕವನ್ನು ಉಲ್ಲೇಖಿಸಿ, ಅದಕ್ಕೆ ಮೂರು ಭಾಷ್ಯಕಾರರು ಮಾಡಿದ ವ್ಯಾಖ್ಯಾನವನ್ನು ತರ್ಕಶುದ್ಧವಾಗಿ ವಿವರಿಸಿ, ಶ್ರೀಮಧ್ವಾಚಾರ್ಯರ ವ್ಯಾಖ್ಯಾನದ ಶ್ರೇಷ್ಠತೆಯನ್ನು ಸರಳವಾದ ಮತ್ತು ಸುಂದರವಾದ ರೀತಿಯಲ್ಲಿ ವಿವರಿಸುತ್ತಿದ್ದರು. ಈ ಅವಧಿಯಲ್ಲಿ ಶ್ರೀವಿದ್ಯಾಮಾನ್ಯ ತೀರ್ಥರು ಶ್ರೀಸತ್ಯಧ್ಯಾನತೀರ್ಥರಲ್ಲಿ ಮಧ್ವಶಾಸ್ತ್ರದ ಉದ್ಗ್ರಂಥಗಳ ಅಧ್ಯಯನ ಮಾಡುತ್ತಿದ್ದರು. ಆ ಕಾಲದಲ್ಲಿ ನನಗೆ ಇಂಗ್ಲೀಷ್ ಭಾಷೆ ಬರುತ್ತಿದ್ದಿಲ್ಲ. ಅಲ್ಲಿ ನೆರೆದಿರುವ ಅನೇಕ ವಿದ್ವಾಂಸರಿಗೂ ಇಂಗ್ಲೀಷ್ ಭಾಷೆ ಬರುತ್ತಿದ್ದಿಲ್ಲ. ಆದರೂ, ಶ್ರೀ ಸತ್ಯಧ್ಯಾನತೀರ್ಥರು ಆಧುನಿಕ ಯುವ ಪಂಡಿತರಿಗೆ ಉತ್ತೇಜನ ಕೊಡುವ ಉದ್ದೇಶದಿಂದ ಇವರ ಉಪನ್ಯಾಸಗಳನ್ನು ಏರ್ಪಡಿಸಿ ಅನುಗ್ರಹಿಸುತ್ತಿದ್ದರು.

ಮುಂದೆ ನಾನು 1940ರಲ್ಲಿ ಚಿದಂಬರಂ ಕ್ಷೇತ್ರದಲ್ಲಿರುವ ಅಣ್ಣಾಮಲೈ ವಿಶ್ವವಿದ್ಯಾಲಯದ ಪ್ರಾಚ್ಯ ವಿದ್ಯಾವಿಭಾಗದಲ್ಲಿ ಮೀಮಾಂಸಾ ಶಿರೋಮಣಿ ವರ್ಗವನ್ನು ಸೇರಿದೆನು. ಆಗ ಡಾ।ಬಿ. ಎನ್. ಕೆ. ಶರ್ಮಾ ಅವರು ಆ ವಿಶ್ವವಿದ್ಯಾಲಯದ ಸಂಸ್ಕೃತ ವಿಭಾಗದಲ್ಲಿ ಉಪನ್ಯಾಸಕರಾಗಿದ್ದರು. ಆಗ ಅವರ ವಿಷಯದಲ್ಲಿ ವಿದ್ಯಾರ್ಥಿಗಳಿಗೂ, ಪ್ರಾಚ್ಯ ವಿದ್ಯಾವಿಭಾಗದ ವಿದ್ವಾಂಸರಿಗೂ ಅಭಿಮಾನ – ಗೌರವಗಳು ಇದ್ದವು. ಈ ಹೊತ್ತಿಗಾಗಲೇ ಅವರು 'ಚತುಃಸೂತ್ರೀ' ಎಂಬ ಶೀರ್ಷಿಕೆಯಲ್ಲಿ ಶ್ರೀಮಧ್ವಾಚಾರ್ಯರ ಭಾಷ್ಯದ ಮೊದಲಿನ ನಾಲ್ಕು ಅಧಿಕರಣಗಳನ್ನು ತ್ರಿವಿಕ್ರಮಪಂಡಿತಾಚಾರ್ಯರ 'ತತ್ವಪ್ರದೀಪ' ಮತ್ತು ಶ್ರೀಜಯತೀರ್ಥರ 'ತತ್ವಪ್ರಕಾಶಿಕಾ' ವ್ಯಾಖ್ಯಾನದೊಡನೆ ಸಂಪಾದನೆ ಮಾಡಿ ಇಂಗ್ಲೀಷ್‌ನಲ್ಲಿ ವಿಸ್ತಾರವಾದ ಭೂಮಿಕೆಯನ್ನು ಬರೆದು ಪ್ರಕಟಿಸಿದ್ದರು. 'ದ್ವೈತ ವೇದಾಂತದ ವಾಙ್ಮಯ ಇತಿಹಾಸ' ಎಂಬ ಸಮಾಲೋಚನಾತ್ಮಕವಾದ, ಸಂಶೋಧನಾತ್ಮಕವಾದ ಪ್ರಬಂಧವನ್ನು ಬರೆದು Ph.D. ಪದವಿಯನ್ನು ಸಂಪಾದಿಸಿದರು. ಈ ನಡುವೆ ನಾನು ಅಣ್ಣಾಮಲೈ ವಿಶ್ವವಿದ್ಯಾನಿಲಯದಲ್ಲಿ ಮೀಮಾಂಸಾ ವಿಭಾಗದಲ್ಲಿದ್ದಾಗ ಡಾ. ಶರ್ಮಾ ಅವರು ದ್ವೈತ ವೇದಾಂತದ ವಿಶ್ಲೇಷಣಾತ್ಮಕ ಅಧ್ಯಯನ, ಸಂಶೋಧನ, ಪ್ರಸಾರ-ಪ್ರಚಾರಾದಿಗಳನ್ನು ಕೈಗೊಳ್ಳುವಂತೆ ನನ್ನನ್ನು ಹುರಿದುಂಬಿಸಿ, ಅದರೆಡೆಗೆ ನನ್ನ ಮನ ಒಲಿಸುವಲ್ಲಿ ಯಶಸ್ವಿಯಾದರು. ಅನಂತರ ಶ್ರೀ ಬಿ.ಎನ್.ಕೆ. ಶರ್ಮಾ ಅವರು ನಾಲ್ಕು ವರ್ಷಗಳ ಕಾಲ ತಿರುವೈಯಾರದಲ್ಲಿ ಸಂಸ್ಕೃತ ಕಾಲೇಜಿನ ಪ್ರಾಂಶುಪಾಲರಾಗಿದ್ದರು. ಆಗ, ಅಲ್ಲಿ 'ವಿಜಯೀಂದ್ರಾಚಾರ್ಯರು' ಎಂಬ ಶ್ರೇಷ್ಠ ಮಾಧ್ವವಿದ್ವಾಂಸರು ನ್ಯಾಯಶಾಸ್ತ್ರದ ಅಧ್ಯಾಪಕರಾಗಿದ್ದರು. ಅವರ ಸಂಪರ್ಕದಿಂದ ಶ್ರೀ ಶರ್ಮಾ ಅವರು ದ್ವೈತವೇದಾಂತದ ಉದ್ಗ್ರಂಥಗಳ ಆಳವಾದ ಅಧ್ಯಯನವನ್ನು ಮಾಡಿದರು. ನಂತರ ಕೆಲವು ಕಾಲ ಉಡುಪಿಯಲ್ಲಿಯ ಅಷ್ಟಮಠೀಯ ಸಂಸ್ಕೃತ ಕಾಲೇಜಿನ ಪ್ರಾಂಶುಪಾಲರೂ ಆಗಿದ್ದರು.

ಮುಂದೆ ಎರಡು ವರ್ಷ ಉತ್ತರಕನ್ನಡದ ಕುಮಟಾನಗರದಲ್ಲಿ ಆರ್ಟ್ಸ್ ಕಾಲೇಜಿನ ಪ್ರಾಂಶುಪಾಲರಾಗಿದ್ದರು. ನಂತರ ಎರಡು ವರ್ಷ ಧಾರವಾಡದಲ್ಲಿ ಜೆ.ಎಸ್.ಎಸ್. ಕಾಲೇಜಿನಲ್ಲಿಯೂ ಸಂಸ್ಕೃತ ಪ್ರಾಧ್ಯಾಪಕರಾಗಿದ್ದರು. ಮುಂಬಯಿಯಲ್ಲಿ 1953ರಲ್ಲಿ Modern Education Society ಸ್ಥಾಪಿಸಿದ ರೂಪರೇಲ್ ಕಾಲೇಜಿನಲ್ಲಿ ಶ್ರೀ ಶರ್ಮಾ ಅವರು ಪ್ರಧಾನ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಈವರೆಗೆ ಸಂಚಾರಿ ಜೀವನವನ್ನು

ನಡೆಸುತ್ತಿದ್ದ ಶ್ರೀ ಶರ್ಮಾ ಅವರ ಜೀವನ ಸ್ಥಿರವಾಯಿತು. ಅಲ್ಲಿಂದ ಸೇವಾನಿವೃತ್ತಿ ಆಗುವವರೆಗೆ ಶ್ರೀ ಶರ್ಮಾರವರು ತಮ್ಮ ಸಂಶೋಧನೆ ಮತ್ತು ಗ್ರಂಥರಚನೆ ಕಾರ್ಯವನ್ನು ನಿರಾಂತಕವಾಗಿ ಮಾಡಲು ಅನುಕೂಲವಾಯಿತು. ಅವರು ಈ ಅವಧಿಯಲ್ಲಿ 'ಫಿಲಾಸಫಿ ಆಫ್ ಶ್ರೀಮಧ್ವಾಚಾರ್ಯ', 'ಬ್ರಹ್ಮಸೂತ್ರಭಾಷ್ಯಗಳ ಕಂಪಾರಿಟಿವ್ ಸ್ಟಡಿ', 'ಮಧ್ವಸ್ ಟೀಚಿಂಗ್ಸ್ ಇನ್ ಹಿಸ್ ಓನ್ ವರ್ಡ್ಸ್' ಎಂಬ ಮೂರು ಅಮೂಲ್ಯವಾದ ಗ್ರಂಥಗಳನ್ನು ಪ್ರಕಟಿಸಿದರು. ಇವನ್ನು ಮುಂಬಯಿಯ ಭಾರತೀಯ ವಿದ್ಯಾಭವನದವರು ಪ್ರಕಟಿಸಿದರು. ಈ ಗ್ರಂಥಗಳ ಪ್ರಕಾಶನಕ್ಕೆ ಶ್ರೀ ಆರ್.ವಿ. ಮೂರ್ತಿಯವರು ಬಹಳ ಸಹಕರಿಸಿದರು. ಡಾ। ಶರ್ಮಾ ಅವರ 'ದ್ವೈತವಾಙ್ಮಯದ ಇತಿಹಾಸ' ಎಂಬ Ph.D. ಪ್ರಬಂಧವು ಅವರು ಮುಂಬಯಿಗೆ ಹೋದ ಮೇಲೆಯೇ ಪ್ರಕಟವಾಯಿತು. ಇದಕ್ಕೆ ಡಾ। ರಾಧಾಕೃಷ್ಣನ್ ಅವರು ಮುನ್ನುಡಿಯನ್ನು ಬರೆದು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಇದಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಕೊಟ್ಟರು. 'ಫಿಲಾಸಫಿ ಆಫ್ ಶ್ರೀಮಧ್ವಾಚಾರ್ಯ' ಎಂಬ ಗ್ರಂಥಕ್ಕೆ ಮುಂಬಯಿ ವಿಶ್ವವಿದ್ಯಾಲಯದವರು 'D.Litt.' ಪದವಿಯನ್ನು ಕೊಟ್ಟರು. 1992ರಲ್ಲಿ ಅವರಿಗೆ ರಾಷ್ಟ್ರಪತಿ ಪ್ರಶಸ್ತಿಯು ದೊರೆಕಿತು. ಮುಂದೆ ಅವರಿಗೆ 1996 ಇಸವಿಯಲ್ಲಿ ಸರ್ವ ಪ್ರಥಮ ಶ್ರೀವಿದ್ಯಾಮಾನ್ಯಪ್ರಶಸ್ತಿ ಹಾಗೂ 1992ರಲ್ಲಿ ಅ.ಭಾ.ಮಾಧ್ವ ತತ್ವಜ್ಞಾನ ಸಮ್ಮೇಳನದ (ಹೈದರಾಬಾದ್) ಅಧ್ಯಕ್ಷತೆಯೂ ದೊರೆಯಿತು. ಮೇಲೆ ಹೇಳಿದ ನಾಲ್ಕು ಗ್ರಂಥಗಳಲ್ಲದೆ, ಅವರು 'ನ್ಯಾಯಸುಧಾ'ದ ಸಾರವನ್ನು ಮೂರು ಸಂಪುಟಗಳಲ್ಲಿ ಇಂಗ್ಲೀಷ್‌ನಲ್ಲಿ ಬರೆದರು. 'ನ್ಯಾಯಾಮೃತ'ವನ್ನು ಸಮರ್ಥಿಸಿ ಅವರು ಅಲಹಾಬಾದ್ ವಿಶ್ವವಿದ್ಯಾಲಯದ ಕೆ. ನಾರಾಯಣ್ ಅವರ ವಿಮರ್ಶೆಗೆ ಉತ್ತರವನ್ನು ಎರಡು ಸಂಪುಟಗಳಲ್ಲಿ ಬರೆದರು. ಈ ನಾರಾಯಣ್ ಅವರು ಮೊದಲು ನ್ಯಾಯಾಮೃತದ ಪರವಾಗಿ ಅದ್ವೈತಸಿದ್ಧಿಯನ್ನು ಖಂಡಿಸಿ ಒಂದು ಗ್ರಂಥವನ್ನು ಬರೆದಿದ್ದರು. ಆದರೆ ಮುಂದೆ ಯಾರದೋ ಒತ್ತಡದಿಂದ ನ್ಯಾಯಾಮೃತದ ವಿಮರ್ಶೆಯನ್ನು ಮಾಡಿ ಇನ್ನೊಂದು ಗ್ರಂಥವನ್ನು ಬರೆದರು. ಇದಕ್ಕೆ ಉತ್ತರವಾಗಿ ಡಾ। ಶರ್ಮಾ ಅವರು ತಮ್ಮ ನಿರ್ಣಯಾತ್ಮಕ ದ್ವಿಸಂಪುಟ ಗ್ರಂಥವನ್ನು ಬರೆದರು. ಹೀಗೆ ಡಾ। ಶರ್ಮಾ ಅವರು 97 ವರ್ಷಗಳ ಜೀವನದಲ್ಲಿ ನಿರಂತರವಾಗಿ ಮಾಧ್ವಶಾಸ್ತ್ರದ ಸಂಪತ್ತನ್ನು ಆಂಗ್ಲಭಾಷೆಯಲ್ಲಿ ವಿಶ್ಲೇಷಿಸಿ ಈ ಶಾಸ್ತ್ರಕ್ಕೆ ಅಂತಾರಾಷ್ಟ್ರೀಯ ಮಹತ್ವವನ್ನು ಒದಗಿಸಿ, ಜಾಗತಿಕ ಕೀರ್ತಿಯನ್ನು ಪಡೆದರು. ಅನೇಕ ಪೌರ್ವಾತ್ಯ ಪಾಶ್ಚಾತ್ಯ ವಿದ್ವಾಂಸರು ಇವರ ಗ್ರಂಥಗಳ ವಿಷಯದಲ್ಲಿ ಅಪಾರ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಇತ್ತೀಚೆಗೆ ದಿವಂಗತರಾದ ಇವರಿಗೆ ಶ್ರೀಹರಿ ವಾಯುಗುರುಗಳು ಚಿರಶಾಂತಿಯನ್ನು ಅನುಗ್ರಹಿಸಲಿ ಎಂದು ಪ್ರಾರ್ಥಿಸುವೆನು.

(ಅ.ಭಾ. ಮಾಧ್ವ ಮಹಾಮಂಡಲದ ಮುಖಪತ್ರಿಕೆ 'ತತ್ತ್ವವಾದ'ದ ಸೆಪ್ಟೆಂಬರ್, 2005ರ ಸಂಚಿಕೆಯಿಂದ)

ಆಚಾರ್ಯಃ ಪವನೋಽಸ್ಮಾಕಮ್
ಆಚಾರ್ಯಾಣೀ ಚ ಭಾರತೀ।
ದೇವೋ ನಾರಾಯಣಃ ಶ್ರೀಶಃ
ದೇವೀ ಮಂಗಲದೇವತಾ॥

ಮಹಾಮಹೋಪಾಧ್ಯಾಯ ಡಾ। ಬಿ.ಎನ್.ಕೆ ಶರ್ಮ

- ರಾಘವೇಂದ್ರ ಎನ್. ಕಲಿಭಟ್ಟ

ಸತತಾಭ್ಯಾಸದಿಂದಾಗಿ ಹಲವಾರು ಭಾಷೆಗಳನ್ನು ಅರಿತು ಅರಗಿಸಿಕೊಂಡು. ವೇದಾಧ್ಯಯನಗಳ ಆಳವಾದ ಚಿಂತನೆಯೊಡನೆ ಉಪನಿಷತ್‌ಗಳನ್ನು ಷಟ್‌ಶಾಸ್ತ್ರ ಹಾಗೂ ಹದಿನೆಂಟು ಪುರಾಣಾದಿಗಳನ್ನು ತಲಸ್ಪರ್ಶಿಯಾಗಿ ಅಭ್ಯಸಿಸಿ, ಪರಾಮರ್ಶಿಸಿ, ಮನನಮಾಡಿಕೊಂಡು ತಮ್ಮ ಸ್ವಾಧ್ಯಾಯಾನುಭವದಿಂದ, ಅನುಭೂತಿಗಳೊಡನೆ ವ್ಯಾಖ್ಯಾನಿಸುವ ಸ್ಥೈರ್ಯ, ಧೈರ್ಯ, ಸಾಹಸ, ಶಕ್ತಿಗಳಿಂದೊಡಗೂಡಿದ, ನೂರಾರು ಪಂಡಿತ ವರೇಣ್ಯರಿಗೆ ಸ್ಫೂರ್ತಿಯ ಸೆಲೆಯಾಗಿ, ಹತ್ತಾರು ಸಂಶೋಧಕರಿಗೆ ಮಾರ್ಗದರ್ಶಕರಾಗಿ ಅವರನ್ನು ರೂಪಿಸಿ ಅವರ ಸುಪ್ರಬಂಧಗಳು ವಿದ್ವತ್ ಜಗತ್ತಿಗೆ ನಿರೂಪಿತವಾಗುವಂತೆ ಮಾಡಿದ, ವಿದ್ವನ್ಮಣಿಗಳಲ್ಲಿ ಹಾಗೂ ಮಾಧ್ವ ಸಮಾಜದಲ್ಲಿ ವಿಶಿಷ್ಟಸ್ಥಾನ-ಗೌರವ ಹೊಂದಿದ ಡಾ।ಬಿ.ಎನ್.ಕೆ ಶರ್ಮರಿಗೆ ಇದೀಗ ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದವರು ಮಹಾಮಹೋಪಾಧ್ಯಾಯ ಎಂಬ ಬಿರುದು ನೀಡಿ ವಿಶೇಷವಾಗಿ ಸನ್ಮಾನಿಸಿದರು. ಇದೊಂದು ವಿದ್ವನ್ಮಣಿಗಳ ಸಂಕುಲಕ್ಕೆ ಸಂದ ವಿಶೇಷ ಗೌರವ. ಇದರಿಂದಾಗಿ ಡಾ। ಬಿ.ಎನ್.ಕೆ. ಶರ್ಮರ ಕೀರ್ತಿಶಿಖರ ಇನ್ನಷ್ಟು ಮೆರುಗುಗೊಂಡಿದೆ. ಶ್ರೀಯುತರಿಗೆ ಈಗ ತೊಂಬತ್ತೊಂದು (91) ವರುಷ. ಇಂತಹ ಇಳಿ ವಯಸ್ಸಿನಲ್ಲೂ ಸತತಾಭ್ಯಾಸ ಚಿಂತನೆಗಳಲ್ಲಿ ಮುಳುಗಿ ದಿನದ ಪ್ರತಿ ಕ್ಷಣವನ್ನೂ ಸತ್‌ಕಾಲಕ್ಷೇಪಣೆಯಲ್ಲಿ ಕಳೆಯುತ್ತಾರೆ. ಶ್ರೀಯುತರ ನೇತ್ರದೃಷ್ಟಿ ತೀಕ್ಷ್ಣವಾದುದು. ಅವರ ಜ್ಞಾನದೃಷ್ಟಿ ದಿವ್ಯವಾದುದು. ಅವರ ಅಂತರ್ ದೃಷ್ಟಿ ಸೂಕ್ಷ್ಮಾತಿ ಸೂಕ್ಷ್ಮವಾಗಿದೆ.

ಅವರ ನರ-ನಾಡಿಗಳಲ್ಲಿ ಜ್ಞಾನ ಹರಿಯುತ್ತಿದೆ. ಭಕ್ತಿ ಮಿಡಿಯುತ್ತಿದೆ. ಜ್ಞಾನಗಂಗೆ ಭಕ್ತಿ ತುಂಗೆಯರ ಸಮಾಗಮವೇ ಅವರ ಅಂತ-ರಂಗ. ಅದು ಬಹಿರಂಗದಲ್ಲೂ ತುಂಬಿ ತುಳುಕುತ್ತಿದೆ.

ಶ್ರೀಯುತರು 9-6-1909ರಲ್ಲಿ ಶ್ರೀ ಬಿ. ಎಸ್. ನಾರಾಯಣ ರಾವ್ ಮತ್ತು ಶ್ರೀಮತಿ ಲಕ್ಷ್ಮೀಬಾಯಿ ದಂಪತಿಗಳ ಸುಪುತ್ರರಾಗಿ ಜನಿಸಿದರು. ಇವರ ಮನೆಯು ಪಂಡಿತರ ಸಂಕುಲವಾಗಿತ್ತು. ಅಲ್ಲಿ ಗುರು ಕುಲದಂತಹ ವಾತಾವರಣವಿತ್ತು. ಪಂಡಿತ ವರೇಣ್ಯರ ಆಗಮನ, ಸಭೆ ನೆರವೇರಿಸುವುದು, ಮುಕ್ತ ಚರ್ಚೆಗಳು ಬಾಲ್ಯದಲ್ಲಿಯೇ ಇವರ ಮೇಲೆ ಬಹು ಪರಿಣಾಮ ಬೀರಿದವು. ಇವರ ತಂದೆ, ತಾತ ಹಾಗೂ ಮನೆತನದ ಹಿರಿಯರೆಲ್ಲರೂ ಪ್ರಕಾಂಡ ಪಂಡಿತರು. ಇವರ ತಾತಂದಿರು ಕೊಚ್ಚಿ ರಾಜರ ಆಸ್ಥಾನದ ವಿದ್ವನ್ಮಣಿಗಳು ಆಗಿದ್ದರು. ಮುಂದೆ ಕುಂಭಕೋಣಕ್ಕೆ ವಲಸೆ ಹೋದರು. ಅಲ್ಲಿಯೂ ಅವರಿಗೆ ಶ್ರೀ ಎಂ. ರಾಮರಾಯರಂತಹ ಗುರುಗಳು ದೊರಕಿದರು.

ಬಾಲ್ಯದಲ್ಲಿ ವೇದ ಶಾಸ್ತ್ರಗಳ ಅಧ್ಯಯನದೊಂದಿಗೆ ಲೌಕಿಕ ವಿದ್ಯೆಯನ್ನೂ ಕಲಿತರು. ತಮಿಳುನಾಡಿನ ಕಂಭಕೋಣಂದಲ್ಲಿ ಇಂಟರ್ ಮೀಡಿಯಟ್ ಪಾಸಾದರು. ಮುಂದೆ ಮದ್ರಾಸಿಗೆ ಹೋಗಿ ಅಲ್ಲಿಯ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಬಿ.ಎ (ಆನರ್ಸ್) ಮತ್ತು ಎಂ. ಎ. ಪದವಿಗಳನ್ನು ಉಚ್ಚ ತರಗತಿಯಲ್ಲಿ ಪಡೆದರು. ತಮ್ಮ ವಿದ್ವತ್ತು, ಪ್ರಾಮಾಣಿಕತೆ ಹಾಗೂ ಏಕ-ನಿಷ್ಠೆಯ ತಾದಾತ್ಮ್ಯಭಾವ ಹೊಂದಿರುವ ಅಧ್ಯಯನ ಶೀಲತೆಯಿಂದಾಗಿ ಅಲ್ಲಿಯ ಶಿಕ್ಷಕ ವೃಂದದ ಗಮನವನ್ನು ವಿಶೇಷವಾಗಿ ಸೆಳೆದರು. ಹಾಗೂ ಅವರ ಪ್ರೀತಿಗೆ ಪಾತ್ರರಾದರು. ಅಭ್ಯಾಸ ಮಾಡುತ್ತಿರುವಾಗಲೇ ಬರವಣಿಗೆಯನ್ನು ಕರಗತ ಮಾಡಿಕೊಂಡು ಶ್ರೇಷ್ಠ ಕೃತಿಗಳನ್ನು ರಚಿಸಲು ಪ್ರವೃತ್ತರಾದರು. ಅಧ್ಯಯನ ಅಧ್ಯಾಪನಗಳತ್ತ ವಿಶೇಷ ಒಲವಿರುವ ಡಾ। ಬಿ.ಎನ್.ಕೆ ಶರ್ಮರು ಜೀವನ ವೃತ್ತಿಗಾಗಿ ತಮ್ಮ ಪ್ರವೃತ್ತಿಯನ್ನು ಉದ್ದೀಪನಗೊಳಿಸುವ ಪ್ರಾಧ್ಯಾಪಕ ವೃತ್ತಿಯನ್ನು ಕೈಕೊಂಡರು. ಈಗ ಅವರ ವೃತ್ತಿ ಪ್ರವೃತ್ತಿಗಳು ಒಂದೇ ಆಗಿದ್ದರಿಂದ ಅವರಿಗೆ ಜೀವನದಲ್ಲಿ

ವಿಶೇಷ ಸಂತೃಪ್ತಿ ದೊರೆಯಿತು. ಎಷ್ಟಾದರೂ ಶ್ರೀಯುತರು ಅಭ್ಯಾಸ-ಸಂಶೋಧನೆಗಳಲ್ಲಿ ಒಲವಿರುವ ತಪಸ್ವಿಯ ದೃಷ್ಟಿಯುಳ್ಳ ಜ್ಞಾತ ಋಷಿಯಂತಹ ಬುದ್ಧಿ ಜೀವಿಗಳು.

ಇವರು 1931 ರಲ್ಲಿ ಅಣ್ಣಾಮಲೈ ವಿಶ್ವ ವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ನೇಮಕಗೊಂಡರು. ಇಲ್ಲಿ 1942 ರ ವರೆಗೆ ಸೇವೆ ಸಲ್ಲಿಸಿದರು. ನಂತರ ತಿರುವೈಯಾರಿನ ಸಂಸ್ಕೃತ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ನೇಮಕಗೊಂಡು ಆರು ವರುಷಗಳ ಕಾಲ ಸೇವೆ ಸಲ್ಲಿಸಿದರು. 1948ರ ನಂತರ ಸಂಶೋಧಕರಾಗಿ ಮಾರ್ಗದರ್ಶಕರಾಗಿ ಅನೇಕ ವಿಶ್ವವಿದ್ಯಾಲಯ ಹಾಗೂ ವೈದಿಕ ವಿದ್ಯಾ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದರು. ಅವುಗಳಲ್ಲಿ ಪ್ರಾಮುಖ್ಯವಾದುವುಗಳೆಂದರೆ ಪಂಜಾಬಿನ ವಿಶ್ವೇಶ್ವರಾನಂದ ವೇದಿಕ್ ರಿಸರ್ಚ್ ಇನ್ಸ್ಟಿಟ್ಯೂಟ್, ಸಂಸ್ಕೃತ ಕಾಲೇಜ್, ಉಡುಪಿ; ಕೆನರಾ ಕಾಲೇಜ್, ಕುಮಟಾ; ಕೆ. ಇ. ಬೋರ್ಡ್ ಕಾಲೇಜ್, ಧಾರವಾಡ. 1953ರಲ್ಲಿ ಮುಂಬೈಗೆ ಬಂದರು. ಆಗ ಅವರಿಗೆ ಇಲ್ಲಿಯ ಪ್ರತಿಷ್ಠಿತ ರೂಪಾರೇಲ್ ಕಾಲೇಜ್‌ದಲ್ಲಿ Professor & HOD of Sanskrit & Ardhamagadhi ಹುದ್ದೆ ದೊರೆಯಿತು. ಅವರು 1953 - 1969ರ ವರೆಗೆ ಸೇವೆ ಸಲ್ಲಿಸಿ ನಿವೃತ್ತರಾದರು. ಸೇವಾ ನಿವೃತ್ತಿಯ ನಂತರವೂ ಕೂಡ ಯುನಿವರ್ಸಿಟಿ ಗ್ರ್ಯಾಂಟ್ಸ್ ಕಮೀಶನ್ನಿನವರು 'ಬ್ರಹ್ಮಸೂತ್ರಗಳು ಹಾಗೂ ಅವುಗಳ ಭಾಷ್ಯಗಳು' ಎಂಬ ವಿಷಯದಲ್ಲಿ ವಿಶೇಷ ಸಂಶೋಧನೆ ಮಾಡಿ ಪ್ರಬಂಧ ಮಂಡಿಸಲು ಕೇಳಿಕೊಂಡರು. ಅದನ್ನು ಸಮ್ಮತಿಸಿ ಆ ಕಾರ್ಯವನ್ನು 1969 - 1974ರ ಅವಧಿಯಲ್ಲಿ ನೆರವೇರಿಸಿದರು.

ಶ್ರೀಯುತರು ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಸುಪ್ರಸಿದ್ಧ ಪಾಶ್ಚಾತ್ಯ ತತ್ವಜ್ಞಾನ ಮೀಮಾಂಸಕರಾದ ಕೀಥ್, ಮ್ಯಾಕ್‌ಡೋನೆಲ್, ಓಟೋಶ್ರೇಡರ್ ಹಾಗೂ ಭಾರತೀಯ ದಾರ್ಶನಿಕರಾದ ಡಾ|| ಸರ್ವಪಲ್ಲಿ ರಾಧಾಕೃಷ್ಣರ ಕೃತಿ ರತ್ನಗಳನ್ನು ವಿಶೇಷವಾಗಿ ಅಭ್ಯಸಿಸಿ ಪ್ರಭಾವಿತಗೊಂಡರು. ಈ ಎಲ್ಲ ಜಗತ್ ಪ್ರಸಿದ್ಧ ಲೇಖಕರ ಅಪಾರ ವಿದ್ವತ್ ಹಾಗೂ ಮಿಂಚಿನ ಬರವಣಿಗೆಯ ಶೈಲಿ ಇವರನ್ನು ಸೆರೆಹಿಡಿದವು.

ಇದೇ ಸಮಯದಲ್ಲಿ ಇವರು ಮಧ್ವಶಾಸ್ತ್ರದ ಬಗ್ಗೆ ವಿಶೇಷವಾಗಿ ಅಭ್ಯಸಿಸಿದ್ದು, ಜಾಗತಿಕ ಮಟ್ಟದಲ್ಲಿ ಈ ಶ್ರೇಷ್ಠ ತತ್ವಗಳನ್ನು ಪ್ರತಿಪಾದಿಸುವ ಕೃತಿ ಮೀಮಾಂಸೆಗಳು ಸಾಕಷ್ಟು ಪ್ರಮಾಣದಲ್ಲಿ ಹಾಗೂ ವಿಶಿಷ್ಟ ಪರಿಣಾಮಕಾರಿ ಎನಿಸುವ ರೀತಿಯಲ್ಲಿ ಬಂದಿಲ್ಲ ಎಂದು ತಿಳಿದು ತೀವ್ರ ಕಳವಳಕ್ಕೀಡಾದರು. ದ್ವೈತ ಸಿದ್ಧಾಂತಗಳಿಗೆ ಜಾಗತಿಕ ಮಟ್ಟದಲ್ಲಿ ಯೋಗ್ಯ ಸ್ಥಾನ ನ್ಯಾಯ ಒದಗಿಸಿ ಕೊಡಬೇಕೆಂದು ಸಂಕಲ್ಪಿಸಿದರು. ಹಾಗೂ ಕಾರ್ಯ ಪ್ರವೃತ್ತರಾದರು. ಕಠಿಣ ಸಂಶೋಧನೆ ಸಾಧನೆ ನಡೆಸಲು ಕಟಿಬದ್ಧರಾದರು. ಅಲ್ಲಿಯವರೆಗೆ ಲಭ್ಯವಿರುವ ತತ್ವಜ್ಞಾನ ಮೀಮಾಂಸಾ ಶಾಸ್ತ್ರಗಳಲ್ಲಿ ಮಧ್ವ ಸಿದ್ಧಾಂತಗಳು ಕೇವಲ ಉದಾಹರಣೆಯಂತೆ ನಮೂದಿಸಲ್ಪಡುತ್ತಿದ್ದವು. ಡಾ| ರಾಧಾಕೃಷ್ಣರು ತಮ್ಮ Indian Philosophy ಯಲ್ಲಿ ಮಧ್ವಸಿದ್ಧಾಂತಗಳ ಬಗ್ಗೆ ಕೇವಲ 13 ಪುಟಗಳಷ್ಟನ್ನು ಮಾತ್ರ ಬರೆದಿದ್ದರು! ಸಾಗರವನ್ನು ಬೊಗಸೆಯಲ್ಲಿ ಹಿಡಿಯಲು ಸಾಧ್ಯವೇ?

ಮಾಧ್ವ ಪರಂಪರೆಯಲ್ಲಿ ಸಾತ್ವಿಕ ಜೀವನ ನಡೆಸುತ್ತಿದ್ದ ಈ ಸದ್‌ಗೃಹಸ್ಥರಿಗೆ ಮಧ್ವ ಸಿದ್ಧಾಂತದ ಮೇಲಿನ ಅಭಿಮಾನ ಹೊರಹೊಮ್ಮಿ ಬಂದಿತು. ಹಾಗೂ ಯತಿ ಶ್ರೇಷ್ಠರ ಕೃತಿಗಳಿಗೆ ಉದ್ಬೋಧನೆ ಬರೆಯುವ ಕಾರ್ಯದಲ್ಲಿ ತಮ್ಮನ್ನು ಸುಧೀರ್ಘಕಾಲದವರೆಗೆ ತೊಡಗಿಸಿಕೊಂಡು ಅತ್ಯಮೂಲ್ಯವಾದ ಮೌಲಿಕ ಕೃತಿರತ್ನಗಳನ್ನು ರಚಿಸಿ ಪ್ರಕಟಿಸಿದರು. ದ್ವೈತ ಸಿದ್ಧಾಂತದ ಶ್ರೇಷ್ಠತೆ ಮತ್ತು ಔಚಿತ್ಯ, ತ್ರಿಕಾಲಕ್ಕೂ ಸತ್ಯವೆನಿಸುವ ಶತಃಸಿದ್ಧಗೊಂಡ ಜೀವನದ-ಜಗತ್ತಿನ ಅಷ್ಟಜ ಸತ್ಯಗಳನ್ನು ವಿಶದೀಕರಿಸುವ ಗ್ರಂಥಗಳನ್ನು ದೇಶ-ವಿದೇಶೀ ಜನರಿಗೆ ಅಭ್ಯಾಸ, ಜ್ಞಾನಾರ್ಜನೆಯ

ಅನುಕೂಲಕ್ಕಾಗಿ ಇಂಗ್ಲೀಷ್ ಭಾಷೆಯಲ್ಲಿ ರಚಿಸಿದರು. ಅವು ಬಹಳ ಜನಪ್ರಿಯವಾದವು.

ಇವರು ರಚಿಸಿದ ಗ್ರಂಥಗಳು ಭಾರತದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾದವು. ಅದರಂತೆ ಅನೇಕ ಪಾಶ್ಚಾತ್ಯ ದೇಶಗಳ ಸುಪ್ರಸಿದ್ಧ ವಿಶ್ವವಿದ್ಯಾಲಯಗಳಲ್ಲಿ ಪಠ್ಯ ಪುಸ್ತಕಗಳಿಗಾಗಿ ಅಂಗೀಕರಿಸಲ್ಪಟ್ಟವು.

ಇದರಿಂದಾಗಿ ಶ್ರೀಯುತರಿಗೆ ರಾಷ್ಟ್ರೀಯ ಮಟ್ಟದ ಹಾಗೂ ಅಂತರ್‍ರಾಷ್ಟ್ರೀಯ ಮಟ್ಟದ ಮನ್ನಣೆ, ಗೌರವ ಬಿರುದಾವಲಿಗಳು ದೊರೆತವು. ಹಿಮಾಲಯದೆತ್ತರಕ್ಕೆ ಬೆಳೆದ ವ್ಯಕ್ತಿತ್ವವು ಭಾರತದ ದಕ್ಷಿಣೋತ್ತರಗಳಲ್ಲಿ ಮೆರೆದು ದಶದಿಶೆಗಳಲ್ಲಿ ಜ್ಞಾನವನ್ನು ಪ್ರಚಾರಗೊಳಿಸಿ, ಸಾಗರೋತ್ತರಗಳನ್ನು ದಾಟಿ ಜಾಗತಿಕ ಮಟ್ಟದಲ್ಲಿ ಕೀರ್ತಿಯನ್ನು ಗಳಿಸಿತು. ಮಧ್ವ ವಾಙ್ಮಯದ ಆಕಾಶದಲ್ಲಿ ಇವರೊಬ್ಬ ಧ್ರುವತಾರೆ ಎನಿಸಿದ್ದಾರೆ.

ಶ್ರೀಯುತರಿಗೆ ಅನೇಕ ಗೌರವಗಳು ಸಂದಿವೆ. ಅವುಗಳಲ್ಲಿ ಮುಖ್ಯವಾದವುಗಳು ಹೀಗಿವೆ. 1. ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ 1963ರಲ್ಲಿ ಗೌರವ 2. ಶ್ರೇಷ್ಠ ಸಂಸ್ಕೃತ ವಿದ್ವಾಂಸರೆಂದು ಭಾರತದ ರಾಷ್ಟ್ರಪತಿಯವರಿಂದ 1992ರಲ್ಲಿ ಪ್ರಶಸ್ತಿ 3. ಮಹಾರಾಷ್ಟ್ರ ರಾಜ್ಯ ಸರಕಾರದಿಂದ 1993ರಲ್ಲಿ ಗೌರವ ಪ್ರಶಸ್ತಿ ಪ್ರದಾನ 4. ಒಂದು ಲಕ್ಷ ರೂಪಾಯಿಯಿಂದೊಡಗೂಡಿದ ಪೂರ್ಣಪ್ರಜ್ಞ ಪ್ರತಿಷ್ಠಾನದ ಮೊಟ್ಟಮೊದಲ ವಿದ್ಯಾಮಾನ್ಯ ಪ್ರಶಸ್ತಿ 1996ರಲ್ಲಿ. 5. ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದವರು ನೀಡಿ ಗೌರವಿಸಿದ ಮಹಾಮಹೋಪಾಧ್ಯಾಯ ಬಿರುದು.

ಈ ಗೌರವ ಸಮಾರಂಭವು 13-11-99ರಂದು ಸಂಜೆ 6 ಗಂಟೆಗೆ ಮುಂಬೈಯ ರೂಪಾರೇಲ್ ಕಾಲೇಜಿನಲ್ಲಿ ನೆರವೇರಿತು. ಈ ಸಮಾರಂಭಕ್ಕೆ ಮುಂಬೈ ವಿಶ್ವವಿದ್ಯಾಲಯದ ಉಪಕುಲಪತಿ ಡಾ। ಶ್ರೀಮತಿ ಸ್ನೇಹಲತಾ ದೇಶ್‍ಮುಖ್‍ರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಅದಲ್ಲದೇ ಅಂದಿನ ಸಮಾರಂಭದಲ್ಲಿ ರಾಷ್ಟ್ರೀಯ ಸಂಸ್ಕೃತ ವಿದ್ಯಾಪೀಠದ ಕುಲಪತಿಗಳಾದ ಡಾ। ವಿ. ಆರ್. ಪಂಚಮುಖಿ, ಉಪ-ಕುಲಪತಿಗಳಾದ ಪ್ರೊ. ಪ್ರಹ್ಲಾದ್‍ಚಾರ್, ರಿಜಿಸ್ಟ್ರಾರರಾದ ಪ್ರೊ. ಐ.ಎನ್.ಭಟ್ಟರು ಉಪಸ್ಥಿತರಿದ್ದು ತಮ್ಮ ಪಾಂಡಿತ್ಯಪೂರ್ಣ ಭಾಷಣಗಳಲ್ಲಿ ಡಾ। ಬಿ.ಎನ್.ಕೆ. ಶರ್ಮರನ್ನು ಅಭಿನಂದಿಸಿ ಶ್ರೀಯುತರ ಜೀವನ-ಸಾಧನೆ, ಕೃತಿಗಳ ಮೌಲ್ಯಮಾಪನ ಮಾಡಿ ಅವರ ಶ್ಲಾಘನೀಯ ಸೇವೆಯನ್ನು ಮನಸಾರೆ ಕೊಂಡಾಡಿದರು. ಅದರಂತೆ ಡಾ। ಶರ್ಮರವರ ಅನೇಕ ಶಿಷ್ಯರೂ, ಗಣ್ಯ ಮಹನೀಯರೂ ಸಂದರ್ಭೋಚಿತವಾಗಿ ಮತನಾಡಿ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು ಹಾಗೂ ಈ ಜ್ಞಾನನಿಧಿಗೆ ಹೃನ್ಮನಃಪೂರ್ವಕವಾಗಿ ವಂದನೆ ಅಭಿನಂದನೆ ಸಲ್ಲಿಸಿದರು.

ಈ ಸಮಾರಂಭದಲ್ಲಿ ಸಂದ ಗೌರವಗಳಿಂದ ನಿಜಕ್ಕೂ ಮಹಾ ಮಹೋಪಾಧ್ಯಾಯರು ಕೃತಾರ್ಥರಾದರು. ಅವರ ಅರವತ್ತು ವರುಷಗಳ ಕಾಲ ನಡೆಸಿದ ವಾಙ್ಮಯ ತಪಸ್ಸಿಗೆ ಶ್ರೇಷ್ಠ ಗೌರವ ಸಂದಿದ್ದು ಅವರಿಗೆ ಅಂದು ಒಂದು ಬಗೆಯ ಅನಿರ್ವಚನೀಯ ಆನಂದ ಉಂಟಾಗಿತ್ತು. ಅಂದು ಈ ಜ್ಞಾನ ವಯೋವೃದ್ಧರು ನಿಜಕ್ಕೂ ಜ್ಞಾನನಿಧಿ ತಪೋನಿಧಿಗಳಂತೆ ಕಂಡರು.

ಆ ದಿನ ನಾನು ಅವರ 91 ವರುಷಗಳ ಸುದೀರ್ಘ ಸಾರ್ಥಕ ಜೀವನವನ್ನು ಪರಾಮರ್ಶಿಸಿದಾಗ ಕೆಳಕಂಡ ಸಂಗತಿಗಳು ನನ್ನ ಗಮನಕ್ಕೆ ಬಂದವು.

ಅಧಿಕಾರಾವಧಿಯಲ್ಲಿ ಅವರು ರಾಜ ಋಷಿಯಂತೆ ಇದ್ದರು. ಪಾಶ್ಚಾತ್ಯ ಮಾದರಿಯ ಉಡುಪು (ಟೈ, ಕೋಟು, ಪ್ಯಾಂಟು, ಬೂಟು) ಧರಿಸುತ್ತಿದ್ದರು! ವೇಷಭೂಷಣದಲ್ಲಿ ಪಾಶ್ಚಾತ್ಯದ ಅನುಕರಣೆಯಿದ್ದರೂ, ಪೌರ್ವಾತ್ಯದ

ವಿಚಾರಧಾರೆ ಅವರ ಹೃನ್ಮನಗಳಲ್ಲಿ ಮಿಡಿಯುತ್ತಿತ್ತು. ಚಿಂತನೆಗೆ ಚಾಲನೆ ನೀಡುತ್ತಿತ್ತು. ಪಂಡಿತವರೇಣ್ಯರ ಸಮೂಹಕ್ಕೆ ವಾದ-ವಿವಾದಗಳಿಗೆ-ವಾಕ್ಯಾರ್ಥಕ್ಕೆ ಎಳೆದೊಯ್ಯುತ್ತಿತ್ತು. ಅವರ ಪ್ರತಿಭೆ ಎಲ್ಲೆಡೆ ವಿಜಯ ದುಂಧುಭಿಯನ್ನು ಮೊಳಗಿಸಿತ್ತು. ದೇಶದ ಉದ್ದಗಲಕ್ಕೂ ಸಂಚರಿಸಿ ಅನೇಕ ಸಭೆ ಸಮಾರಂಭಗಳಲ್ಲಿ ತಮ್ಮ ವಿದ್ವತ್ಪೂರ್ಣ ಉಪನ್ಯಾಸಗಳಿಂದ ಹರಿತವಾದ ತಾರ್ಕಿಕ ಬುದ್ಧಿಯಿಂದ ನಿರ್ಭಿಡೆಯಿಂದ ನಿರ್ಭಯವಾಗಿ ಖಂಡನೆ ಮಂಡನೆಗಳನ್ನು ನಿರೂಪಿಸುತ್ತಿರುವುದರಿಂದಾಗಿ ವಿಶೇಷ ಜನಪ್ರೀಯತೆಯನ್ನು ಗಳಿಸಿದ್ದಾರೆ. ಇಂಥ ಸರಸ್ವತಿ ಪುತ್ರನಿಗೆ ವಿಜಯಶ್ರೀ ವಿಜಯಮಾಲೆ ಹಾಕಿದ್ದಾಳೆ. ಸುಧೀರ್ಘಕಾಲದ ಸಾಧನೆಯ ಫಲವಾಗಿ ದಿಗ್ವಿಜಯ ಸಾಧಿಸಿದ್ದಾರೆ. ಸಾಧಕರಿಗೆ ಪೂಜ್ಯರಾಗಿದ್ದಾರೆ ಹಾಗೂ ಪ್ರಾತಃ ಸ್ಮರಣೀಯರಾಗಿದ್ದಾರೆ.

ಅಧ್ಯಯನ ಅಧ್ಯಾಪನಗಳು ಅವರ ಸ್ವಾಭಾವಿಕ ಪ್ರವೃತ್ತಿ. ಯೋಗಾಯೋಗದಿಂದ ಅವರ ಪ್ರವೃತ್ತಿಯೇ ವೃತ್ತಿಯಾಗಿತ್ತು. ನಿವೃತ್ತಿಯ ನಂತರವೂ ತಮ್ಮ ಪ್ರವೃತ್ತಿಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಇಂದಿಗೂ ಕೂಡ ಅಧ್ಯಯನದಲ್ಲಿ ತಲ್ಲೀನರಾಗಿರುವುದನ್ನು ನಾವು ಕಾಣುತ್ತೇವೆ. ಈ ಅಧ್ಯಯನ ಪ್ರವೃತ್ತಿ ಜೀವನದ ಕೊನೆಯ ಕ್ಷಣದವರೆಗೂ ಮುದುವರೆಯುವ ಲಕ್ಷಣಗಳನ್ನು ನಾವು ಕಾಣುತ್ತೇವೆ. ಇವರದು ಹಿಮಾಲಯದಂತಹ ಮೇರು ವ್ಯಕ್ತಿತ್ವ. ಗಂಗೆಯಂತೆ ನಿರರ್ಗಳವಾಗಿ ಹರಿಯುತ್ತಿರುವ ಜ್ಞಾನ ಪ್ರವಾಹ, ಜಲಪಾತದಂತೆ ರಭಸದಿಂದ ಪ್ರಪಾತಗೊಳ್ಳುತ್ತಿರುವ ಉನ್ನತ ಪ್ರತಿಭೆ. ಅರಳಿದ ಸುಂದರ ಸುಗಂಧಿತ ಪುಷ್ಪಗಳಂತೆ ಸೂರೆಗೊಂಡ ಪದಸಮುಚ್ಚಯಗಳು ವಿಕಸಿಸಿ ಸುವಾಸನೆ ಬೀರುತ್ತಿರುವ ಸುಂದರ ಹೂ ಬಳ್ಳಿಗಳಂತಹ ವಾಕ್ಯ-ವ್ಯಾಖ್ಯಾನಗಳ ಮಾತಿನ ಮಂಟಪ. ಇವುಗಳೊಡನೆ ಜೊತೆ ಜೊತೆಯಾಗಿ ಉತ್ಕೃಷ್ಟ ಭಾಷಾ ಶೈಲಿಯಿಂದಾಗಿ ಇವರ ಕೃತಿಗಳು ಸಮೃದ್ಧಗೊಂಡು ರಸಮಯವಾಗಿ, ರಮ್ಯವೆನಿಸಿ, ವಿಜೃಂಭಣೆ ಹೊಂದಿ ಮಾಧ್ವ ವಾಙ್ಮಯ ಲೋಕದಲ್ಲಿ ಮಿನುಗುವ ತಾರೆಗಳಂತೆ ಮಿಂಚಿವೆ, ಮೆರುಗಿವೆ, ಚಿರಸ್ಥಾಯಿಯಾಗಿವೆ.

ಅಪ್ರತಿಮ ಧೀಶಕ್ತಿ, ವಿಲಕ್ಷಣವಾದ ಜ್ಞಾಪಕ ಶಕ್ತಿ, ಪ್ರಜ್ವಲಿಸುವ ಉಜ್ವಲ ಪ್ರತಿಭೆಗಳ ತ್ರಿವೇಣಿ ಸಂಗಮ ಈ ಮೇರು ವ್ಯಕ್ತಿತ್ವದಲ್ಲಡಗಿವೆ.

ಇಂದಿಗೂ ಕೂಡ ಇವರು ವೇದೋಪನಿಷತ್‌ಗಳ ಅಧ್ಯಯನದಲ್ಲಿ ಮಂತ್ರಗಳಲ್ಲಡಗಿದ ಸಾರ - ತತ್ವ - ರಹಸ್ಯಗಳ ತಾತ್ವಿಕ - ಮಾರ್ಮಿಕ ಚಿಂತನ ಮಂಥನಗಳ ಮಂತ್ರಾಲೋಚನೆಯಲ್ಲಿ ಸುದೀರ್ಘ ಕಾಲದ ವರೆಗೆ ಮಗ್ನರಾಗಿರುವುದನ್ನು ನಾವು ಕಾಣುತ್ತೇವೆ. ಅದೇ ಅವರ ತದೇಕ ಚಿತ್ತದ ಧ್ಯಾನ ಸಾಧನೆಯ ಒಂದು ದಿವ್ಯರೂಪ. ಇವರೊಬ್ಬ ತಪಸ್ವಿಗಳು, ಪುನೀತರು, ಪುಣ್ಯಜೀವಿಗಳು. ಸದಾಕಾಲ ಸಾಧನೆಯ ಯೋಗದಲ್ಲಿರುವ ಸಿದ್ಧಿ ಪುರುಷರು. ಈ ಶತಮಾನದ ಶಕ ಪುರುಷರು.

ಇವರು ವಿಶಾಲ ವೃಕ್ಷದಂತೆ ಎತ್ತರಕ್ಕೆ ಬೆಳೆದು ಉತ್ತರಕ್ಕೆ ವಿಜಯ ಪತಾಕೆ ಹಾರಿಸಿ ಉತ್ತರೋತ್ತರಕ್ಕೂ ಉಜ್ವಲವಾಗಿ ಉಳಿಯುವಂತಹ ಅಮೂಲ್ಯ ಗ್ರಂಥ ರಚನೆಗಳನ್ನು ಮಾಡಿದ್ದಾರೆ. ಅವರು ಹಚ್ಚಿದ ಜ್ಞಾನದೀಪವು ಅವರ ಜೀವನದುದ್ದಕ್ಕೂ ಪ್ರಜ್ವಲಿಸುವ ನಂದಾದೀಪವಾಗಿದೆ. ಮಾಧ್ವ ಸಮಾಜಕ್ಕೊಂದು ದಾರಿ ದೀಪವಾಗಿದೆ.

ಡಾ। ಬಿ.ಎನ್.ಕೆ. ಶರ್ಮರ ಏಕೈಕ ಸುಪುತ್ರರಾದ ಡಾ। ಎಸ್.ಕೆ. ಭವಾನಿಯವರು ಹನ್ನೊಂದು ಭಾಷೆಗಳನ್ನು ಕಲಿತು ಪ್ರಾವೀಣ್ಯ ಸಾಧಿಸಿದ್ದಾರೆ. ವಿದ್ಯಾವಿಹಾರದ (ಮುಂಬೈಯ) ಕೆ.ಜೆ.ಸೋಮೈಯಾ ಕಾಲೇಜಿನಲ್ಲಿ ಸಂಸ್ಕೃತ ವಿಭಾಗಾಧ್ಯಕ್ಷರೂ ಪ್ರಾಂಶುಪಾಲರೂ ಆಗಿದ್ದಾರೆ. ಭಾರತೀಯ ಮೌಲ್ಯಗಳನ್ನು ಶಿಕ್ಷಣದಲ್ಲಿ ಅಳವಡಿಸಿ ಅನುಷ್ಠಾನಕ್ಕೆ ತರಬೇಕೆನ್ನುವ ಕಳಕಳಿ ಇವರಲ್ಲಿದೆ.

ಡಾ। ಎಸ್.ಕೆ. ಭವಾನಿಯವರು ಶ್ರವಣ ಕುಮಾರನಂತೆ ಏಕನಿಷ್ಠೆಯಿಂದ ತಮ್ಮ ಮಾತಾ ಪಿತೃಗಳ ಸೇವೆಯನ್ನು ನಿರ್ಮಲ, ನಿಶ್ಚಲ, ನಿರ್ವ್ಯಾಜ, ನಿರಪೇಕ್ಷ ಮನೋಭಾವನೆ ಯಿಂದ ಆಸ್ಥೆ, ಆಸಕ್ತಿಗಳಿಂದ ನಿರಂತರವಾಗಿ, ನಿರಾತಂಕವಾಗಿ ಉಪಾಸನೆಯ ಕ್ರಮದಲ್ಲಿ ನಡೆಸಿಕೊಂಡು ಬಂದಿದ್ದಾರೆ. ಈ ಕಾರ್ಯದಲ್ಲಿ ಅವರ ಸಹಧರ್ಮಿಣಿ ಶ್ರೀಮತಿ ಲಕ್ಷ್ಮೀಯವರು ಸಹಭಾಗಿಯಾಗಿ ಸಹಕಾರ ನೀಡುತ್ತಲಿದ್ದಾರೆ. ತಮ್ಮ ತಾತ ಪಾದರ ಬಗ್ಗೆ ಪೂಜ್ಯ ಭಾವನೆಯನ್ನು ಅವರ ಮೊಮ್ಮಕ್ಕಳೂ ಕೂಡ ತಳೆದಿದ್ದಾರೆ. ಇವರ ಮನೆ ಒಂದು ಬೃಂದಾವನದಂತಹ ವಿಹಾರ ಕೂಟವಾಗಿದೆ. ಇಲ್ಲಿ ವಿದ್ಯೆಯ ಸುಗಂಧಗಾಳಿ ವಿಹರಿಸುತ್ತಿದೆ. ಭವಾನಿಯವರ ಮನೆ ನಿಜಕ್ಕೂ ಇನ್ನೊಂದು ವಿದ್ಯಾ ವಿಹಾರವಾಗಿದೆ.

ಡಾ। ಬಿ.ಎನ್.ಕೆ. ಶರ್ಮರ ವೃದ್ಧ - ಧರ್ಮಪತ್ನಿ ಶ್ರೀಮತಿ ಹೇಮಲತಾದೇವಿಯವರು. ಶ್ರೀಯುತರನ್ನು ತುಂಬಾ ಪ್ರೋತ್ಸಾಹಿಸುತ್ತಿದ್ದಾರೆ.

ಡಾ। ಬಿ.ಎನ್.ಕೆ. ಶರ್ಮರು ಮಹಾಸಾಧನಾ ಜೀವಿ. ಜೀವನದುದ್ದಕ್ಕೂ ಅವರು ನಡೆದ ಸಾಧನೆಯ ದಾರಿ ಪುಣ್ಯದಾರಿ. ಅವರು ಅಧ್ಯಯನಕ್ಕೆ ಕುಳಿತ ಸ್ಥಳ, ಏಕಾಗ್ರತೆಯಿಂದ ಆಚರಿಸಿದ ತಪಸ್ಸಿನ ಪುಣ್ಯಸ್ಥಳ, ಅವರು ಗುರಿಸಾಧನೆಗಾಗಿ ಮುಟ್ಟಿದ ಸ್ಥಳ, ತಲುಪಿದ ಘಟ್ಟ ಒಂದು ಪುಣ್ಯಧಾಮವೆನಿಸುವಂತಾಗಿದೆ.

ಇಂತಹ ಇಳಿ ವಯಸ್ಸಿನಲ್ಲೂ ಡಾ। ಬಿ.ಎನ್.ಕೆ. ಶರ್ಮರಲ್ಲಿ ಸಂಶೋಧಕರ ಚಿಕಿತ್ಸಕ ಬುದ್ಧಿ, ಮೀಮಾಂಸಕರ ತತ್ವ ಚಿಂತನೆ, ಪಾಂಡಿತ್ಯದ ಪ್ರತಿಭಾ ಸಂಪನ್ನಗಳನ್ನು ನಾವು ನಿಚ್ಚಳವಾಗಿ ಕಾಣಬಹುದಾಗಿದೆ. ಇದು ಅವರಲ್ಲಿ ವ್ಯಕ್ತಾವ್ಯಕ್ತವಾಗಿದೆ. (ವ್ಯಕ್ತ ಪ್ರಪಂಚದಲ್ಲಿ - ಲೇಖನ ಭಾಷಣ, ಸಂವಾದಗಳ ರೂಪದಲ್ಲಿ ಮತ್ತು ಅವ್ಯಕ್ತ ಪ್ರಪಂಚದಲ್ಲಿ - ಚಿಂತನ, ಮನನ, ಧ್ಯಾನ, ಮೀಮಾಂಸೆ, ತರ್ಕಗಳ ಧ್ಯಾನ ಮಗ್ನತೆಯ ರೂಪದಲ್ಲಿ ಇರುತ್ತವೆ) ಮಹಾಮಹೋಪಾಧ್ಯಾಯ ಬಿರುದು ನೀಡಿ ಸತ್ಕರಿಸುವ ಸಮಾರಂಭದಲ್ಲಿ ಒಬ್ಬ ಮಹನೀಯರು ಡಾ। ಬಿ.ಎನ್.ಕೆ ಶರ್ಮರನ್ನು ಅಭಿನವ ಜಯತೀರ್ಥರೆಂದು ಹೊಗಳಿ ಕೊಂಡಾಡಿದರು.

91 ವಯಸ್ಸಿನ ಈ ಪುಣ್ಯಜೀವಿ ಶತಾಯುಷ್ಯವನ್ನು ದಾಟಿ ಇನ್ನೂ ಮುಂದೆ ಮುಂದೆ ಆಯುಷ್ಯಾಭಿವೃದ್ಧಿಯನ್ನು ಪಡೆಯಲಿ. ಇವರ ಜೀವನದಲ್ಲಿ ಸಂವತ್ಸರಗಳ ಕಾಲಚಕ್ರ ಪುನಃ ಪುನಃ ಪುನರಾಗಮಿಸಲಿ, ಸಹಸ್ರಾರು ಪೂರ್ಣ ಚಂದ್ರನನ್ನು ಪುನರಪಿ ವೀಕ್ಷಿಸುವ ಸುಯೋಗ, ಪುಣ್ಯಪರ್ವ ಶ್ರೀಯುತರಿಗೆ ದೊರೆಯಲಿ. ಶ್ರೀಮಂತರವಾಣಿ ಅಮರವಾಣಿಯಾಗಲಿ.

(ಈ ಲೇಖನವು 4-12-1999ರಂದು ಮುಂಬಯಿಯ 'ಈ ಸಂಜೆ ಸುದ್ದಿ' ದೈನಿಕದಲ್ಲಿ ಪ್ರಕಟವಾಗಿತ್ತು)

ದಿವಂಗತ ಡಾ॥ ಶರ್ಮಾರವರಿಗೆ ನನ್ನ ಶ್ರದ್ಧಾಂಜಲಿ

ಚಿರಸ್ಮರಣೆ

ಸಹಸ್ರಚಂದ್ರದರ್ಶನ ಪಡೆದ ಪುಣ್ಯಶೀಲರ್ನೀವಾದಿರಿ
ಸೂರ್ಯನಂದದಿ ಬೆಳಗಿದಿರಿ ಮಾಧ್ವವಾಙ್ಮಯ ವಿಶ್ವದಲಿ
ಸುದೀರ್ಘಕಾಲದಿ ನೆಲೆಸಿ ಸಾರ್ಥಕ್ಯವ ಮೆರೆಸಿದಿರಿ
ಅಗಲಿ ಇಹದಿಂ ಎಮ್ಮನಿಟ್ಟಿರಿ ಚಿರಸ್ಮರಣೆಯ ಋಣದಲಿ

ಮಾಧ್ವ ತತ್ವಶಾಸ್ತ್ರ ಶಿರೋಮಣಿ, ಧೀಮಂತ ಚೇತನ ಡಾ। ಬಿ.ಎನ್.ಕೆ. ಶರ್ಮಾ

– ಡಾ. ಸಂಜೀವ ಕೆ. ಶೆಟ್ಟಿ

ಸುಪ್ರಸಿದ್ಧ ವೇದಾಂತಜ್ಞ, ಮಾಧ್ವ ತತ್ವ ಶಾಸ್ತ್ರ ಶಿರೋಮಣಿ, ಮಹಾನ್ ಪಂಡಿತ, ಗುರುಕುಲ ತಿಲಕ, ಋಷಿ ಸದೃಶ ಡಾ। ಭವಾನಿ ನಾರಾಯಣರಾವ್ ಕೃಷ್ಣಮೂರ್ತಿ ಶರ್ಮಾ ಅವರು ರಾಷ್ಟ್ರೀಯ ತಥಾ ಅಂತರ್ರಾಷ್ಟ್ರೀಯ ವಿದ್ವತ್‌ವಲಯದಲ್ಲಿ ಸ್ವಯಂ ಪ್ರತಿಭೆಯಿಂದ ಪ್ರಜ್ವಲಿಸುತ್ತಿರುವ ಜ್ಞಾನಮೂರ್ತಿಯಾಗಿದ್ದಾರೆ. ಸಹೃದಯರ ಕಣ್ಮಣಿಯಾಗಿ ಕಂಗೊಳಿಸುವ ಧೀಮಂತ ಚೇತನರಾಗಿದ್ದಾರೆ. ಎಲ್ಲದಕ್ಕೂ ಮಿಗಿಲಾಗಿ ಮಾಧ್ವ ತತ್ವ ವಿಚಾರಗಳನ್ನು ಇಂಗ್ಲೀಷ್ ಭಾಷೆಯ ಮುಖೇನ ಅರ್ಥಪೂರ್ಣ ರಚನೆಗಳಿಂದ ದಾಖಲಾತ್ಮಕವಾದ ರೀತಿಯಲ್ಲಿ ಉದ್ಗ್ರಂಥಗಳನ್ನು ವಿಶ್ವಕ್ಕೆ ನೀಡಿದ ಪರಮ ಸಾಧಕರು.

''ಸರ್ವಜ್ಞನೆಂಬುವನು ಗರ್ವದಿಂದಾವನೆ, ಸರ್ವರೊಳಗೊಂದೊಂದು ನುಡಿ ಕಲಿತು ವಿದ್ಯೆಯ ಪರ್ವತವೆ ಅದ ಸರ್ವಜ್ಞ'' ಎಂಬ ಕವಿವಾಣಿಯನ್ನು ಜೀವನದಲ್ಲಿ ಸಾಕಾರಗೊಳಿಸಿಕೊಂಡವರು ಡಾ। ಶರ್ಮಾ. ಸತತ ಪರಿಶ್ರಮದಿಂದ ಪರಿಪೂರ್ಣತೆಯತ್ತ ಅವರು ನಡೆದು ಬಂದ ದಾರಿ ಅಮೋಘವಾದುದು. ಅವರ ಬದುಕು-ಬರಹಗಳ ಯಶೋಗಾಥೆ ಅನುಪಮವಾದುದು.

ಇಂದಿಗೆ ತೊಂಬತ್ತೊಂದರ ವಯೋವೃದ್ಧರಾಗಿ ಜ್ಞಾನವೃದ್ಧರಾಗಿ ಅತ್ಯುನ್ನತ ನೆಲೆಯಲ್ಲಿ ನಿಂತು ಬಾನೆತ್ತರಕೆ ಏರು ನನ್ನೆತ್ತರಕೆ ಎಂದಿರುವ ವರಕವಿ ಬೇಂದ್ರೆಯವರಂತೆ ಮುಕ್ತ ಮನಸ್ಸಿನಿಂದ ಹರಸುವ ಅವರ ಧ್ವನಿ, ಸಾಧಕರಿಗೆ ಸ್ಫೂರ್ತಿಚೇತನದ ಮಂತ್ರವಾಣಿಯಾಗಿರುತ್ತದೆ. ಎತ್ತರದ ದೇಹದ ನೇರ ನಿಲುವಿನಲ್ಲಿ ಶುಭ್ರ ದೃಷ್ಟಿಗಳಿಂದ ಅಪ್ರತಿಮ ಸ್ಮರಣಶಕ್ತಿಯಿಂದ ಕೂಡಿದ ಅವರ ಪ್ರಕೃತಿ ಒಂದು ಮಹಾನ್ ಸತ್ಕೃತಿಯ ಸ್ವರೂಪ ಲಕ್ಷಣಗಳಿಂದ ಕೂಡಿದುದು; ಆಳವಾದ ಸಂಶೋಧನೆಯ ನೆಲೆಯಲ್ಲಿ ನುರಿತ ಹರಿತ ವಿಚಾರ ರಶ್ಮಿಗಳನ್ನು ಬೀರುವ ಅವರ ಅದ್ಭುತ ಪ್ರತಿಭೆಯು ವಿಸ್ಮಯ, ಅಭಿಮಾನ, ಗೌರವದೊಡನೆ ತಲೆಬಾಗಿ ವಂದಿಸುವಂತೆ ಮಾಡುವ ಸಾತ್ವಿಕ ತೇಜಸ್ಸಿನಿಂದ, ಓಜಸ್ಸಿನಿಂದ ಬೆಳಗುತ್ತಿದೆ.

ಅವರೊಡನೆ ಕೆಲವು ನಿಮಿಷಗಳನ್ನು ಕಳೆದರೆ ಸಾಕು! ಕಾಂತಿಹೀನನಲ್ಲಿಯೂ ಕಾಂತಿಯ ಕಳೆಯನ್ನುಂಟು ಮಾಡಿ, ಚಿಂತೆಯಿಂದ ಚಿಂತನೆಗೆ ಹಚ್ಚುವ ಅವರ ವಿಚಾರಧಾರೆಯು ಉಲ್ಲೇಖನೀಯವಾಗಿರುತ್ತದೆ.

ಅವರ ವಾಣಿ ''ಮಾತೆಂಬುದು ಜ್ಯೋತಿರ್ಲಿಂಗ'' ವೆಂಬಂತೆ ಕೇಳಿಗಿನ ಅಂತಃಕರಣವನ್ನು ಬೆಳಗಿಸುವಂತೆ ಶಕ್ತಿಯುತವಾಗಿದೆ. ಪ್ರಾಂಜಲವಾಗಿದೆ. ಮಾತನ್ನು ಮಾಣಿಕ್ಯದಂತೆ ಬಳಸಿಕೊಳ್ಳಬೇಕು; ಶುಷ್ಕ ಧಾನ್ಯ ದಂತಾಗಬಾರದೆಂಬ ಅವರ ಧೋರಣೆ ಮಹತ್ವದ್ದಾಗಿದೆ.

ಈ ಮಹಾನ್ ಚಿಂತಕರ ಅದ್ಭುತ ಸಾಧನೆಗಳ ಹಿಂದೆ ಇವರು ಅನುಭವಿಸಿರುವ ವೇದನಾತ್ಮಕ ಬದುಕಿನ ಘಟನೆಗಳನ್ನು ಸನ್ನಿವೇಶಗಳನ್ನು ಅರ್ಥಮಾಡಿ ಕೊಂಡಾಗ, ಛಲದಂಕಮಲ್ಲನಾಗಿ ಸಾಧನೆಗಳ ಸರದಾರರಾಗಿ ಅವರ ಸಾಹಿತ್ಯಕ ಸೃಷ್ಟಿ, ಸೃಜನಶೀಲತೆಯ ಅತ್ಯುನ್ನತ ದೃಷ್ಟಿ, ನಮ್ಮೆಲ್ಲರನ್ನು ನಿಬ್ಬೆರಗಾಗಿಸುತ್ತದೆ. ಅವರ ಕೃತಿರತ್ನಗಳನ್ನು ಅವಲೋಕಿಸಿದಾಗ ಅವರ ಬ್ರಹ್ಮ ತೇಜಸ್ಸಿನ ಪ್ರಭೆಯು ನಮ್ಮರಿವಿಗೆ ಬರುತ್ತದೆ. ಅವರ ಮೇರು ವ್ಯಕ್ತಿತ್ವ ನಮ್ಮೆಲ್ಲರನ್ನು ಕುಬ್ಜರನ್ನಾಗಿಸುತ್ತದೆ.

ಅನೇಕ ಊರು ಪ್ರದೇಶಗಳನ್ನು ಸುತ್ತಾಡಿದ ವೈಭವ ಪೂರ್ಣವೈವಿಧ್ಯಮಯ ಸಂಸ್ಕೃತಿಗಳ ಅನುಭವ ಸಂಪನ್ನರಾಗಿರುವ ಡಾ। ಶರ್ಮಾ ಅವರು 1909ರಲ್ಲಿ ತಮಿಳುನಾಡಿನ ಸೇಲಂದಲ್ಲಿ ಜನಿಸಿದರು. ಡಾ। ಶರ್ಮಾ ಅವರ ಹಿರಿಯರು ಘನಪಂಡಿತ, ಸುಸಂಸ್ಕೃತ ಮನೆತನಕ್ಕೆ ಸೇರಿದವರು. ಅವರ ತಾತ, ಮುತ್ತಾತರು ಮಹಾನ್

ವಿದ್ವಾಂಸರುಗಳಾಗಿದ್ದು ಹಿಂದಿನ ತ್ರಾವಣ ಕೋರ್ - ಕೊಚ್ಚೀನ್ ಸಂಸ್ಥಾನದ ರಾಜರ ಆಸ್ಥಾನ ವಿದ್ವಾಂಸರುಗಳಾಗಿ ಮೆರೆದವರು; ಕುಲ ಪರಂಪರೆಯ ಕೀರ್ತಿಯನ್ನು ಬೆಳಗಿಸಿದವರು. ಕಾಲ ಧರ್ಮಕ್ಕೊಳಗಾಗಿ ರಾಜ ಮನೆತನಗಳ ಕ್ಷೀಣಿಸುವಿಕೆಯಿಂದಾಗಿ, ಡಾ. ಶರ್ಮಾ ಅವರ ತೀರ್ಥರೂಪರು ಅಂಚೆ ಕಚೇರಿಯಲ್ಲಿ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದರೂ ಮನೆತನದ ವೈದಿಕ ಪರಂಪರೆಯ ಕೀರ್ತಿಯನ್ನು ಹೆಚ್ಚಿಕೊಂಡರಲ್ಲದೆ, ಜನಾನುರಾಗಿ, ವ್ಯಕ್ತಿಯಾಗಿಯೂ ಬಾಳಿದ ಹಿರಿಮೆ ಗಮನೀಯವಾಗಿದೆ. ಡಾ. ಶರ್ಮಾ ಅವರು ಬಿ.ಎಸ್. ನಾರಾಯಣ ರಾವ್ ಮತ್ತು ಶ್ರೀಮತಿ ಲಕ್ಷ್ಮೀಬಾಯಿ ದಂಪತಿಗಳ ಸುಪುತ್ರರಾಗಿ ಶ್ರೀಮಂತ ಜೀವನ ಭೋಗಗಳನ್ನು ಅನುಭವಿಸದೆ ಹೋದುದೇ ಮುಂದೆ ಸಿದ್ಧಿ ಸಾಧನೆಯಲ್ಲಿ ತೊಡಗುವಂತೆ ಮಾಡಿತಲ್ಲದೆ; ಯೋಗಿಯಂತೆ ಸರ್ವಮಾನ್ಯರಾಗಿ ಬಾಳುವಂತಾದುದು ಯೋಗಾಯೋಗವೆಂದೇ ಹೇಳಬೇಕು.

ಡಾ. ಶರ್ಮಾ ಅವರ ಸಮಗ್ರ ಬದುಕಿನತ್ತ ಕ್ಷಕಿರಣ ಬೀರಿದಾಗ ಜಾನಪದದಲ್ಲಿಯ ತಾಯಿಯೋರ್ವಳು ತನ್ನ ಮಗನು ಸುಪುತ್ರನಾಗಬೇಕೆಂದು ಹಾರೈಸುವ ರೀತಿಯಂತೆ ಶ್ರೀಮತಿ ಲಕ್ಷ್ಮೀಬಾಯಿ ಅವರು ತನ್ನ ಕಂದನ ಬಗ್ಗೆ ಹಾಡಿರಬೇಕೆಂದು ತಿಳಿಯಬಹುದು. ಆ ಜಾನಪದ ಹಾಡಿನಲ್ಲಿ "ಆಚಾರಕ್ಕರಸಾಗು, ನೀತಿಗೆ ಪ್ರಭುವಾಗು, ಮಾತಿನಲ್ಲಿ ಚೂಡಾಮಣಿಯಾಗು, ನನ್ನ ಕಂದ, ಜ್ಯೋತಿಯೇ ಆಗು ನೀ ಜಗಕ್ಕೆಲ್ಲ" ಎಂಬ ಮಮತೆಯ ಮಾತೆಯ ಹರಕೆಯು ಎದೆ ಹಾಲನ್ನೀಯುವಾಗ ಹಾಡಿದ್ದು ಅಮರವಾಣಿ; ಮುಂದೆ ಡಾ. ಶರ್ಮಾ ಅವರು ಆ ಮಾತೃ ಹೃದಯದ ನಿರ್ಮಲ ಬಯಕೆಯನ್ನು ಕೃತಿ ರೂಪದಲ್ಲಿ ಸಾಧಿಸಿ ತೋರಿಸಿದ ಬಗೆಯನ್ನು ಗಮನಿಸಿದಾಗ ಆನಂದಭಾವ ರಸಗಂಗೆ ಹರಿದು ಆ ಮಾತೆ ಪುನೀತೆಯಾಗಿರಬೇಕು; 'ಧನ್ಯಾಸ್ಮಿ' ಅಂದಿರಬೇಕು.

ಬಾಲ್ಯದಲ್ಲಿ ಸ್ವಗೃಹ ಪಾಠ ಶಾಲೆಯಲ್ಲಿ ಹಿರಿಯರಿಂದ ವಿದ್ಯೆಯ ದೀಕ್ಷೆಯನ್ನು ಪಡೆದು ಸಂಸ್ಕೃತ ಭಾಷೆಯ ವಿದ್ಯಾರ್ಥಿಯಾಗಿ, ವೇದ ಅಧ್ಯಯನದ ಅಭ್ಯರ್ಥಿಯಾಗಿ, ಸೂಕ್ಷ್ಮಮತಿ ಚಿಂತಕರಾಗಿ ಬೆಳೆಯತೊಡಗಿದ ಡಾ. ಶರ್ಮಾ ಅವರು ಮುಂದೆ ಶಾಲೆಯಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಯೆನಿಸಿಕೊಂಡರು.

ತಮಿಳುನಾಡಿನ ಕುಂಬಕೋಣಮ್‌ನಲ್ಲಿ ಇಂಟರ್ ಮೀಡಿಯೇಟ್ ಮುಗಿಸಿ, ಮದ್ರಾಸಿನ ಸುಪ್ರಸಿದ್ಧ ಪ್ರೆಸಿಡೆನ್ಸಿ ಮಹಾ ವಿದ್ಯಾಲಯದಲ್ಲಿ ಬಿ.ಎ (ಆನರ್ಸ್) ಮತ್ತು ಎಂ.ಎ ಪದವಿಗಳನ್ನು ಶ್ರೇಷ್ಠ ರೀತಿಯಲ್ಲಿ ಗಳಿಸಿ ಗುರುವರ್ಯರ ಪ್ರಶಂಸೆಗೆ ಪಾತ್ರರಾದರು. ಮಹಾವಿದ್ಯಾಲಯದಲ್ಲಿ ಅಭ್ಯಾಸ ಮಾಡುತ್ತಿರುವಾಗಲೇ ಬರವಣಿಗೆಗೆ ತೊಡಗಿದ ಶರ್ಮಾ ಅವರು ಅಧ್ಯಯನ ಶಿಸ್ತನ್ನು ತೀವ್ರವಾಗಿ ಕರಗತ ಮಾಡಿಕೊಂಡರು; 'ಎಳೆಗರು ಎತ್ತಾಗುತ್ತದೆ' ಎಂಬ ಮಾತನ್ನು ಕೃತಿಯಲ್ಲಿ ತೋರಿಸಿ ಹಿರಿಯರನ್ನು ಬೆರಗುಗೊಳಿಸಿದ ಖ್ಯಾತರೆನಿಸಿದರು. ವಿದ್ಯಾರ್ಥಿವಲಯದಲ್ಲಿ ಜ್ಯೋತಿ ಎನಿಸಿದರು. ವಿದ್ಯಾರ್ಥಿದೆಶೆಯಲ್ಲಿ ವಿದ್ಯಾಭ್ಯಾಸದಲ್ಲಿ ಲೇಖನಿಯಲ್ಲಿ ತನ್ನನ್ನು ಅರ್ಪಿಸಿಕೊಂಡ ವಿಧಾನವು ಆಧುನಿಕಯುಗದ ವಿದ್ಯಾರ್ಥಿಗಳಿಗೆ ಅತ್ಯುತ್ತಮ ಮಾರ್ಗದರ್ಶಕವಾಗಿರುತ್ತದೆ.

ವಿಶ್ವವಿದ್ಯಾಲಯದ ಉನ್ನತ ಪದವಿಯಿಂದ ಉತ್ತೀರ್ಣರಾದಂತೆ ಸಂಸ್ಕೃತ ಪ್ರಾಧ್ಯಾಪಕರಾಗಿ ನಟರಾಜನ ಪವಿತ್ರ ಕ್ಷೇತ್ರ ಚಿದಂಬರದ ಅಣ್ಣಾಮಲೈ ವಿಶ್ವವಿದ್ಯಾಲಯದಲ್ಲಿ ನೇಮಕಗೊಂಡದ್ದು ಅವರ ಪ್ರತಿಭೆಗೆ ಸಂದ ಗೌರವವಾಗಿತ್ತು, (1931-41). ಅಲ್ಲಿಂದ ಮುಂದೆ ತಿರುವೈಯಾರಿನ ಶಾಸಕೀಯ ರಾಜಾ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ (1942-48) ಸಂಸ್ಕೃತ, ತಮಿಳು ಮತ್ತು ಕನ್ನಡ ಸೇವೆಯನ್ನು ಮಾಡಿದರು. ಪಂಜಾಬಿನ ಹೋಶಿಯಾರ್‌ಪುರದ ವಿಶ್ವೇಶ್ವರಾನಂದ ವೇದಿಕ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಡಾ. ವಿಶ್ವ ಬಂಧು ಶಾಸ್ತ್ರಿಯವರು

ಡಾ. ಶರ್ಮಾ ಅವರನ್ನು ಆಮಂತ್ರಿಸಿ, ಗೌರವದ ಹುದ್ದೆಯನ್ನು ನೀಡಿದರು. ಈವಾಗಲೇ ರಾಷ್ಟ್ರಮಟ್ಟದಲ್ಲಿ ಅವರ ಶೋಧನೆಯ ಸಫಲತೆಯ ಕೀರ್ತಿಯು ಹರಡಿತ್ತು. ಅವರ ವೇದಾಂತ ಸೇವೆಯನ್ನು ಮೆಚ್ಚಿ ಉಡುಪಿಯ ಪೂರ್ಣಪ್ರಜ್ಞ ಸಂಸ್ಕೃತ ಕಾಲೇಜಿಗೆ ಪ್ರಾಂಶುಪಾಲರನ್ನಾಗಿ ಆಡಳಿತ ಮಂಡಳಿ ನೇಮಿಸಿತ್ತು. ಸ್ವಲ್ಪ ಸಮಯದಲ್ಲಿಯೇ ಅವರ ನಿರುಕುಶ ಮತಿತ್ವದ ಪ್ರಭಾವವನ್ನು ಬೀರಿದ ಕಾರಣ ಕೀರ್ತಿ ಹತ್ತಡೆ ಹರಡಿತು. ಇಂಗ್ಲೀಷ್, ಸಂಸ್ಕೃತ, ಕನ್ನಡ ಭಾಷೆಗಳಲ್ಲಿ ಅಪಾರ ಪ್ರಭುತ್ವವನ್ನು ಪಡೆದು ವಿದ್ವತ್ತಿನಿಂದ ಸದಭಿಮಾನದಿಂದ ಮೆರೆಯ ತೊಡಗಿದರು.

ಅವರ ಆಡಳಿತ ವೈಖರಿ, ಕಾರ್ಯದಕ್ಷತೆ, ಪ್ರಾಮಾಣಿಕತೆಯು ಉತ್ತರ ಕನ್ನಡ ಜಿಲ್ಲೆಯ ಕುಮಟೆಯಲ್ಲಿ ಆರಂಭಗೊಂಡ ಕೆನರಾ (ಎ.ವಿ.ಬಾಳಿಗಾ) ಕಲಾ ಮತ್ತು ವಿಜ್ಞಾನ ಮಹಾ ವಿದ್ಯಾಲಯಕ್ಕೆ ಪ್ರಾಚಾರ್ಯರನ್ನಾಗಿ ಆಮಂತ್ರಿಸುವಷ್ಟು ಪ್ರಬಲವಾಗಿತ್ತು. ಅಲ್ಲಿಂದ ಮುಂದೆ ಕನ್ನಡದ ಗಂಡು ಮೆಟ್ಟಿನ ನೆಲ ಧಾರವಾಡದ ಕೆ.ಇ. ಬೋರ್ಡ್ಸ್ ಮಹಾವಿದ್ಯಾಲಯದಲ್ಲಿ ಸಂಸ್ಕೃತದ ಪ್ರಧಾನ ಪ್ರಾಧ್ಯಾಪಕರಾಗಿ ಡಾ. ಶರ್ಮಾ ಅವರು ಸೇವೆ ಸಲ್ಲಿಸ ತೊಡಗಿದರು. ಇಷ್ಟೆಲ್ಲ ಓಡಾಟ, ಒತ್ತಡಗಳ ನಡುವೆಯೂ ಅಧ್ಯಯನ, ಸಂಶೋಧನೆಗಳ ಮಹತ್ತರ ಕಾರ್ಯಗಳನ್ನು ಕೈ ಬಿಡದೆ ಕಂಗೆಡದೆ ಹಠಯೋಗಿಯಾಗಿ ಮುನ್ನಡೆದ ಅವರ ವೃತ್ತಿಪರ ಜೀವನ ಗಾಥೆಯೂ ಗಮನಾರ್ಹ. ಎಂತಹ ಎಡರು ತೊಡರುಗಳಿದ್ದರೂ ಎಂಟೆದೆಯವರಾಗಿ ಸದಭಿಮಾನದಿಂದ ಅವರು ಬದುಕನ್ನು ಬರಹವನ್ನು ಎದುರಿಸಿದ ವಿಧಿ ವಿಧಾನಗಳು ಕೆಲವೊಮ್ಮೆ ನಿಬ್ಬೆರಗಾಗಿಸುವಂತವುಗಳಾಗಿವೆ. ಕವಿರಾಜ ಮಾರ್ಗದಲ್ಲಿ ಕನ್ನಡಿಗರನ್ನುದ್ದೇಶಿಸಿ ಹೇಳಿದ 'ಅಭಿಮಾನಿಗಳ್, ಅತ್ಯುಗ್ರರ್, ಗಭೀರ ಚಿತ್ತರ್' ಮುಂತಾದ ಉಕ್ತಿಗಳು ಡಾ। ಶರ್ಮಾ ಅವರ ವ್ಯಕ್ತಿತ್ವಕ್ಕೂ ಸರಿ ಹೊಂದುವ ನುಡಿಮುತ್ತುಗಳಾಗಿವೆ. ಅಭಿಮಾನಕ್ಕೆ ಸತ್ಯಕ್ಕೆ ಧಕ್ಕೆ ಬಂದ ಸಂದರ್ಭದಲ್ಲಿ ತಕ್ಷಣ ರಾಜೀನಾಮೆ ನೀಡಿದ ಘಟನೆಗಳು ಅವರ ಸ್ವಾಭಿಮಾನಕ್ಕೆ ನಿದರ್ಶನಗಳಾಗಿವೆ. ಜೀವನದಲ್ಲಿ, ವೃತ್ತಿಯಲ್ಲಿ ಮುಂದಡಿ ಇಟ್ಟರೇ ಹೊರತು ಎಂದಿಗೂ ಹಿಂದಡಿಯಿಟ್ಟವರಲ್ಲ.

ವೃತ್ತಿಯಲ್ಲಿ ಸಂತೃಪ್ತಿಯ ನೆಲೆಯನ್ನು ಕಾಣುವ ಮಹಾತ್ವಾಕಾಂಕ್ಷಿ ಡಾ. ಶರ್ಮಾ ಅವರನ್ನು ಕರ್ಮಕಾಶಿಯೆನಿಸಿದ, ಸಹಸ್ರಾರು ವಿದ್ವಾಂಸರಿಗೆ ಕಾರ್ಯಕ್ಷೇತ್ರವೆನಿಸಿರುವ, ಮುಂಬಯಿಯು ಚುಂಬಕ ಶಕ್ತಿಯಂತೆ ತನ್ನೆಡೆಗೆ ಸೆಳೆಯಿತು. ಅವರ ಜೀವನಕ್ಕೆ ಸಂಶೋಧನೆಗೆ ಸ್ಥಿರ ಸ್ಥಾನವಿತ್ತು ವಿಸ್ತಾರಕ್ಕೆ ಎತ್ತರಕ್ಕೆ ಬೆಳೆಯುವಂತೆ ಮಾಡಿದುದು ಇಂದು ಇತಿಹಾಸವಾಗಿದೆ. 1953 ಡಾ. ಶರ್ಮಾ ಅವರ ಜೀವನಕ್ಕೆ ಹೊಸ ತಿರುವನ್ನು ನೀಡಿದ ವರ್ಷ.

ಮುಂಬಯಿಯ ಮಾಟುಂಗಾ ರೋಡ್‌ನ (ಪ. ರೈಲ್ವೇ) ಸುಪ್ರಸಿದ್ಧ ರೂಪಾರೇಲ್ ಮಹಾವಿದ್ಯಾಲಯದಲ್ಲಿ ಪ್ರಧಾನ ಸಂಸ್ಕೃತ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಖ್ಯಾತ ನಾಮರಾದ ಪುಣೆಯ ಪಿ.ಕೆ. ಗೋಡೆ ಮತ್ತು ಮುಂಬಯಿಯ ಆರ್.ಎಸ್ ಹುಕ್ಕೇರಿಕರ್ ಅವರ ಹೃನ್ಮನದ ಬೆಂಬಲ ಪ್ರೀತಿ ಗೌರವ ಡಾ. ಶರ್ಮಾ ಅವರಿಗೆ ಪೂರಕವಾಗಿತ್ತು. ತನ್ನ ಬಹುಮುಖ ವ್ಯಕ್ತಿತ್ವ, ಅಪಾರಪಾಂಡಿತ್ಯ, ರಾಷ್ಟ್ರೀಯ ಅಂತಾರಾಷ್ಟ್ರೀಯ ಖ್ಯಾತಿಗಳಿಂದಾಗಿ ವಿಶ್ವವಿದ್ಯಾಲಯ ಅನುದಾನ ಆಯೋಗವು ಅವರನ್ನು ಸಂಸ್ಕೃತದ 'ಪ್ರೊಫೆಸರ್ ಎಮೆರಿಟಸ್' ಆಗಿ ನೇಮಕ ಮಾಡಿದ ಕಾರಣ ಮುಂದೆ ರೂಪಾರೇಲ್‌ನಲ್ಲಿಯೇ 1974ರವರೆಗೆ ಸೇವಾವಧಿ ವಿಸ್ತಾರಗೊಂಡಿತು.

ಸಹಸ್ರಾರು ವಿದ್ಯಾರ್ಥಿಗಳಿಗೆ ಸಂಸ್ಕೃತದ ಅಚ್ಚು ಮೆಚ್ಚಿನ ಗುರುವರ್ಯರಾಗಿ ಗೌರವಾನ್ವಿತರಾಗಿರುವ ಡಾ. ಶರ್ಮಾ ಅವರು, ಅನೇಕರಿಗೆ ಸಂಶೋಧನೆಯಲ್ಲಿ ಮಾರ್ಗದರ್ಶಕರಾಗಿಯೂ ಬೆಳಗಿದ್ದರು. ಹತ್ತು ವಿದ್ಯಾರ್ಥಿಗಳು ಇವರ ಮಾರ್ಗದರ್ಶನದಲ್ಲಿ ಮಹಾ

ಪ್ರಬಂಧಗಳನ್ನು ಸಿದ್ಧಪಡಿಸಿ ಮುಂಬಯಿ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿಗಳಿಂದ ಸನ್ಮಾನಿತರಾಗಿರುವರು. ಅವರಲ್ಲಿ ಇಂದು ಪ್ರಖ್ಯಾತರೆನಿಸಿರುವ ಡಾ. ಡಿ. ಎನ್. ಶಾನುಭಾಗ, ಡಾ. ಬಿ. ಬಿ. ಕುಲಕರ್ಣಿ ಮುಂತಾದವರು ಅಗ್ರಗಣ್ಯರು.

ಮಾಧ್ವ ತತ್ವಶಾಸ್ತ್ರ ವೇದಾಂತಗಳ ಬಗ್ಗೆ ಆಳವಾದ ಅಧ್ಯಯನಕ್ಕೆ ತೊಡಗಿಸಿಕೊಂಡ ಡಾ. ಶರ್ಮಾರವರ ಚಿಂತನಶೀಲತೆ ನಿರಂತರ ಪ್ರತ್ಯುತ್ಪನ್ನಮತಿತ್ವದ ಪ್ರಖರ ಪಾಂಡಿತ್ಯದ ಅಭಿವ್ಯಕ್ತಿಯಲ್ಲಿ ಶಿಖರದಂತೆ ಎದ್ದು ಕಾಣುತ್ತಿದೆ. ತನ್ನ ಬದುಕನ್ನೇ ಅಧ್ಯಯನಕ್ಕೆ ಮುಡಿಪಾಗಿಟ್ಟಿರುವ ಋಷಿ ಸದೃಶರು, ಅವರು ಸೋಲನ್ನರಿಯದ ಸಾಧಕರು. ಅಂತಾರಾಷ್ಟ್ರೀಯ ಸುವಿಖ್ಯಾತ ತತ್ವಜ್ಞಾನಿ, ಭಾರತದ ಮಾಜಿ ರಾಷ್ಟ್ರಪತಿ ಡಾ. ಸರ್ವೆಪಲ್ಲಿ ರಾಧಾಕೃಷ್ಣನ್ ಅವರ ಸಮರ್ಥ ಮಾರ್ಗದರ್ಶನದಲ್ಲಿ ಬರೆದ 'ದ್ವೈತವೇದಾಂತ ವಾಙ್ಮಯ ಚರಿತ್ರೆ' ಎಂಬ ಮಹಾಪ್ರಬಂಧಕ್ಕೆ ಮದ್ರಾಸು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಗಳಿಸಿದ ಕೀರ್ತಿ ಇವರದ್ದಾಗಿರುತ್ತದೆ. ಮುಂದೆ 'ಫಿಲಾಸಫಿ ಆಫ್ ಮಧ್ವಾಚಾರ್ಯ' ಎಂಬ ಉದ್ಗ್ರಂಥ ಬರೆದು ತತ್ವಶಾಸ್ತ್ರ ವಿಭಾಗ, ಮುಂಬಯಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದಾಗ ಇವರಿಗೆ ಅತ್ಯುನ್ನತ ಪದವಿ 'ಡಿ.ಲಿಟ್' ಲಭಿಸಿದ್ದು ಉಲ್ಲೇಖನೀಯ. 'ತತ್ವಶಾಸ್ತ್ರ'ದಲ್ಲಿ ಸಂಸ್ಕೃತ ಪ್ರಾಧ್ಯಾಪಕರೊಬ್ಬರು 'ಡಿ.ಲಿಟ್.' ಪಡೆಯುಪವರಲ್ಲಿ ಇವರು ಪ್ರಥಮರಾದುದು ಅವರ ಘನ ಪಾಂಡಿತ್ಯಕ್ಕೆ ಕಿರೀಟವಿಟ್ಟಂತಾಗಿದೆ. ಅಂತಹ ಅರ್ಹತೆಯಿದಿಯೆಂಬುದು ಅಭಿಮಾನದ ಸಂಗತಿಯಾಗಿರುತ್ತದೆ.

ಶ್ರೀ ಸರಸ್ವತಿ ದೇವಿಯ ಪೂರ್ಣ ಅನುಗ್ರಹದಿಂದ ಡಾ. ಶರ್ಮಾ ಅವರು ವಾಕ್‌ಶ್ರೀಯಿಂದ ಬೆಳಗಿದಂತೆ ಅಕ್ಷರ ಶ್ರೀಯಿಂದ ವಿಶ್ವಮಾನ್ಯ ಕೃತಿಗಳ ಸಾಹಿತಿಯಾಗಿ ಸಂಶೋಧಕರಾಗಿ ಪ್ರಜ್ವಲಿಸುವಂತೆ ಆದುದು ಮಾಧ್ವಮತ ತತ್ವಭುವನದ ಭಾಗ್ಯವೆಂದೇ ತಿಳಿಯತಕ್ಕದ್ದು. ಅವರ 25 ಕೃತಿಗಳನ್ನು, ಮೌಲಿಕವಾದ ನೂರಾರು ಪ್ರೌಢ ಪ್ರಬಂಧಗಳನ್ನು ಓದಿದಾಗ ಅಚಲ ತಪಸ್ಸಿನ ಸಾಧನೆಗಳು ಅದ್ವಿತೀಯ ವಾಙ್ಮಯ ಗ್ರಂಥಗಳಲ್ಲಿ ದಿವ್ಯವಾಗಿ ರೂಹುಪಡೆದಿರುವುದನ್ನು ಮನಗಾಣುತ್ತೇವೆ. 'ನಾನೃಷಿಃ ಕುರುತೇ ಕಾವ್ಯಂ' ಎಂಬ ಹೇಳಿಕೆ ಇಂತಹ ಧೀಮಂತರನ್ನು ಉದ್ದೇಶಿಸಿಯೇ ರಚನೆಗೊಂಡಿದೆ. ಇವರ Ph.D. ಪ್ರಬಂಧ. 'ದ್ವೈತ ವೇದಾಂತ ವಾಙ್ಮಯ ಇತಿಹಾಸ' ಸಂಪುಟ 1 ಮತ್ತು 2 ರಚನೆಗೊಂಡ ಬಳಿಕ ಪ್ರಕಟನೆಗೊಳ್ಳುವುದು ಅಷ್ಟೇ ಅಗತ್ಯವಾಗಿತ್ತು. ಆಗ ಪ್ರಕಟಣೆಯ ಚಿಂತೆಯಲ್ಲಿರುವಾಗ ಅವರ ವಿದ್ಯಾರ್ಥಿ ಡಿ.ಎಂ. ಟಿಳಕರೆಂಬವರು ಮುಂದೆ ಬಂದು 1963ರಲ್ಲಿ ಸ್ವಂತ ಪ್ರಕಾಶನದ ಮೂಲಕ ಪ್ರಕಟಿಸಿ ಗುರು ಕಾಣಿಕೆ ಸಲ್ಲಿಸಿದರು. ಅಷ್ಟೇ ಅಲ್ಲ, ಮುಂದೆ ಆ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯು ಪ್ರಶಸ್ತಿ ನೀಡಿ ಗೌರವಿಸಿದಾಗ ಕೃತಿಯ ಹಿರಿಮೆ ಜಗತ್ತಿಗೆ ತಿಳಿಯಿತು. ಮುಂದೆ ಬರವಣಿಗೆ ವೃದ್ಧಿಸಿತು. ಪ್ರಕಟನೆಗಳು ಬೆಳಗಿದವು; ಡಾ। ಶರ್ಮಾ ಅವರು ಅಗ್ರಗಣ್ಯ ಬರಹಗಾರರಾದರು. ಡಾ। ಶರ್ಮಾರು ಸಂಸ್ಕೃತದ ಉದ್ದಾಮ ಪಂಡಿತರಿದ್ದು ದ್ವೈತ ಸಿದ್ಧಾಂತದ ಬಗ್ಗೆ ಆಳವಾದ ಅಧ್ಯಯನ ನಡೆಸಿರುವ ತಜ್ಞರೆಂಬುದು ಗಮನಾರ್ಹ. ದ್ವೈತ ವೇದಾಂತ ಮತ್ತು ಅದರ ಸಾಹಿತ್ಯದ ಚರಿತ್ರೆಯನ್ನು ಕುರಿತು ಇಂಗ್ಲೀಷಿನಲ್ಲಿ ಬರೆದ ಗ್ರಂಥ ಅವರ ಸಂಶೋಧನಾ ಬುದ್ಧಿಯನ್ನು ವೇದಾಂತ ಅಭ್ಯಾಸದ ಪ್ರತಿಭೆಯನ್ನು ಪ್ರಕಟಿಸುತ್ತದೆ ಎಂಬ ಹೇಳಿಕೆ ಅರ್ಥಪೂರ್ಣವಾಗಿದೆ. ಪ್ರತಿಷ್ಠಿತ ಪ್ರಕಟಣಾ ಸಂಸ್ಥೆಗಳಾದ ಭಾರತೀಯ ವಿದ್ಯಾಭವನ, ಮೋತಿಲಾಲ ಬನಾರಸಿದಾಸ್, ಮುನ್‌ಶಿರಾಮ್ ಮನೋಹರಲಾಲ್ ಮೊದಲಾದವು ಇವರ ಕೃತಿಗಳನ್ನು ಪ್ರಕಟಿಸಿ ಧನ್ಯತೆಯನ್ನು ಪಡೆದಿವೆ. ಇವರ ಗ್ರಂಥಗಳೆಲ್ಲವೂ ಇಂಗ್ಲೀಷಿನಲ್ಲಿ ರಚನೆಗೊಂಡು ವಿಶ್ವಮಾನ್ಯವಾಗಿದೆಯಲ್ಲದೆ, ವಿಶ್ವಶಾಸ್ತ್ರಸಾಹಿತ್ಯ ಗ್ರಂಥರಾಶಿಯಲ್ಲಿ ಎದ್ದು ಕಾಣುತ್ತಿರುವ ಅನರ್ಘ್ಯ ರತ್ನಗಳಾಗಿವೆ. ಇವರ ಕೆಲವೊಂದು ಗ್ರಂಥಗಳು ಕನ್ನಡಕ್ಕೆ

ಅನುವಾದಗೊಂಡಿದೆ. ಅವರ 15 ಗ್ರಂಥಗಳು ಭಾರತದ ಪ್ರಮುಖ ವಿಶ್ವವಿದ್ಯಾಲಯಗಳಲ್ಲಿ ಸಂಸ್ಕೃತ, ತತ್ವಜ್ಞಾನ ವಿಭಾಗಗಳಲ್ಲಿ ಎಂ.ಎ.ಗೆ ಪಠ್ಯಪುಸ್ತಕಗಳಾಗಿವೆ. ಮಾಧ್ವ ಮತ ತತ್ವಶಾಸ್ತ್ರ ವಿಚಾರಧಾರೆಯನ್ನು ಇಂಗ್ಲೀಷ್ ಭಾಷೆಯ ಮೂಲಕ ವಿರಾಟ್ ವಿಶ್ವದಲ್ಲಿ ಹರಿಯಿಸಿದ ಅದ್ವಿತೀಯ ಮಾಧ್ವ ತತ್ವಜ್ಞಾನಿ ಡಾ. ಶರ್ಮಾ ಅವರ ಉದ್ಗ್ರಂಥಗಳಿಲ್ಲದ ವಿಶ್ವವಿದ್ಯಾಲಯಗಳು ವಿಶ್ವದಲ್ಲಿಯೇ ವಿರಳ ಎಂದರೆ ಅತಿಶಯೋಕ್ತಿಯಲ್ಲ.

ಡಾ. ಶರ್ಮಾ ಅವರ ಗ್ರಂಥಗಳಿಗೆ ಮುನ್ನುಡಿ ಬರೆದವರೆಲ್ಲರೂ ವಿಶ್ವ ಮಾನ್ಯತೆಯನ್ನು ಪಡೆದ ಶಾಸ್ತ್ರಜ್ಞರೇ ಆಗಿರುತ್ತಾರೆಂಬುದು ಅಷ್ಟೇ ಮಹತ್ವದ ವಿಷಯವಾಗಿರುತ್ತದೆ. ಅಂತಹವರಲ್ಲಿ ಸರ್ವಮಾನ್ಯರುಗಳಾದ ಡಾ. ಎಸ್. ರಾಧಾಕೃಷ್ಣನ್, ಡಾ. ಡಿ.ಎಮ್. ದತ್ತ, ಎಡ್‌ವಿನ್ ಗೇರೋ, ಕಾರ್ಲ್ ಪಾಟ್ಟರ್, ಗೇರಾಡ್ಡ್ ಒಬೆರ್‌ಹ್ಮರ್, ನಿನಿಯನ್ ಸ್ಮಾರ್ಟ್ ಮುಂತಾದ ಅಗ್ರಗಣ್ಯರು ಉಲ್ಲೇಖನಿಯರಾಗಿರುವರು. ಅನೇಕ ಕೃತಿಗಳು ಮೂರು-ನಾಲ್ಕು ಆವೃತ್ತಿಗಳನ್ನು ಕಂಡದ್ದಲ್ಲದೆ ಜಗತ್ತಿನ ತತ್ವಜ್ಞಾನಿಗಳಾದ, ಪ್ರಸಿದ್ಧ ಚಿಂತಕ-ವಿಮರ್ಶಕರಿಂದ ಮುಕ್ತವಾಗಿ ಶ್ಲಾಘಿಸಲ್ಪಟ್ಟಿರುವುದನ್ನು ಗಮನಿಸಿದಾಗ ಡಾ.ಶರ್ಮಾ ಅವರ ಕೃತಿಗಳ ಶ್ರೇಷ್ಠತೆಯನ್ನು ಬಿಡಿಸಿ ಹೇಳುವ ಅಗತ್ಯವಿಲ್ಲ.

ಕಳೆದ 70 ವರ್ಷಗಳಲ್ಲಿ ಅವರ ಸಂಶೋಧನೆ, ಲೇಖನಿಯ ಸಾಧನೆಯನ್ನು ಕುರಿತು ಈ ವರೆಗೆ ಯಾರೂ ಸಾಧಿಸದ ಸಾಧನೆಗಳನ್ನು ಸಾಧಿಸಿ ದ್ವೈತ ವೇದಾಂತಕ್ಕೆ ಇಂಗ್ಲೀಷ್ ಭಾಷೆಯ ಮೂಲಕ ಸಲ್ಲಿಸಿದ ಸೇವೆಯಿಂದ ಇವರ ಹೆಸರು ದ್ವೈತವೇದಾಂತದಲ್ಲಿ ಚಿರಂಜೀವಿಯಾಗಿರುವುದೆಂದು ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥ ಶ್ರೀ ಪಾದಂಗಳವರ ಅನುಗ್ರಹ ವಚನ ಅಮೃತವಾಣಿಯಾಗಿದೆ. ಡಾ। ಶರ್ಮಾ ಅವರು ಶುದ್ಧ ತತ್ವವಾದಿಗಳು, ಸುಪ್ರೌಢ ಪಂಡಿತರು, ಖಚಿತ ಧ್ಯೇಯವಾದಿಗಳು, ಸೂಕ್ಷ್ಮಮತಿಗಳು, ತರ್ಕಬದ್ಧ ನಿರ್ಣಾಯಕರು, ದೃಢ ಸ್ವಭಾವದವರು ಎಂದಿರುವ ಪಂಡಿತ ರಾಜ ಮಾಹುಲಿ ಗೋಪಾಲಾಚಾರ್ಯರ ಮಾತುಗಳು ಅರ್ಥಗರ್ಭಿವಾಗಿವೆ.

ಡಾ। ಶರ್ಮಾ ಅವರ ವ್ಯಕ್ತಿತ್ವಕ್ಕೆ ಮೌಲಿಕ ಕೃತಿಗಳು ಕಳೆ ನೀಡಿದಂತೆ ಪ್ರಶಸ್ತಿಗಳು ಪ್ರಭೆಯನ್ನು ಬೀರಿವೆಯೆಂಬುದೂ ಸ್ತುತ್ಯ. ಪ್ರಶಸ್ತಿಗಳು ತಾವಾಗಿಯೇ ಬಂದು ಡಾ। ಶರ್ಮಾ ಅವರ ಕೊರಳ ಮಣಿಹಾರಗಳಾಗಿವೆಯೇ ಹೊರತು ಅವರು ಅವುಗಳನ್ನು ಅರಸಿಕೊಂಡು ಹೋದವರಲ್ಲ. ಅವರು ಶ್ರೀಮದ್ಭಗವದ್ಗೀತೆಯಲ್ಲಿಯ ''ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ'' ಎಂಬ ಶ್ರೀಕೃಷ್ಣವಾಣಿಯನ್ನು ಅಕ್ಷರಶಃ ಜೀವನದಲ್ಲಿ ಪಾಲಿಸಿದ ಹರಿಕಿಂಕರರು. ಡಾ।ಶರ್ಮಾ ಅವರ ಪ್ರಥಮ ಸಂಶೋಧನಾ ಕೃತಿಗೆ 1963ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿತು. ಮುಂಬಯಿ ವಿಶ್ವವಿದ್ಯಾಲಯದ ಸಂಸ್ಕೃತ ಪ್ರಾಧ್ಯಾಪಕರಲ್ಲಿ ಈ ಪ್ರಶಸ್ತಿ ವಿಜೇತರಲ್ಲಿ ಇವರು ಪ್ರಪ್ರಥಮರೆಂಬ ವಿಶೇಷ ಕೀರ್ತಿಗೆ ಪಾತ್ರರಾಗಿರುವರು. 1992ರಲ್ಲಿ ರಾಷ್ಟ್ರಪತಿ ವೆಂಕಟ್ರಾಮನ್ ಅವರಿಂದ ರಾಷ್ಟ್ರ ಪ್ರಶಸ್ತಿ ಪಡೆದ ಸನ್ಮಾನ್ಯರು. ಇವೆಲ್ಲಕ್ಕೂ ಕಲಶ ಪ್ರಾಯವೆನ್ನುವಂತೆ 1996ರಲ್ಲಿ ರಾಯಚೂರಿನಲ್ಲಿ ಪೂರ್ಣಪ್ರಜ್ಞ ಪ್ರತಿಷ್ಠಾನದ 'ವಿದ್ಯಾಮಾನ್ಯ' ಪ್ರಶಸ್ತಿ ಪಡೆದವರಲ್ಲಿ ಸರ್ವಪ್ರಥಮರೆಂಬುದು ಅವರ ಅಪೂರ್ವ ವ್ಯಕ್ತಿತ್ವದ ಹಿರಿಮೆಗೆ ನಿದರ್ಶನವಾಗಿದೆ.

ಬಹುಮುಖ ಪ್ರತಿಭಾವಂತರಾದ ಡಾ। ಶರ್ಮಾ ಅವರು ಅನೇಕ ಸನ್ಮಾನಗಳಿಂದ ಗೌರವಾನ್ವಿತರು, ಮಠಾಧೀಶರುಗಳಿಂದ, ಸ್ವಾಮೀಜಿಗಳಿಂದ ಅನುಗೃಹೀತರು, ಶಿಕ್ಷಣ, ಸಂಘ-ಸಂಸ್ಥೆಗಳಿಂದ ಸನ್ಮಾನಿಸಲ್ಪಟ್ಟವರು. ಡಾ। ಶರ್ಮಾ ಅವರ ಎಪ್ಪತ್ತನೆಯ ಹುಟ್ಟುಹಬ್ಬದ ಶುಭ ಸಂದರ್ಭದಲ್ಲಿ ಅವರ ಹೆಸರಿನಲ್ಲಿ ಸನ್ಮಾನ ಸಮಿತಿಯೊಂದನ್ನು ರಚಿಸಿ, ನಿಧಿ ನೀಡಿ ಸಾರ್ವಜನಿಕವಾಗಿ ಸನ್ಮಾನಿಸಿದ ಘಟನೆ,

ಅವರ ಜೀವನದಲ್ಲಿ ಸ್ಮರಣೀಯ ಶುಭದಿನವಾಗಿದೆ; ಅಭಿನಂದನಾ ಗ್ರಂಥವು ಗಣ್ಯರ ಮೌಲಿಕ ಲೇಖನಗಳಿಂದ ಮಹತ್ವಪಡೆದಿದೆ.

ಡಾ। ಶರ್ಮಾ ಅವರು ಹಲವಾರು ರಾಷ್ಟ್ರೀಯ ಅಂತರ್ರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿದ್ದರು, ಅಧ್ಯಕ್ಷರಾಗಿದ್ದರು. ತಮ್ಮ ಪ್ರಬಂಧಗಳಿಂದ, ಪಾಂಡಿತ್ಯ ಪೂರ್ಣ ಭಾಷಣಗಳಿಂದ ವ್ಯಾಖ್ಯಾನಗಳಿಂದ ಕೇಳುಗರನ್ನು ಚಿಂತಕರನ್ನು ಮಂತ್ರಮುಗ್ಧರನ್ನಾಗಿಸಿದ ದಾಖಲೆಗಳಿವೆ. ಅವರ ವಿದ್ವತ್ತಿಗೆ ತಲೆಬಾಗದವರಿಲ್ಲವೆಂದರೆ ತಪ್ಪಾಗಲಾರದು. ಹೈದರಾಬಾದಿನಲ್ಲಿ ಅಖಿಲ ಭಾರತ ಮಾಧ್ವ ಮಹಾಮಂಡಲವು ಆಯೋಜಿಸಿದ್ದ 15ನೆಯ ಅಖಿಲ ಭಾರತ ಮಾಧ್ವ ತತ್ವಜ್ಞಾನ ಸಮ್ಮೇಳನದ ವ್ಯಾಸ ಪೀಠದಿಂದ ಅವರು ಮಾಡಿದ್ದ ಅಧ್ಯಕ್ಷೀಯ ಭಾಷಣವು ತತ್ವಜ್ಞಾನಾಸಕ್ತರಿಗೆ ರಸದೌತಣವಾಗಿತ್ತು. ಇತರರಿಗೆ ಅಮೋಘ ಜ್ಞಾನದ ದರ್ಶನವಾಗಿತ್ತು.

ವೇದಾಂತಲೋಕದ ಪರಮ ಸಾರ್ಥಕರೆನಿಸಿದ ಡಾ। ಶರ್ಮಾ ಅವರು ಬರೆದದ್ದು ಇಂಗ್ಲೀಷಿನಲ್ಲಿ, ಓದಿದ ಗ್ರಂಥಗಳಲ್ಲಿ ಹೆಚ್ಚಿನವು ಸಂಸ್ಕೃತದಲ್ಲಿದ್ದವುಗಳು. ಆದರೆ ಮಾತೃ ಭಾಷೆಯಾದ ಕನ್ನಡವನ್ನು ಅಷ್ಟೇ ಅಭಿಮಾನದಿಂದ ಪ್ರೀತಿಸಿದರು. ಇತರರಿಗೆ ಕನ್ನಡದ ಹಿರಿಮೆಯನ್ನು ಹೇಳಿಕೊಟ್ಟ ಕನ್ನಡದ ರಾಯಭಾರಿ. ತಾನು ಸೇವೆ ಸಲ್ಲಿಸಿರುವ ಕನ್ನಡಿಗರ ಸಂಸ್ಥೆಗಳಲ್ಲೂ ಕನ್ನಡದ ಕೀರ್ತಿ ಹರಡುವಂತೆ ಧ್ವಜ ಹಾರಾಡುವಂತೆ ಮಾಡಿದ ಕನ್ನಡದ ಕಂದ ಡಾ। ಶರ್ಮಾ ಅವರು ಕನ್ನಡಿಗರಾಗಿಯೂ ಮಾನ್ಯರು; ಧನ್ಯರು. ಮುಂಬಯಿಯ ಪ್ರಖ್ಯಾತ ವಿದ್ಯಾಸಂಸ್ಥೆ ರೂಪಾರೇಲ್ ಮಹಾವಿದ್ಯಾಲಯದಲ್ಲಿ ಕನ್ನಡ ಸಂಘವನ್ನು ಸ್ಥಾಪಿಸುವಲ್ಲಿ ಡಾ।ಶರ್ಮಾ ಅವರು ಪ್ರಮುಖರಾಗಿದ್ದರು. ಅದರ ಸಂಸ್ಥಾಪಕ ಕಾರ್ಯಾಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಕನ್ನಡಿಗ ವಿದ್ಯಾರ್ಥಿಗಳಿಗೆ ಕನ್ನಾಡಾಭಿಮಾನದ ಬಗ್ಗೆ ತಿಳಿಸಿದರು. ಜನಜಾಗೃತಿ ಗೊಳಿಸಿದರು. ಆಡಳಿತ ಮಂಡಳಿಯ ಸದಸ್ಯರಿಗೆ, ಅಧಿಕಾರಿಗಳಿಗೆ ಕನ್ನಡ ವಿಷಯವನ್ನು ಪಠ್ಯದಲ್ಲಿ ತರುವಂತೆ ಸೂಕ್ತ ಮಾಹಿತಿ ನೀಡಿ ಮನವೊಲಿಸಿ ಯಶಸ್ಸನ್ನು ಪಡೆದರು, ಕನ್ನಡ ಶಿಕ್ಷಣಕ್ಕೆ ಅವಕಾಶ ಮಾಡಿ ಕೊಡುವುವುದಕ್ಕೆ ಮೂಲ ಕಾರಣರಾದರು. ಸಾವಿರಾರು ವಿದ್ಯಾರ್ಥಿಗಳಿಗೆ ಗುರುವರ್ಯರಾಗಿದ್ದ ಪ್ರೊ। ಚಿದಂಬರ ದೀಕ್ಷಿತರು ನೇಮಕಗೊಳ್ಳುವಂತೆ ಮಾಡಿದವರು ಡಾ। ಶರ್ಮಾ ಅವರೆಂಬುದು ಅವರ ಕನ್ನಡ ಪ್ರೀತಿಗೆ ಅತ್ಯುತ್ತಮ ಸಾಕ್ಷಿಯಾಗಿದೆ. ತನ್ನ ಮನೆಯಲ್ಲಿಯೂ ನಿರಂತರ ಕನ್ನಡವನ್ನು ಪೋಷಿಸಿದರು. ತನ್ನ ಮಕ್ಕಳನ್ನು ಕನ್ನಡ ಮಾಧ್ಯಮದಲ್ಲಿಯೇ ಓದಿಸಿದ್ದರು. ಮೊಮ್ಮಕ್ಕಳೆಲ್ಲರನ್ನೂ ಕನ್ನಡ ಓದು ಬರಹ ಬಲ್ಲವರಂತೆ ಮಾಡಿರುವ ಹಿನ್ನಲೆಯಲ್ಲಿ ಭಾಷೆಗೂ ಸಂಸ್ಕೃತಿಗೂ ನಿಕಟ ಬಾಂಧವ್ಯವಿದೆಯೆಂಬ ತತ್ವವನ್ನು ಡಾ.ಶರ್ಮಾ ಅವರು ಒತ್ತಿ ಹೇಳುವಂತಹ ಖ್ಯಾತನಾಮರು. ಭಾಷಾ ಕವಿಜ್ಞರಾದ ಡಾ. ಶರ್ಮಾ ಕನ್ನಡ, ತೆಲುಗು, ತಮಿಳು, ಮರಾಠಿ, ಹಿಂದಿಯಲ್ಲಿ, ಓದುಬರಹ ಮಾತು ಬಲ್ಲರು; ಇಂಗ್ಲೀಷಿನಲ್ಲಿ, ಸಂಸ್ಕೃತದಲ್ಲಿ ಅದ್ಭುತ ಸಿದ್ಧಿ ಸಾಧನೆ ಇವರಿಗಿದೆ. ಕನ್ನಡದ ಹಿಡಿತವೂ ಅಸಾಧಾರಣವಾಗಿಯೇ ಇದೆ. ಬಹುಭಾಷಾ ಮಾನ್ಯರಾಗಿಯೇ ಬಹು ಜನಪ್ರಿಯರಾಗಿರುವುದು ಇವರ ವ್ಯಕ್ತಿತ್ವದ ವಿಶೇಷತೆ.

'ಈಸಬೇಕು ಇದ್ದು ಜೈಸಬೇಕು' ಎಂಬ ದಾಸವರೇಣ್ಯರ ಸೂಕ್ತಿಯನ್ನು ಜೀವನಕ್ಕೆ ದಾರಿ ದೀಪವಾಗಿರುಸಿಕೊಂಡ ಡಾ. ಶರ್ಮಾ ಅವರು ಬದುಕಿನಲ್ಲಿ ನಡೆದುಬಂದ ದಾರಿ ಅಷ್ಟೇನೂ ಸುಗಮವಾದುದಲ್ಲ. ಆದರೆ ಎಂತಹ ಕಠಿಣ ಪರಿಸ್ಥಿತಿಯಲ್ಲಿಯೂ ಎದೆಗುಂದದೆ, ಅಭಿಮಾನ ಬಿಡದೆ ಪ್ರಾಮಾಣಿಕರಾಗಿ ಆತ್ಮೋನ್ನತಿಯತ್ತ ನಿರಂತರ ಸಾಗಿದ ವಿಧಿವಿಧಾನಗಳು ಸರ್ವರಿಗೂ ಆದರ್ಶನೀಯವಾದುದು. ಇಂತಹ ವ್ಯಕ್ತಿತ್ವಕ್ಕೆ ಸತತ ಸ್ಫೂರ್ತಿ ಚೇತನರಾಗಿ ಬೆಳಗಿದ ಶಕ್ತಿಸ್ವರೂಪಿಣಿ ಅವರ 'ಕುಲ ಧರ್ಮ ಪತ್ನಿ' ಶ್ರೀಮತಿ ಹೇಮಲತಾಬಾಯಿ ಶರ್ಮಾ ಅವರೆಂಬುದು ಉಲ್ಲೇಖನಾರ್ಹ.

ಪ್ರಸ್ತುತ ಕಾಲಕ್ಕೆ 66 ವರ್ಷಗಳ ದಾಂಪತ್ಯ ಜೀವನದಲ್ಲಿರುವ ಅವರ ಯಶೋಗಾಥೆಯು ಆಧುನಿಕ ಯುಗದ ದಂಪತಿಗಳಿಗೆ ಅತ್ಯಂತ ಮಾರ್ಗದರ್ಶಕವಾಗಿಯೂ ಆದರ್ಶನೀಯವೂ ಆಗಿದೆ. ಈ ಅನ್ಯೋನ್ಯ ಜೋಡಿಯ ಸಂಸಾರ ಜೀವನವೂ ಯುಗದ ಒಂದು ಕೊಡುಗೆ ಎಂದರೆ ತಪ್ಪಲ್ಲ. ಪಥವೀದರೆ ಪಾಂಡಿತ್ಯಮೂರ್ತಿ ಶ್ರೀಮತಿ ಶರ್ಮಾ ಅವರು ಪತಿಯ ಸಾಧನೆಗೆ ನಿರಂತರ ತುಂಬು ಮನಸ್ಸಿನ ಸಹಕಾರ ನೀಡಿದ ಪ್ರೇರಣಾ ಶಕ್ತಿಯಾಗಿದ್ದಾರೆ. ಪತಿಯ Ph.D. ಪ್ರಬಂಧವನ್ನು ಸುಂದರವಾಗಿ ಬೆರಳಚ್ಚು ಮಾಡಿದ ಕರಡು ತಿದ್ದಿದ ಉದಾಹರಣೆ ಹತ್ತರಲ್ಲಿ ಒಂದಾಗಿರುತ್ತದೆ. ಶ್ರೀಮತಿ ಶರ್ಮಾ ಅವರು ಮಂಗಳೂರಿನ ಪ್ರಖ್ಯಾತ ನೆಲ್ಲಿಕಾಯಿ ಮನೆತನಕ್ಕೆ ಸೇರಿದವರು; ಉಭಯರು ಸಂಸ್ಕಾರವನ್ನು ಉಳಿಸಿಕೊಂಡ ಬಗೆಯೂ ಗಮನೀಯವಾಗಿದೆ; ಅನುಕರಣೀಯವಾಗಿದೆ.

ಇವರದ್ದು ಮಿತ ಸಂಸಾರ; ಸುಖಿ ಸಂಸಾರವೆಂದರೆ ತಪ್ಪಲ್ಲ. ಈ ದಂಪತಿಗಳಿಗೆ ಸುಪುತ್ರರಿಬ್ಬರು; ಸುಪುತ್ರಿಯೊಬ್ಬಳು. ಮಗಳು ಶ್ರೀಮತಿ ವಿಭಾ ಶ್ರೀನಿವಾಸ ಮದ್ರಾಸಿನಲ್ಲಿ ನೆಲೆಸಿದ್ದಾರೆ. ಮುಂಬಯಿಯ ಕೆ.ಜೆ. ಸೋಮೈಯಾ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಪ್ರಾಂಶುಪಾಲರೂ, ಸಂಸ್ಕೃತ ವಿಭಾಗದ ಮುಖ್ಯಸ್ಥರೂ, ಘನ ಪಂಡಿತರಾಗಿರುವ ಡಾ.ಎಸ್.ಕೆ. ಭವಾನಿ ಅವರು ಅವರ ಮೊದಲನೆಯ ಮಗ. ಸೊಸೆ ಲಕ್ಷ್ಮೀ ಸುಧೀಂದ್ರ ಅವರು ಸಂಗೀತ ಕಲಾವಿದೆ, ಮುಂಬಯಿಯ ಕರ್ನಾಟಕ ಸಂಘ ಮತ್ತು ಮುಂಬಯಿ ಕನ್ನಡ ಸಂಘಗಳಲ್ಲಿ ಕನ್ನಡೇತರರಿಗೆ ಕನ್ನಡ ಕಲಿಸುವ ಅಧ್ಯಾಪಿಕೆ. ಇನ್ನೋರ್ವ ಮಗ ಬಿ.ಕೆ. ಪುರಂದರ ಅವರು ಭಾರತೀಯ ವಾಯುಸೇನೆಯ ಸಂಬಂಧಿತ ವಿಭಾಗವೊಂದರಲ್ಲಿ ತಂತ್ರಜ್ಞರಾಗಿ ಸೇವೆ ಸಲ್ಲಿಸುತ್ತಿದ್ದವರು 1969ರಲ್ಲಿ ದಿವಂಗತರಾಗಿರುವರು.

ಡಾ। ಶರ್ಮಾ ಅವರ ಜೀವನದಲ್ಲಿ ನಡೆದ ದಾಖಲಾತ್ಮಕ ಘಟನೆಗಳು ಒಂದಲ್ಲ, ಎರಡಲ್ಲ, ನೂರಾರು ಇವೆ. ಆದರೆ ಇಲ್ಲಿ ಕೇವಲ ಎರಡನ್ನಷ್ಟೇ ಉಲ್ಲೇಖಿಸುತ್ತಿದ್ದೇನೆ. ಮಾಧ್ವ ಮಂಡಲದ ಪೂಜ್ಯ ಯತಿವರ್ಯರಾದ ಸತ್ಯಧ್ಯಾನ ತೀರ್ಥರವರು ಡಾ. ಶರ್ಮಾ ಅವರನ್ನು ತನ್ನ ಕೃಪಾಕಟಾಕ್ಷದಿಂದ ಪೋಷಿಸಿ ತರಬೇತಿ ನೀಡಿ, ಸಂಶೋಧನೆಗೆ ಪ್ರೇರಣೆ ನೀಡಿದ ಮೊದಲನೆಯ ಗುರುವರ್ಯರೆಂಬುದನ್ನು ಡಾ।ಶರ್ಮಾ ಅವರು ಭಕ್ತಿಯಿಂದ ನೆನೆಯುತ್ತಾರೆ. ರೂಪಾರೇಲ್ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವಾಗ ಕೋಯಿಮತ್ತೂರಿನಲ್ಲಿ ಅಪಘಾತಕ್ಕೊಳಗಾಗಿ ಕಾಲು ನೋವಿನಿಂದ ಪೀಡಿತರಾದಾಗ ಕಾಲೇಜಿನ ಆಡಳಿತ ಮಂಡಳಿಯು ಧೈರ್ಯ ನೀಡಿ, ಸಂಪೂರ್ಣ ಗುಣಮುಖರಾದ ನಂತರವೇ ಸೇವೆಗೆ ಹಾಜರಾಗಬೇಕೆಂದು ಆದೇಶ ನೀಡಿತ್ತು. ಅವರು ಎಂಟು ತಿಂಗಳ ಗೈರು ಹಾಜರಿಯಲ್ಲಿದ್ದಾಗ ಎಲ್ಲಾ ತಿಂಗಳುಗಳ ಸಂಪೂರ್ಣ ವೇತನಗಳನ್ನಿತ್ತು ನೋಡಿಕೊಂಡ ರೀತಿ, ತೋರಿಸಿದ ಪ್ರೀತಿ ಯಾವ ಕಾಲಕ್ಕೂ ಕೃತಜ್ಞತೆಯಿಂದ ನೆನೆಯುವಂತೆ ಮಾಡಿದೆ. ಆಡಳಿತ ಮಂಡಳಿಯ ಔದಾರ್ಯ, ವಿದ್ವಾಂಸರಿಗೆ ನೀಡುತ್ತಿದ್ದ ಗೌರವ ಆದರ್ಶನಿಯವಾಗಿದೆ. ಅಷ್ಟೇ ಅನುಕರಣೀಯವಾಗಿದೆ ಎನ್ನುತ್ತಾರೆ. ದೇಶದಲ್ಲಿ ಸುತ್ತಾಡಿ ಜ್ಞಾನ ಪ್ರಸಾರ ಮಾಡಿದ ಡಾ. ಶರ್ಮಾ ಅವರು ವಿದೇಶದಲ್ಲಿ ತನ್ನ ವಿದ್ವತ್ತಿನಿಂದ ಪಂಡಿತ ಪಾಮರರ ಮನ ಗೆದ್ದವರು. ತನ್ನ ಇಳಿವಯಸ್ಸಿನಲ್ಲಿ ಜ್ಞಾನಯೋಗಿಯಾಗಿ ಸ್ವಯಂ ಪ್ರಕಾಶಿತರಾಗಿರುವ ಸಮಯದಲ್ಲಿ ಉಡುಪಿಯ ಪೇಜಾವರ ಕಿರಿಯ ಮಠಾಧೀಶರಾದ ಶ್ರೀ ವಿಶ್ವವಿಜಯ ತೀರ್ಥರೊಡನೆ 1987ರಲ್ಲಿ ಅಮೇರಿಕೆಯನ್ನು ಬೆಳಗಿಸಿದ ಡಾ. ಶರ್ಮಾ ಅವರ ಧರ್ಮ ವಿಜಯ ಯಾತ್ರೆಯೂ ಐತಿಹಾಸಿಕವಾಗಿರುತ್ತದೆ. ಅಲ್ಲಿಯ ಅನೇಕ ವಿಶ್ವವಿದ್ಯಾಲಯಗಳಲ್ಲಿ ವಿದ್ವಜ್ಜನರ

ಸಮ್ಮೇಳನಗಳಲ್ಲಿ ವೇದಾಂತ ತತ್ವಜ್ಞಾನದ ಉಪನ್ಯಾಸ ನೀಡಿದ ಕೀರ್ತಿ ಇವರಿಗಿದೆ.

ಡಾ. ಶರ್ಮಾ ಅವರ ವ್ಯಕ್ತಿ ವಿಶೇಷತೆಯು ಪೇಜಾವರ, ಅದಮಾರು, ಫಲಿಮಾರು, ಸೋದೆ, ಪುತ್ತಿಗೆ, ವ್ಯಾಸರಾಜ, ರಾಘವೇಂದ್ರ ಹಾಗೂ ಉತ್ತರಾದಿ ಮಠಾಧೀಶರುಗಳಿಂದ ಅನುಗ್ರಹಿಸಲ್ಪಟ್ಟಿದೆಯೆಂಬುದು ಗಮನಾರ್ಹ. ಯಾವುದೇ ಪೂರ್ವ ಸೂಚನೆಯಿಲ್ಲದೆ, ಅನುಮತಿಯಿಲ್ಲದೆ ರಾಷ್ಟ್ರಪತಿ ಭವನಕ್ಕೆ ತನ್ನ ಭೇಟಿಗಾಗಿ ಯಾವ ಸಮಯದಲ್ಲಿಯೂ ಸ್ವಾಗತವಿದೆಯೆಂದು ಅಂದಿನ ರಾಷ್ಟ್ರಪತಿ ಡಾ. ರಾಧಾಕೃಷ್ಣನ್ ಅವರ ಆದೇಶವು ಡಾ. ಶರ್ಮರ ಗೌರವಕ್ಕೆ ಉತ್ತಮ ನಿದರ್ಶನವಾಗಿದೆ. ವಿದ್ವತ್ತಿಗೆ ಆಧಾರವಾಗಿದೆ.

ಡಾ. ಶರ್ಮಾ ಅವರು ಶಾಸ್ತ್ರನಿಧಿ, ದ್ವೈತ ವೇದಾಂತ ರಸಜ್ಞ, ಮಧ್ವಮುನಿಪ್ರಿಯ, ವಿದ್ಯಾಭೂಷಣರೆಂದು ಯತಿವರೇಣ್ಯರುಗಳಿಂದ ಸಮ್ಮಾನಿರತರಾಗಿರುವುದು ತುಂಬಾ ಮಹತ್ವದ ವಿಷಯವಾಗಿದೆ. ಕನಿಷ್ಠ ಕೇಂದ್ರ ಸರಕಾರವು ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದರೆ ವಿದ್ವತ್ತಿಗೆ ನೀಡಿದ ಭೂಷಣವಾದೀತು, ಪ್ರಶಸ್ತಿಯ ಘನತೆ ಹೆಚ್ಚೀತು. ಇಂತಹ ಅದ್ವಿತೀಯ ವ್ಯಕ್ತಿತ್ವದ ಮಹಾನ್ ಚೇತನ, ಅಪ್ರತಿಮ ಮೇಧಾವಿ, ವಿದ್ವತ್ ಮೂರ್ತಿಯನ್ನು ಶಿಕ್ಷಕರ ದಿನಾಚರಣೆ ಅರ್ಥಾತ್ ಡಾ. ರಾಧಾಕೃಷ್ಣನ್ ಅವರ ಜನ್ಮದಿನ ಸೆಪ್ಟೆಂಬರ್ 5, 1999 ರಂದು ಮುಂಬಯಿಯ ಪ್ರಸಿದ್ಧ ಸಂಸ್ಥೆ "ಲಕ್ಷ್ಮೀ ಛಾಯಾ ವಿಚಾರ ವೇದಿಕೆ" ಸನ್ಮಾನಿಸುತ್ತಿರುವುದು ಅತೀ ಸ್ತುತ್ಯಘನಕಾರ್ಯವಾಗಿದೆ.

*(ಈ ಲೇಖನವನ್ನು ಮುಂಬಯಿಯ ಪ್ರಸಿದ್ಧ ದೈನಿಕ 'ಕರ್ನಾಟಕ ಮಲ್ಲ'ವು ದಿನಾಂಕ **29-8-1999** ರಂದು ಪ್ರಕಟಿಸಿತ್ತು.)*

ಯಮಕ ಭಾರತ

ಇದು ಶ್ರೀಮದಾಚಾರ್ಯರು ರಚಿಸಿರುವ ವಿವಿಧ ಛಂದಸ್ಸುಗಳ 81 ಶ್ಲೋಕಗಳ ಚಿಕ್ಕ ಮತ್ತು ಚೊಕ್ಕ ಲಯಬದ್ಧ ಪದ್ಯವಾಗಿದ್ದು, ಇದರಲ್ಲಿ ಶ್ರೀಕೃಷ್ಣನ ಅದ್ಭುತ ಪರಾಕ್ರಮಗಳ ಮತ್ತು ಅವನು ಪಾಂಡವರಿಗೆ ಮಾಡಿದ ಸಹಾಯಗಳ ವರ್ಣನೆ ಇದೆ. ಈ ಕೃತಿಯಲ್ಲಿ ಆಚಾರ್ಯರು ಸಂಯೋಜಿಸಿರುವ ಪೂರ್ಣ ಹಾಗೂ ಅರ್ಧ ಯಮಕ, ಪ್ರಾಸ ಮತ್ತು ಇತರ ಶಬ್ದಾಲಂಕಾರಗಳೊಂದಿಗೆ ಚತುಷ್ಪದಿ, ಏಕಾಕ್ಷರ ಶೋಕಗಳೇ ಮುಂತಾದವುಗಳ ಪ್ರತಿಭಾಪೂರ್ಣ ಪ್ರಯೋಗಗಳನ್ನು ನಾವು ಕಾಣಬಹುದು.

ASHIRVACHANA

Dr. B.N.K. Sharma's contribution to Dvaita School of thought is matchless in his contemporary age. The unique style and presentation of his beloved philosophy has inspired a number of thinkers at home and abroad and the Dvaita Vedanta has become a study of great interest in the western world on account of Dr. B.N.K. Sharma's writings. He is the first and the best Madhva scholar to have authored so many works in English on the philosophy. As an author and researcher he out lived his age. He had a harmonious blending of traditional and liberal style of living and writing which had attracted both the old and young generations of scholars and students. He has left behind him a great legacy which is worth preserving and enriching by the present and future generations.

Dr. Bhavani! We are happy to know that you are bringing out a memorial volume on this exemplary personality.

As a worthy son of a worthy father let your efforts prove not only successful but also satisfying to the departed soul.

Narayana Smaranegalu
(श्री विद्यासागरमाधवतीर्थाः)
श्री माधवतीर्थ मूलमहासंस्थानम् ।

KṚṢṆĀMṚTA - MAHĀṚNAVA

This is an anthology of 242 verses in praise of Lord Viṣṇu from various Purāṇās. It concludes with an exhortation to cultivate love and devotion to the Lord at all times. In this Sri Madhva asserts that Bhakti alone is the way to release since there is no hope of our attaining freedom from saṃsāra by the annihilation of Karma or exhausting its effects.

CONDOLENCE MESSAGE

Radiant Divinity!
My Very Dear & Esteemed Sudhindra,
Om Namo Narayanaya!
Loving Namaskars and goodwishes from Swami Chidananda of Rishikesh!

Just about two days back information was sent here that your Most Worshipful mother (Hemakka) has been called to her eternal rest. She is no more on earth. I send you my sincere condolences and sympathies at this sudden deprivation. Of all human relationships, the relationship between a son and a mother and a mother and a son is the most sacred one as well as the closest, nearest and dearest. Shruti vakya advises us to regard mother as visible God on earth. It says, "Matru Devo Bhava". I hold this as literally true.

Sometime ago I was told by Sri Keshava Rao of Chennai that your mother had become slightly imbalanced and disoriented in her thinking. That she was becoming forgetful, at times even about her own personal identity. These are all universally the signs of extreme old age and some mental trauma. I believe your revered mother was 91 years of age. This is a ripe old age. In her young age she was very, very sharp - witted, had strong will power, played a good game of tennis in the Mangalore Ladies Club and out-beat even senior and experts in tennis. I know all this at firsthand, personally.

There is no defense or armor against the insidious invasion of old age. No doctor or physician or Hakim or Vaidya can do anything stem the onslaught of old age. There is the Sanskrit shloka

"Shareere Jarjare Kaye
Vyadhigraste kalevare
Aushadham Jahnavi Toyam
Vaidyo NARAYANO HARIḤ".

Doubtless, a hitherto unknown emptiness will be felt in your life. Especially as, sometime back your Most Revered and Worshipful father, Dr. B.N.K.Sharma (the great and renowned Sanskrit scholar & the foremost exponent of Sri Madhvacharya's Dvaita Philosophy) had passed away less then four weeks back after a prolonged illness. Knowing that it is inevitable and it is God's Will, we have to accept the unavoidable and offer up the departed ones into God's hands.

Nonetheless human frailty is always there. When a void is created in our lives, that void is filled with sorrow and the somewhat painful experience of sadness. Wherever they are, may they rest in Peace! May God take them unto Himself ! Om Tat Sat! Om Shantiḥ!

God bless you!
Peace be unto you!

With regards, prem and Om!

Yours in the Lord
Swami Chidananda
President, Divine Life Society

EULOGY (CHARAMASLOKA) TO DR. B. N. K. SHARMA

- C. H. Raghuttamachar

I. Respécted B́.N.K. Sharmá,
Devótedlý we boẃ
To Thée, a mighty mínd of óld,
As márk of 'úr great lóve.

II. The wiélding óf the pén by Theé
Was wóndrouslý uníque,
The héart withín Thy fráme fragíle
Was stróng as précious Teák.

III. M. Ráma Ráo of gréat renówn
Was fúll of praíse for Theé,
On Seéing hís pupíl defeát
His Teácher óld as Hé.

IV. The lóng hours we spént with Theé
We cán't evér forgét;
The táles proceéding fróm Thy móuth
Have nót been beáten yét.

V. The páth laid óut by Ć.M.Ṕ
Was tród with gréat effećt
By Theé with fórceful pénmanshíp
Even Ŕivals fóund perféct.

VI. The Rángadhám next Óffice Póst,
A pláce of Pílgrimáge–
It wás resórted tó by áll,
By yóung and óld in áge.

VII. We thóught Thou wóuldst see Óne Hundréd,
But góds could nót wait lóng;
The Lórd Hari and áll Divínes
Are tóo fońd óf thy tóngue.

VIII. Like Sri Madhvá and Gréat Gurús
That wróte Immórtal Wórks,
Our B́.N.Ḱ. Will líve no énd
Through áll his Fámous Wórks.

IX. The wáy in whích we cán salúte
This Mán of Márvelloús
Wisdóm and Wít, I téll you Fríends,
Is that which súits well ús.

A TRIBUTE TO MY FATHER

Prin. Dr. S. K. Bhavani

My illustrious and revered father Mahāmahopādhyāya, Madhvamunipriya, Dvaitavedānta Rasajna, Āsthāna Vidvān, Śāstranidhi Dr. Bhavani Nārāyanarao Krishnamurti Sharma (B.N.K. Sharma) was also my Vidyāguru, mentor, friend, philosopher and guide in the real sense of the terms.

Born at Salem (Tamilnadu) on 9th June, 1909 in the famed Haritasa Gotra ancestry of Singānallur(CBE) Dharmarāja Bhattaru - a convert to Dvaita fold by Svaūpoddhāraka H.H. Śri Kambālu Rāmachandra Tirtharu of Vyāsarāja Mutt from the paternal side and in the equally renowned leneage of Kochi Rangappāchārya & Kochi Madhvarāyāchārya the Āsthāna Vidvāns of Kochi Durbar (Royal Court) from his maternal side, Dr. Sharma was endowed and equipped with sharp intellectual acumen, analytical ability, research potential, good Sanskrit base, sound shastric learning, highest university education (Ph.D. & D. Litt.) and lucid writing style in superb English. After his early education at Kumbakonam, he took his B.A. (Hons.) & M.A. degrees from the Presidency College, Madras (Chennai) in Sanskrit and Comparative Philology (Indo-European).

During the course of his studies, Dr. Sharma found that the ill - informed, prejudiced and self-styled researchers at home and abroad had tried to mis-interpret Madhva Siddhānta and belittle its contribution to Indian Philosophy as of little or no merit and insignificant. To set things right, he took up cudgels against them to put the facts in their proper perspective and to give Madhva Siddhānta its due place in the realm of Indian Philosophy as a true votary of robust Theistic Realism. He therefore decided to contribute singlehandedly his factual research findings in the form of standard works in lucid English. As a first step towards this end, he published his research papers-150 in number-in various journals of oriental studies.

His first academic assignment was at the Annāmalai University (Chidambaram) in 1931. Later he became the Principal of Govt. Sanskrit College, Tiruvaiyaru (Thanjavur Dist.) between 1942-48. He had a stint at the Vishveshwaranand Vedic Research Institute, Hoshiarpur (Punjab) as a Research Scholar before moving to Udupi as the Principal of Purnaprajna Sanskrit College in 1950. For two years, he was Principal of Kanara (now Baliga) College of Arts & Science, Kumta and then moved on to Dharwad as

Hon. Professor of Sanskrit at K.E. Board's College. He finally migrated to Mumbai in 1953 as the HOD of Sanskrit at Ruparel College, Mahim.

It was Mumbai and the D.G. Ruparel College which introduced my father to the Philosophical world at home & abroad. It was given to Shri D.M. Tilak, his student of Inter Arts Class in the College (who was a publisher by profession) to bring out the first edition of Dr. Sharma's magnum opus "A History of Dvaita School of Vedanta & Its Literature" in 2 Volumes which bagged the Central Sahitya Academy Award for Sanskrit Research in 1963. From here onwards there was no looking back for Dr. Sharma. The Bharatiya Vidya Bhavan, Mumbai, invited him to author their Book University Series title "Madhva's Teachings in His Own Words" (now awaiting 5th reprint edition). In further recognition of his scholarship and the world wide acclaim he received for the above two works, the Bhavan entrusted to him the task of highlighting Madhva's dialectical skills in its major publication "Philosophy of Madhvāchārya" in 1962. Later, the Bhavan undertook the publication of Dr. Sharma's greatest contribution the 3-Volume "Brahmasutras and their principal Commentaries" - a comparative exposition of the commentaries of Śankara, Rāmānuja & Madhva which was aided by a 5 -year University Grants Commission Scholarship from 1969 - 74. His magnum opus "History of Dvaita School of Vedānta & its Literature" and "Philosophy of Sri Madhvāchārya" both republished by the renowned Oriental Publishers M/s Motilal Banarsidass, New Delhi, have gone into 3 reprint editions, whereas the 3-Volume UGC Project "Brahmasutras & their Principal Commentaries" has been reprinted by another reputed indological publisher M/S Munshiram Manoharlal, Delhi.

After a fruitful service of 21 years as the HOD of Sanskrit, Dr. Sharma retired from the Ruparel College, Mumbai, in 1974 and engaged himself in bringing out critical expositions of Jayatirtha's Nyāyasudhā (in 3-vols.) and Vyāsatirtha's Nyāyāmrita (in 2- vols.) in English and a series of 5 treatises (upto Dec. 2004) refuting, criticising, repudiating and clearing any misconceptions, misinterpretations or deliberate suppression of factual evidence regarding Madhva Siddhānta by psuedo विमर्शकऽ, संशोधकऽ eastern and western alike in his inimitable, outspoken, sarcastic and humorous style. His U. S. visit in 1987 was a great event.

In short during the last seven decades till his passing away on 2nd July, 2005 in Mumbai, his Karmabhumi, Dr. Sharma was devotedly engaged in carrying out Achārya Madhva's command viz. "विष्णोः सर्वोत्तमत्वं तु सर्वदा प्रतिपादय" through his 25 epochmaking standard works, 150 research papers, lectures, speeches, debates and Scholastic Correspondence with Indian & foreign Professors and Scholars A.B. Keith (U. K), Radhakrishnan, D.M. Datta, Gerhard Oberhammer (Vienna), Karl Potter (Washington), Edwin Gerow (Oregon), Roy Abraham Varghese (Texas), Stafford Betty (Backersfield), Jose Pereira (Bronx), Ninian Smart (Lancaster), Michael W. Myers (Pullman) and a host of others.

Dr. Sharma's devoted life - partner and my beloved mother Matusri Hemalatabai followed him to the heavenly abode in the same month i.e. 29th July, 2005 as a true Sahadharmacharini.

He leaves behind him his daughter Sou. Vibha Srinivasan, son Dr. Sudhindra K. Bhavani, grand children and great grand children.

We all pray to Lord Śri Krishna to grant eternal peace to these noble souls at His lotus feet.

Mahābhārata

Though technically belonging to the genre of Kāvya, the *Mahābhārata* is a Kāvya in its older Vedic sense of the work of a Kavi meaning a seer *'Kaviḥ Krāntadarśi'* as can be seen from the tribute paid to it :

Asya Kāvyasya Kavayo na Samarthā Viśeṣaṇe
Viśeṣane gṛhastasya śeṣāh traya iva āśramāḥ
Yadihāsti tadanyatra yannehāsti na tat Kvacit

The *Mahābhārata* has also been referred to as a fifth Veda in the Nārāyaṇa Aṣṭākṣarakalpa.

MODERN SCHOLAR OF DVAITA VEDANTA DR. B.N.K. SHARMA

- **Dr. D. N. Shanbhag**

If a jury is asked to decide the Dvaita Scholars of 20th century, there will emerge the unanimous verdict that he is Dr. B.N.K. Sharma. If a panel of experts is appointed to discover the Research Scholars who worked with a zeal of 'one life, one mission' to vindicate the great Madhvāchā rya and his doctrines, there will come out only one name and that is, Dr. B.N.K. Sharma. If contemporary writers on Indian Philosophy were asked to highlight a writer of convincing, authentic and well-documented works in English on Dvaita Vedā nta, again the light will concentrate on only Dr. B.N.K. Sharma. Whom should a truth-seeker in this world, approach to know even the subtlest details of Dvaita Vedā nta ? The reply will be Dr. B.N.K. Sharma. He embodies in himself the Encyclopaedia of Dvaita Vedā nta.

The moot question arises : "Who is this Dr. B.N.K. Sharma ?" Let those worthies who have known him personally and through his voluminous works speak out their estimate of the person.

H.H. Sri Vishvesha Tirtha Swā miji of Sri Pejawar Matha, Udupi, has blessed Dr. Sharma addressing him directly : "Till now no one has done so much service to Dvaita Vedā nta through the English language, as you have done, during the last half a century. Your name will live for ever in the history of Dvaita Siddhā nta. May Sri Hari and Vā yu enable you to render still greater service and work in the field.'

Sri R.R. Diwakar, former Governor of Bihar and Chairman, Gandhi Peace Foundation, New Delhi congratulated Dr. Sharma : "I congratulate you on the comparative and comprehensive study of the Dvaita Vedā nta. You have paid back, with compound interest, the debt you owed to the great Jagadguru Srimad Ānandatīrtha Bhagavatpā dā chā rya and at the same time freed yourself from the debt of the Rsis by your monumental works. Very few have the good fortune to achieve so much in their lives.'

Foreign scholars : Prof. Jose Pereira, Dept. of Philosophy, Fordham University, Bronx, NY (USA) and Prof. L. Stafford Betty, Dept. of Religion and Philosophy, California State College, Backersfield have admitted that they realised the truth of Madhva's thought and that they received encouragement from Dr. Sharma to propagate it.

Prof. Karl H. Potter, Chief Editor, Encyclopaedia of Indian Philosophies, Washington, is quite candid : "Dr. Sharma has provided what only a master teacher can provide. We philosophers are much in Dr. Sharma's debt, for he has managed almost alone to explain the intricate analysis of Madhva and his successors so that we can appreciate their profundity."

The Academic Career of Dr. B.N.K. Sharma

Now we can consider, in brief, Dr. B.N.K. Sharma's biography. He was born on 9th June 1909 and began his literary career at the early age of 22; he began to write research articles on topics related to Madhva's Dvaita Vedā nta in 1931 itself. He has an illustrious family background. He hails from a scholarly family of traditional stalwarts who were honoured as Royal Pandits at the court of former Cochin State. The foundations of Dr. Sharma's traditional scholarship in Sanskrit Literature and Sā stras were firmly laid by his maternal grandfather Kochi Madhvarā yā cā rya and later by renowned Pandit of Kumbhakonam (Tamilnadu) Sri M. Rama Rao. At Kumbhakonam itself, he completed his High school and college studies upto Intermediate Examination in Arts securing a I class. Later he joined Presidency College, Madras (now Chennai) for his Honours course in Sanskrit (1928-31), which he passed in High II class with Nyā ya-Vaisesika and Comparative Philology (Indo-European) as special subjects.

Then started his teaching and research career. He served at the Annamalai University as Lecturer in Sanskrit from 1931-42. Then for six years he was the Principal of the prestigious Sanskrit College of Tiruvaiyaru. From 1948 to 1953, Dr. Sharma served in various capacities as Research scholar at Visvesvaranand Vedic Research Institute in Punjab; Principal, Sanskrit College Udupi; Principal, Kanara College (now Dr. A.V. Baliga College of Arts & Science) Kumta; Honorary Prof. of Sanskrit, K.E. Board's College (now J.S.S. College) Dharwad. Finally in 1953, he migrated to Mumbai to join as Professor and Head of the Dept. of Sanskrit and Ardhamagadhi at the Ruparel College. where he served upto his retirement in 1969. During this long career he secured the Ph.D. degree (Sanskrit) of the Madras University (1948) and the D.Litt. degree (Philosophy) of the Bombay University (1968).

Then onwards Dr. Sharma had ample time to devote all his energy towards contributing substantial works on Dvaita Vedānta. One such work is "The Brahmasū tras and Their Principal Commentaries (A Critical Exposition)." It was the outcome of a 5-year tenure UGC Research Project undertaken by him. This monumental work brought universal acclaim to Dr. Sharma. The high worth of this work, published in three volumes can be known from a portion of 'Editorial Preface' of Dr. J.H. Dave, Hon. Director, Bharatiya Vidya Bhavan, Mumbai, its first publishers. Dr. Dave contends:

"We are happy to bring out the third volume of Dr. B.N.K. Sharma's vigorous and animated study of the Brahmasū tras and their Principal Commentaries of the three famous schools of Vadānta with the full complement of their respective commentarial literature, in depth. It places before the world of scholars here and abroad, the most detailed and penetrating study of the subject that has

been carried out since George Thibaut's first analysis and comparison of topics and their interpretation in the Bhā syas of Samkara and Rā mā nuja in 1890, followed three decades later by the Indian Scholar Dr. V.S. Ghate, widening the area of inquiry to include the outlines of the Bhā syas of Nimbā rka, Madhva and Vallabha.

"After a gap of more than half a century, Dr. B.N.K. Sharma, who is an eminent Professor of Sanskrit brought up in the best traditions of ancient and modern scholarship and is the most renowned contemporary scholar and writer of the Madhva Sampradā ya, has entered the field and has enlivened the study of the Sū tras and their commentaries with this magnum opus.

'There is no doubt that Dr. Sharma's work ushers in a new genre of creative and critical literatures in lively English on the fascinating yet the most difficult subject of the Brahmasū tras and their famous commentaries by the renowned Ā chāryas and their eminent followers. His work has gone beyond all the earlier ones on the subject in any modern Indian or foreign language including English, in its scope, range and depth and attention to significant details. It is bound to remain a standard work of study and reference and an indispensable guide and aid to higher studies in Vedā nta for several years to come.

"I congratulate Dr. Sharma on his brilliant achievement."

Really, the estimate of Dr. Sharma's all works has been laid bare here by Dr. Dave.

The world of scholars and truth-seekers has noted that the research-based literary activity of Dr. Sharma, spread through a long period of more than seventy years, is concentrated on vindicating tenets of Madhva's Dvaita Vedānta. Why is it so? What prompted him to devote all his time and energies towards this one goal? The motivation sprouted at the Presidency College, Madras. As a sincere and keen student, he was attracted towards the works of reputed Western scholars like Keith, Macdonell and Schrader, and of Indian stalwarts like Radhakrishnan. He admired their profound scholarship and captivating style. But he was dismayed to see that works on Indian Philosophy by both Western and Indian scholars had done scant justice to Madhva's Dvaita School of Vedā nta, while dealing with diffrent schools of Vedā nta, a prominent branch of Indian Philosophy. These several authors were not particular in projecting a true picture of the Dvaita Vedā nta. They were not ready to accept Madhva as a standard philosopher. They just dismissed his doctrines as sectarian belonging to the religious history of India than to the philosophical one. This attitude of those writers was sufficient to instigate and motivate Dr. Sharma to devote all his studies to highlight Madhva's real philosophical worth. It became his life-mission. To-day at this very ripe age of 96, he enjoys the satisfaction of having completed his life-mission in all aspects, in spite of various odds and obstacles, Indeed, very few are lucky to enjoy such contentment in their old age!

Academic Laurels

Dr. Sharma has been honoured not only by the revered Heads of several Mathas, but also by the Central Sahitya Academy Award (1963), The award of the President of India for Eminent Sanskrit scholars in 1992, the Govt. of Maharashtra Award in 1993, and the first Vidyāmānya Praśasti of one Lakh rupees of the Purnaprajna Pratisthāna by Śrī Visvesa tīrtha Svāmiji of Pejawar Math, Udupi, in 1996. On 13.11.1999 he was honoured with the title of "Mahā mahopā dhyāya" by the Rashtriya Sanskrit Vidyapitha, Tirupati. Besides, Dr, Sharma was awarded the Vyāsa Pitha Praśasti (Kurnool) in 2000, the Vyāsa Madhva Sevā Praśasti (Bangalore) on 16.06.2002, The Satyātma Convention Honour (Mumbai) in 2002, Paryā ya Krsna Matha Āsthāna Vidvān Praśasti (Udupi) on 14.09.2003, M/s. Motilal Banarsidass Centenary Award (Chennai) on 16.09.2003, the Maharashtra State Kannadigas' Literary Conference Award (Mumbai) on 02.05.2004, and the latest the Śri Rā ghavendra Anugraha Praśasti of Rs. One Lakh at Mantralaya on 31.08.2004.

In the course of his long academic career, he encouraged a large number of students who later occupied distinguished academic positions and made distinct contribution to the advancement of knowledge. Among these, Prof. C.S. Venkateswaran joined the Annamalai University as a lecturer and rose to the position of Prof. and Head of the Department. It was a time when the Sanskrit studies were put on the back seat in that university and did not receive any encouragement. However it was his patience and perseverence that sustained the Sanskrit Department. It was closed after his retirement.

Prof. K.T. Pandurangi was his student at Annamalai University between 1940 & 1942. At that time he was studying Pūrva Mīmāmsā. Dr. Shrama inspired him to study and undertake research in Dvaita Vedanta. It is well known that Prof. Pandurangi devoted the whole life for Research and publication in Dvaita Vedanta and Pūrvamīmāmsā. He received encouragement and guidance from Dr. Sharma all along his academic cereer with great humility.

The present writer *Mādhvavedānta-bhūṣaṇa* Dr. D.N. Shanbhag who was a student of both Prof. K.T. Pandurangi and Dr. B.N.K. Sharma at M.A. and Ph.D. respectively was inspired by Dr. Sharma to undertake research in Dvaita Vedanta. **The entire credit of research and publications made by him goes to Dr. Sharma only.** Dr. Sharma's devoted son and student Dr. S. K. Bhavani rose to become the HOD of Sanskrit & Principal in one of Mumbai's prestigious Colleges and taught P. G. Classes at Mumbai University apart from publishing a standard work on *Bhagavadgita.*

WHAT IS EXCEPTIONAL ABOUT DR. B. N. K. SHARMA ?

- N. S. Chakrapani

1. Certainly there are a number of erudite scholars who have written on Dvaita school of vedanta. Dr. Sharma's works has exceptional features and on this account he is unusually different in many respects. Well, if we should see two different persons on two different occasions at two different places we may not be able to say which one of them is taller than the other. Yet if we should see them at the same time, within seconds we can determine.

2. In his works Dr. Sharma juxtaposes all relevant portions of other schools of thinking side by side with dvaita portion on the same topic. Further, all that has been said on the same topic in dvaita literature is brought into focus. This brings into focus validity related to topic and the reader can determine for himself the import of the topic. His monumental work *Brahmasutras and Their Principal Commentaries*running into three volumes thus reduces time needed to study the critical points of differences among other schools and gains attention from start itself. Compared to this it may take lot more time to gain some mastery over the subject and not sure of having considered all related matter. For example, in fifth sutra why ashabdam cannot refer to pradhana is some what obscure. On this topic he mentions *tatvapradipa* how ashabdam is not acceptable either to sutrakara or to sankhya with good reasons.

3. While bheda is an important tatva in dvaita school, what about observations of Chitsukha who logically, categorically, convincingly deduces that bheda is illusory? And more important how Vyasatirtha left it out to contend where it needed to be contended ? It is here you can see Dr. Sharma raising to occasion. If concept of visesha is not accepted it amounts to saying that when a pot is made are you also making countless differences. In normal schooling of Vedanta Chitsukha does not seem to be mentioned at all !

4. S. N. Dasgupta in his six - volume *Indian Philosophy*, has dealt with dvaita school also. Admittedly he did not expect that so much is needed to be said about dvaita. One complete volume is devoted to *Nyayamruta* except a few pages. He records that on account of his failing health he is not able to do justice to this volume. After this we did not have any work covering*Nyayamruta*. Dr. Sharma fills up this gap in his *Advaitasiddhi vs Nyayamruta*correcting. Dasgupta on many points. Further and more important he has

included the great Tarangini Ramacharya explaining clearly how *tarangini* has answered all points raised by the celebrated Madhusudana Sarasvati.

5. Dr. Sharma's work on *Brihadaaranyaka* Upanishad highlights Yajnavalkya Maitreyi dialogues and particularly Maitreyi's persistent questioning which finally leads Yajnavalkya to pronounce that Brahman is realisable. However, he has touched on this many times in his other works also.

